ಕರ್ನಾಟಕ ಸರ್ಕಾರ

ಕನ್ನಡ ಭಾರತಿ- ೫



ಐದನೆಯ ತರಗತಿ

5

ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯ ಹೇ ।
ಭಾರತ ಭಾಗ್ಯ ವಿಧಾತಾ ॥
ಪಂಜಾಬ ಸಿಂಧು ಗುಜರಾತ ಮರಾಠಾ ।
ದ್ರಾವಿಡ ಉತ್ಕಲ ವಂಗಾ ॥
ವಿಂಧ್ಯ ಹಿಮಾಚಲ ಯಮುನಾ ಗಂಗಾ ।
ಉಚ್ಛಲ ಜಲಧಿ ತರಂಗಾ ॥
ತವ ಶುಭ ನಾಮೇ ಜಾಗೇ ।
ತವ ಶುಭ ಆಶಿಷ ಮಾಗೇ ।
ಗಾಹೇ ತವ ಜಯಗಾಥಾ ॥
ಜನಗಣ ಮಂಗಳದಾಯಕ ಜಯ ಹೇ ।
ಭಾರತ ಭಾಗ್ಯ ವಿಧಾತಾ ॥
ಜಯ ಹೇ ಜಯ ಹೇ ಜಯ ಹೇ ।
ಜಯ ಜಯ ಜಯ ಜಯ ಹೇ ॥

ಕರ್ನಾಟಕ ಸರ್ಕಾರ
ಡಿ.ಎಸ್.ಇ.ಆರ್.ಟಿ. (ಪಠ್ಯಪುಸ್ತಕ ವಿಭಾಗ)

ಕನ್ನಡ ಭಾರತಿ–೫

ಐದನೆಯ ತರಗತಿ

ಜಂಟಿ ನಿರ್ದೇಶಕರು (ಮುದ್ರಣ), ಕರ್ನಾಟಕ ಸರ್ಕಾರದ ಪಠ್ಯಪುಸ್ತಕ ಮುದ್ರಣಾಲಯ, ಮೈಸೂರು–570 009
ಇವರ ಪರವಾಗಿ ನಿರ್ವಾಹಕರು, ಭಾರತ ಸರ್ಕಾರದ ಪಠ್ಯಪುಸ್ತಕಗಳ ಮುದ್ರಣಾಲಯ,
ಮೈಸೂರು–570011 ರವರಿಂದ ಮುದ್ರಿತವಾಗಿದೆ.

ಈ ಪಠ್ಯಪುಸ್ತಕ ನಿರ್ಮಾಣ ಸಮಿತಿ

---

1. ಪ್ರೊ. ಜಿ. ವೆಂಕಟಸುಬ್ಬಯ್ಯ ... ಅಧ್ಯಕ್ಷರು
2. ಶ್ರೀ ಸಿಂಪಿಲಿಂಗಣ್ಣ ಚಡಚಣ ... ಸದಸ್ಯರು
3. ಶ್ರೀ ಅಕ್ಬರ್ ಅಲಿ ... ಸದಸ್ಯರು
4. ಶ್ರೀ ಪಿ. ಎಂ. ಗಲಗಲಿ ... ಸದಸ್ಯರು
5. ಶ್ರೀ ವರಾಹ ಮೂರ್ತಿ ... ಚಿತ್ರಕಾರರು

ಈ ಪಠ್ಯಪುಸ್ತಕವನ್ನು ರಚಿಸಲು ನೆರವಾದವರೆಲ್ಲರಿಗೂ ವಂದನೆಗಳು

ಪಠ್ಯ ಪುಸ್ತಕ ನಿರ್ದೇಶಕರು.

ಪರಿವಿಡಿ

ಗದ್ಯಗಳು

ಪಾಠ ಸಂಖ್ಯೆ			ಪುಟ ಸಂಖ್ಯೆ
1.	ನಮ್ಮ ಊರು	....	1
2.	ಮನೆ–ಮನೆತನ	....	4
3.	ನಾನು ಕಂಡ ಪಂಚಾಯತಿ	....	8
4.	ಒಂದು ಪತ್ರ—ಶಾಲೆಯನ್ನು ಕುರಿತು	...	13
5.	ಜೋಕಾಲಿ ಹಬ್ಬ	....	16
6.	ಶ್ರೀರಂಗಪಟ್ಟಣ	....	20
7.	ಜೇನುಗೂಡು	....	24
8.	ನವರಾತ್ರಿ	....	27
9.	ಲಾಲಬಹಾದ್ದೂರ ಶಾಸ್ತ್ರಿ	....	30
10.	ಸಾಮ್ರಾಟ ಅಶೋಕ	....	34
11.	ಕಾಡು	...	40
12.	ಹುಲಿ	....	44
13.	ಅಬ್ರಹಾಂ ಲಿಂಕನ್	....	47
14.	ಚಕ್ರವ್ಯೂಹ	....	50
15.	ಬಾಹುಬಲಿ	....	54
16.	ಬಂಡಿಹಬ್ಬ	....	59
17.	ಕಾಳೀನದೀ ಯೋಜನೆ	....	64
18.	ಚಿನ್ನದ ಅಡಿಗೆ	....	66
19.	ಬಹುರೂಪಿಗಳು	....	73
20.	ಮಹರ್ಷಿ ಮತ್ತು ನಾಯಿ	...	77
21.	ನವಿಲು	....	82
22.	ಒಂದು ಪತ್ರ—ಬೀದರಿನ ಸಂದರ್ಶನ	....	85
23.	ಭಾರತರತ್ನ ಸಿ. ವಿ. ರಾಮನ್	....	90
24.	ಒಗಟುಗಳು	....	94
25.	ವೀರಮಹಿಳೆ ಚಾಂದ್ ಬೀಬಿ	....	96

ಪದ್ಯಗಳು

ಪಾಠ ಸಂಖ್ಯೆ		ಪುಟ ಸಂಖ್ಯೆ
1.	ಪ್ರಾರ್ಥನೆ	 103
2.	ಸೋಮೇಶ್ವರ ಶತಕದಿಂದ	 104
3.	ಲೋಹಿತಾಶ್ವನ ಸಾವು	 105
4.	ಕರ್ಣನ ನಿರ್ಧಾರ	 108
5.	ಅತ್ತೆ-ಸೊಸೆಯರು	 111
6.	ನೂಲೊಲ್ಲ್ಯಾಕ ಚೆನ್ನೀ	 113
7.	ಪರೀಕ್ಷೆಯ ಸಮಯ	 115
8.	ಕನಸಿನೊಳಗೊಂದು ಕನಸು	... 117
9.	ನನ್ನ ಬಯಕೆ	 120
10.	ಗೆಳೆತನ	 122

೧. ನಮ್ಮ ಊರು

ಊರಲ್ಲಿ ಮನೆಮಾಡಿಕೊಂಡು ಇರುವವರೆಲ್ಲರೂ ಅದು ನಮ್ಮ ಊರು ಎಂದು ಹೇಳುತ್ತಾರೆ " ಅದು ನಮ್ಮ ಊರು, ಅದು ನಿಮ್ಮ ಊರು. ತಂತಮ್ಮ ಊರೊ ಧೀರಾ " ಎಂಬ ಕವಿವಾಣಿ ಅರ್ಥಪೂರ್ಣವಾಗಿದೆ.

ಮೊಟ್ಟಮೊದಲು. ಕೆಲವರು ತಮ್ಮತಮ್ಮ ಹೊಲಗದ್ದೆಗಳನ್ನು ನೋಡಿಕೊಳ್ಳುವುದಕ್ಕೆ ಸಮೀಪವಾದ ಮತ್ತು ಅನುಕೂಲವಾದ ಸ್ಥಳವನ್ನು ಕಂಡುಹಿಡಿದು, ಅಲ್ಲಿ ತಳ ಊರಿದರು : ಅದೇ ಊರಾಯಿತು. ಊರಿಗೊಂದು ಹೆಸರೂ ಬಂತು. ಅನುಕೂಲವಾದ ಸ್ಥಳ. ಅಂದರೆ ವರ್ಷದ ಹನ್ನೆರಡೂ ತಿಂಗಳು, ತಮಗೂ ತಮ್ಮ ದನಕರುಗಳಿಗೂ ನೀರು–ನೆರಳು ದೊರೆಯಬೇಕು. ಬೇಸಗೆ–ಮಳೆಗಾಲಗಳಲ್ಲಿ ಹವೆ ಹಿತಕರವಾಗಿರಬೇಕು. ಹಳ್ಳಕೊಳ್ಳ ತುಂಬಿಬಂದರೂ ವಸತಿ ಸುರಕ್ಷಿತವಾಗಿರಬೇಕು. ಅದೇ ನಿಜವಾದ ಊರು.

ನಮ್ಮ ದೇಶದಲ್ಲಿ ಬಹುತರ ಊರುಗಳೆಲ್ಲ ಕೃಷಿಪ್ರಧಾನವಾಗಿವೆ. ಕೆಲವು ಮಾತ್ರ ಉದ್ಯೋಗಪ್ರಧಾನವಾಗಿವೆ. ಒಕ್ಕಲುತನಕ್ಕೆ ಸಹಾಯಕವಾದ ಉದ್ಯೋಗ ಕೈಕೊಂಡ ಬಡಿಗ. ಕುಂಬಾರ. ಸಮಗಾರ. ಕಂಬಾರ ಮೊದಲಾದವರು ಆ ಊರಲ್ಲಿ ಬೀಡು ಬಿಟ್ಟು 'ನಮ್ಮ ಊರು' ಎಂದು ಹೇಳಿಕೊಳ್ಳುತ್ತಾರೆ. ಹಿರಿಯ ಗೋಿವಳನು ಊರ ಸಂರಕ್ಷಣೆಗೆ ಗೌಡನಾಗುವನು. ಅವನ ನೆರವಿಗೆ ಕುಲಕರ್ಣಿ. ಓಲೆಕಾರ. ತಳವಾರರಾಗಿ ಅವರೂ ಒಕ್ಕಲಾಗುವರು.

" ಎಲ್ಲರೂ ಮಾಡುವುದು ಹೊಟ್ಟೆಗಾಗಿ ಮತ್ತು ಗೇಣು ಬಟ್ಟೆಗಾಗಿ " ಎಂದು ಪುರಂದರದಾಸರು ಹೇಳಿಯೇ ಇದ್ದಾರೆ. ಕಾಳು–ಬಟ್ಟೆಗಳನ್ನು ಕೊಂಡು ಕೊಳ್ಳುವ ವ್ಯವಹಾರ ತಂತಾನೆ ನಡೆಯುತ್ತದೆ. ಬಿಡುವಿನಲ್ಲಿ ಒಕ್ಕಲಿಗರು ನೂತ ನೂಲಿಗೆ ಬಣ್ಣಹಾಕುವ ಬಣ್ಣಗಾರ, ಬಟ್ಟೆ ನೇಯುವ ನೇಕಾರ–ಬೇಕು. ಬಟ್ಟೆ ಮಾರುವುದಕ್ಕೆ ಶೆಟ್ಟಿ ಹುಟ್ಟಿಕೊಳ್ಳುತ್ತಾನೆ. ಉಪ್ಪು, ಎಣ್ಣೆ, ಬೆಲ್ಲ ಒದಗಿಸಲು ಬಣಜಿಗ ಸಿದ್ಧನಾಗುತ್ತಾನೆ. ಈ ಎಲ್ಲ ಸಾಮಾಜಿಕರ ಬಟ್ಟೆತೊಳೆಯಲು ಅಗಸ. ವಸ್ತ್ರ–ಆಭರಣಗಳನ್ನು ಅಣಿಗೊಳಿಸಲು ಅಕ್ಕಸಾಲಿಗ ಅಲ್ಲಿ ಮೈದೋರುವರು. ಇದೇ ಬಗೆಯಾಗಿ ಗೋಡೆ ಕಟ್ಟುವ ಉಪ್ಪಾರರು, ಕಲ್ಲು ಒದಗಿಸುವ ಒಡ್ಡರು ಊರಲ್ಲಿ ನೆಲೆಸುವರು.

ಮನೆತನಕ್ಕೆ ದೇವರ ಕೋಣೆ ಅವಶ್ಯವಾದಂತೆ. ಊರಿಗೊಂದು ದೇವಾಲಯ ಬೇಕು. ಮನೆಗೆ ಮನೆದೇವರು, ಊರಿಗೆ ಗ್ರಾಮದೇವತೆ. ಕೃಷಿಕರಿಗೆ ಮುಖ್ಯವಾಗಿ ಶ್ರಾವಣ ತಿಂಗಳಲ್ಲಿ ಜಡಿಮಳೆಯ ಕಾರಣದಿಂದ ಬಿಡುವು ಸಿಗುವುದು. ಆಗ ಪುರಾಣ. ಪುಣ್ಯಕಥೆ ಕೇಳುವುದಕ್ಕೆ ಅನುಕೂಲ. ಶ್ರಾವಣ ಸೋಮವಾರ ಗ್ರಾಮ ದೇವತೆಯ ಉತ್ಸವವನ್ನು ಪ್ರತಿಯೊಂದು ಊರವರೂ ಇರಿಸಿಕೊಳ್ಳುವರು. ಉತ್ಸವ ಎಂದಾಗ ಪಲ್ಲಕ್ಕಿ ಹೊರುವವರು, ದೀವಟಿಗೆ ಹಿಡಿಯುವವರು, ಊದುವವರು, ಬಾರಿಸುವವರು ಬೇಕು. ಅವರೆಲ್ಲರೂ ಊರವರೇ ಆಗಿದ್ದರೆ ಇನ್ನಷ್ಟು ಒಳ್ಳೆಯದು. ಗ್ರಾಮದೇವರ ಉತ್ಸವ ಅಥವಾ ಜಾತ್ರೆಯ ಕಾಲಕ್ಕೆ ಪ್ರತಿಯೊಂದು ಮನೆಯಲ್ಲಿ ಹಬ್ಬದಡಿಗೆ ಆಗಿಬಿಟ್ಟರೆ ಸಾಲದು. ರಾತ್ರಿ ಮನೋರಂಜನೆಯ ಕಾರ್ಯಕ್ರಮವೂ ಬೇಕೆನಿಸುತ್ತದೆ. ಅದಕ್ಕಾಗಿ ಊರಲ್ಲಿ ಬಯಲಾಟ, ಭಜನೆ, ಹಾಡಿಕೆ ಇವುಗಳನ್ನು ನಿರ್ವಹಿಸುವ ಮೇಳಗಳು ಹುಟ್ಟಿಕೊಳ್ಳುತ್ತವೆ.

ಒಕ್ಕಲಿಗರು ಬೆಳೆದ ಕಾಳು-ಕಡ್ಡಿ, ಬೇಸಗೆಯಲ್ಲಿ ಹೆಣ್ಣುಮಕ್ಕಳು ನೂತ ನೂಲಿನ ಕುಕ್ಕಡಿ, ಸಮಗಾರನು ಹೊಲಿದಿಟ್ಟ ಕಾಲ್ಮರೆ, ಕಮ್ಮಾರನು ಮಾಡಿದ ಬಳೆ-ಕುಡ, ನೇಕಾರನು ನೆಯ್ದ ಬಟ್ಟೆ ಮೊದಲಾದವುಗಳ ವಿನಿಮಯವು ವ್ಯವಸ್ಥಿತವಾಗಿ ಸಾಗುವುದಕ್ಕೆ ಸಂತೆ ನೆರೆಯ ತೊಡಗಿತು. ಮಕ್ಕಳಿಗಾಗಿ ಶಾಲೆ ತೆರೆಯಿತು. ಊರ ವ್ಯವಸ್ಥೆಗಾಗಿ ಗ್ರಾಮಪಂಚಾಯತಿ ರಚಿತಗೊಂಡಿತು. ಊರಿನ ಸ್ವಚ್ಛತೆ. ಬೀದಿಗಳಲ್ಲಿ ದೀಪ, ರೋಗ-ರುಜಿನಗಳ ನಿವಾರಣೆಗೆ ಆಸ್ಪತ್ರೆ ಅವಶ್ಯಕವಾದವು. ಅಭಿವೃದ್ಧಿ ಕಾರ್ಯವು ಪ್ರತಿಯೊಂದು ಗ್ರಾಮದಲ್ಲಿ ನಡೆಯಲೇ ಬೇಕಾಯಿತು.

ಎಲ್ಲ ಅಭಿವೃದ್ಧಿ ಕಾರ್ಯಗಳಿಗೆ ಊರ ಶಾಲೆಯೇ ಕೇಂದ್ರ. ಅಲ್ಲಿ ಒಂದಿಷ್ಟು ತಿಳಿವಳಿಕೆಯಿದೆ; ಸಾಕಷ್ಟು ಉತ್ಸಾಹವಿದೆ, ಸಮಯವೂ ಇದೆ. ಊರ ಮಕ್ಕಳೆಲ್ಲ ಸೇರಿರುವ ಶಾಲೆಯ ಚಟುವಟಿಕೆಗಳಿಗೆ ಪಾಲಕರ ಸಮ್ಮತಿ ಇದ್ದೇ ಇರುತ್ತದೆ. ಪಂಚಾಯತಿಯವರ ಬೆಂಬಲದಿಂದ ಶಾಲೆಯಲ್ಲಿ ಹಲವು ರಾಷ್ಟ್ರೀಯ ಉತ್ಸವಗಳನ್ನು ಹಮ್ಮಲು ಸಾಧ್ಯವಿದೆ.

ಊರ ಶಾಲೆಯು ಕಲಿಸಿದ್ದನ್ನು ದೃಢಗೊಳಿಸುವುದಕ್ಕೆ ಊರಿಗೊಂದು ವಾಚನಾಲಯ ಬೇಕಾಗುತ್ತದೆ. ಅದಕ್ಕೆ ಕಟ್ಟಡವನ್ನೂ ಸಹಾಯಧನವನ್ನೂ ಪಂಚಾಯತಿ ಒದಗಿಸುತ್ತದೆ. ಅದರ ಸದುಪಯೋಗವಾಗುವಂತೆ ಶಿಕ್ಷಕರು ತಮ್ಮ ಮೇಲ್ತರಗತಿಯ ವಿದ್ಯಾರ್ಥಿಗಳೊಡನೆ ಸಹಕರಿಸುತ್ತಾರೆ.

ಇಷ್ಟೆಲ್ಲ ಸೌಕರ್ಯಗಳು ಗ್ರಾಮಕ್ಕೆ ಒದಗಿಬಂದಿರುವಾಗ ಪೋಸ್ಟಾಫೀಸು ಆಗದಿರುವುದೇ ? ಬಸ್ಸುಗಳ ಓಡಾಟ ಆರಂಭಗೊಂಡು ಸಾರಿಗೆಸಂಪರ್ಕ ಸುಗಮಗೊಳ್ಳದಿರುವುದೇ ? ದೇಶದ ನಗರ ಪಟ್ಟಣಗಳಿಗೆ ಹೋಗಿಬರುವುದು ಸುಲಭವಾಗುವುದರಿಂದ, ನಿಜವಾದ ಅರ್ಥದಲ್ಲಿ ಹಳ್ಳಿಗೆ ನಾಗರಿಕತೆಯ ಸೋಂಕು ತಗಲುತ್ತದೆ. ಶತಮಾನಗಳ ಹಿಂದೆ ನಮ್ಮ ಆಂಡಯ್ಯ ಕವಿ ನುಡಿದಂತೆ— " ಇವು ಪಳ್ಳಿಗಳು. ಇವು ಪಟ್ಟಣ " ಎಂದು ವಿಂಗಡಿಸಿ ತೋರಿಸಲು ಸಾಧ್ಯವೇ ಇಲ್ಲದಾಗುತ್ತದೆ. ಆ ಕಾಲ ತೀವ್ರವೇ ಬರುವಂತಾಗಲಿ.

ಅಭ್ಯಾಸ

೧. (ಅ) ಕಠಿನ ಶಬ್ದಗಳ ಅರ್ಥ :—

ಧೀರ = ಧೈರ್ಯವುಳ್ಳವ, ಅರ್ಥಪೂರ್ಣ = ಅರ್ಥದಿಂದ ತುಂಬಿದ್ದು, ಕೃಷಿ = ಒಕ್ಕಲುತನ, ಪ್ರಧಾನ = ಮುಖ್ಯ, ಬೀಡುಬಿಡು = ವಸತಿ ಮಾಡು, ಗೋವಳ = ದನಗಳನ್ನು ಸಾಕುವವ (ಗ್ರಾಮದ ಒಬ್ಬ ಮುಖ್ಯಸ್ಥ), ಸಮಗಾರ = ಚಮ್ಮಾರ (ಚರ್ಮದ ಕೈಗಾರಿಕೆ ಮಾಡುವವ), ಕುಲಕರ್ಣಿ = ಶಾನಭೋಗ, ಓಲೆಕಾರ = ಗೌಡ, ಕುಲಕರ್ಣಿಯವರ ಕಾಗದ ಪತ್ರಗಳನ್ನು ತಲುಪಿಸುವವ, ಶೆಟ್ಟಿ = ವ್ಯಾಪಾರಿ, ಬಣಜಿಗ = ವ್ಯಾಪಾರಿ, ವಿನಿಮಯ = ಅದಲುಬದಲು (ಕೊಟ್ಟು ಕೊಳ್ಳುವುದು), ನಿವಾರಣೆ = ಹೋಗಲಾಡಿಸುವುದು, ಕಾಲ್ಮರೆ = ಮೆಟ್ಟು, ಪಾದರಕ್ಷೆ, ಕೇಂದ್ರ = ಮುಖ್ಯಸ್ಥಳ, ಹವಮ್ಮ = ಹೂಡು. ಅಭಿವೃದ್ಧಿ = ಏಳಿಗೆ, ಸಮ್ಮತಿ = ಒಪ್ಪಿಗೆ, ದೃಢಗೊಳಿಸು = ಗಟ್ಟಿಮಾಡು, ಸೌಕರ್ಯ = ಅನುಕೂಲ, ಸೋಂಕು = ಸೋಂಕುವುದು, ಶತಮಾನ = ನೂರುವರ್ಷ, ಪಳ್ಳಿ = ಹಳ್ಳಿ, ವಿಂಗಡಿಸು = ಬೇರೆಮಾಡು.

(ಆ) ನುಡಿಗಟ್ಟು :—

(೧) ಬಹಳ ಮನೆತನಗಳು ಒಕ್ಕಲುತನ ಮಾಡುತ್ತಿದ್ದ ಊರು ಕೃಷಿಪ್ರಧಾನವೆನಿಸುತ್ತದೆ.

(೨) ಬಹಳ ಮನೆತನಗಳು ವ್ಯಾಪಾರೋದ್ಯೋಗ ಮಾಡುತ್ತಿದ್ದ ಊರು ಉದ್ಯೋಗಪ್ರಧಾನವೆನಿಸುತ್ತದೆ.

(೩) ಒಕ್ಕಲುತನಕ್ಕೆ ಬೇಕಾಗುವ ಕುಡ, ಹಗ್ಗ, ರೆಂಟೆ, ಬಾರಕೋಲು ಮೊದಲಾದುವುಗಳನ್ನು ಒದಗಿಸುವ ಕುಂಬಾರ, ಮಾದಿಗ, ಬಡಗಿ ಮೊದಲಾದವರ ವೃತ್ತಿಗಳು ಒಕ್ಕಲುತನಕ್ಕೆ ಪೂರಕವಾದ ಉದ್ಯೋಗಗಳಾಗಿವೆ.

(೪) ಜನರಲ್ಲಿ ತಿಳಿವಳಿಕೆ ಹುಟ್ಟಿಸಿ ತನ್ನಿಂದ ನೆರೆಯವರಿಗೂ, ನೆರೆಯವರಿಂದ ತನಗೂ ಹಿತಕರವಾದ ಅನುಕೂಲತೆಗಳನ್ನು ಮಾಡಿಕೊಳ್ಳುವ ಏರ್ಪಾಡಿಗೆ ಅಭಿವೃದ್ಧಿ ಕಾರ್ಯ ಎನ್ನುತ್ತಾರೆ.

(೫) ಉಂಡುಟ್ಟು, ತಿಳಿವಳಿಕೆ ಪಡೆದು, ನೆಮ್ಮದಿಯಿಂದ ಜೀವನ ಸಾಗಿಸುವವರ ಸಂಬಂಧ ಉಂಟಾಗುವುದೇ ನಾಗರಿಕತೆಯ ಸೋಂಕು.

(೬) ಹಳ್ಳಿಯು ಸಹ ಪಟ್ಟಣದ ಒಂದು ಭಾಗದಂತೆ ಮಾರ್ಪಡುವ ಸೌಕರ್ಯ ಪಡೆದರೆ ಹಳ್ಳಿ, ಪಟ್ಟಣ ಎಂದು ಬಿಡಿಸಿ ತೋರಿಸಲಿಕ್ಕೆ ಆಗುವುದಿಲ್ಲ.

ವ್ಯಾಕರಣ :—

(೭) ಕನ್ನಡದಲ್ಲಿ ಎಷ್ಟು ಅಕ್ಷರಗಳಿವೆ ?

(೮) ಪಾಠದ ಮೊದಲ ವಾಕ್ಯದಲ್ಲಿರುವ ಸ್ವರ, ವ್ಯಂಜನಗಳನ್ನು ಗುರುತಿಸಿ.

(೯) ಮನೆಯನ್ನು, ಅವಳಿಗೆ, ಕೆಲವರು, ಊರುಗಳು, ಹೊಟ್ಟೆಗೆ, ಬೆಂಬಲದಿಂದ— ಈ ಪದಗಳನ್ನು ಬಿಡಿಸಿ ಪ್ರಕೃತಿ ಪ್ರತ್ಯಯಗಳನ್ನು ಬೇರೆ ಮಾಡಿ.

(೧೦) ಲಿಂಗಗಳನ್ನು ಗುರುತಿಸಿ—ಧೀರ, ನೆರಳು, ಆಗಸ, ಜಡಿಮಳೆ, ಗೋವಳ.

(೧೧) ವಚನಗಳನ್ನು ಬದಲಿಸಿ—ಬೀದಿಗಳಲ್ಲಿ, ಗ್ರಾಮಕ್ಕೆ, ಉತ್ಸವಗಳನ್ನು, ಮನೆಯಿಂದ, ಒಡ್ಡರು, ದೇಶದ.

(೧೨) ವಿಭಕ್ತಿ ಕ್ರಮದಲ್ಲಿ ಬರೆಯಿರಿ—ಊರಲ್ಲಿ, ಊರಿಗೆ, ಊರನ್ನು, ಊರಿನ ಊರಿಂದ, ಊರೇ, ಊರು.

(೧೩) ಪದಬಿಡಿಸಿ ಸಂಧಿಯ ಹೆಸರು ಹೇಳಿರಿ—ಮಳೆಗಾಲ, ದೇವಾಲಯ, ಮೈದೋರು, ಸದುಪಯೋಗ.

೨. ಪ್ರಶ್ನೆಗಳು :—

(ಅ) ಊರುಗಳ ಎರಡು ಪ್ರಕಾರಗಳು ಯಾವುವು ?

(ಆ) ಒಕ್ಕಲಿಗನನ್ನು ಆಶ್ರಯಿಸಿದ ಬೇರೆ ಉದ್ಯೋಗದವರು ಯಾರು ?

(ಇ) ಪುರಾಣ ಪುಣ್ಯಕಥೆಗಳನ್ನು ಕೇಳುವುದಕ್ಕೆ ಒಕ್ಕಲಿಗನಿಗೆ ಅನುಕೂಲವಾದ ತಿಂಗಳು ಯಾವುದು ?

(ಈ) ಜಾತ್ರೆಯ ಕಾಲಕ್ಕೆ ಹಬ್ಬಹಡಿಗೆಯೊಂದಿಗೆ ಇನ್ನೇನು ಬೇಕಾಗುತ್ತದೆ ?

(ಉ) ಅಭಿವೃದ್ಧಿ ಕಾರ್ಯಗಳಿಗೆಲ್ಲ ಊರ ಶಾಲೆಯೇ ಕೇಂದ್ರವೇಕೆ ?

---

೨. ಮನೆ-ಮನೆತನ

ಅಡವಿಯಲ್ಲಿ ಹೊಲ ಇಲ್ಲದಿದ್ದರೂ ನಡೆದೀತು. ಆದರೆ ಊರಲ್ಲಿ ಮನೆಯಿಲ್ಲದಿದ್ದರೆ ನಡೆಯುವದಿಲ್ಲ. ಮನೆ ಸ್ವಂತದ್ದು ಇರಬಹುದು: ಇಲ್ಲವೆ ಬಾಡಿಗೆಯದು ಇರಬಹುದು. ಅವೆರಡೂ ಇಲ್ಲದವರೂ ಇದ್ದಾರೆ. "ಹೇಳಿಕೊಳ್ಳುವದಕ್ಕೆ ಒಂದೂರು. ತಲೆಯ ಮೇಲೊಂದು ಸೂರು" ಇರಬೇಕೆಂದು ಕವಿಯ ಅಪೇಕ್ಷೆ.

ದಿನದ ಇಪ್ಪತ್ತುನಾಲ್ಕು ತಾಸುಗಳಲ್ಲಿ ಏಳೆಂಟು ತಾಸು ನಿದ್ರೆಯಲ್ಲಿ ಕಳೆಯುತ್ತೇವೆ. ಆ ನಿದ್ರೆಯನ್ನು ಇನ್ನೆಲ್ಲಿಯೋ ಮಲಗಿ ಸಾಧಿಸಲಿಕ್ಕಾಗದು. ಅದಕ್ಕೆ ತನ್ನದೇ ಎನಿಸಿದ ಮನೆಯಲ್ಲಿ ಒಂದು ಸ್ಥಳ ಬೇಕು. ಕೆಲಸಕ್ಕೆಂದು ಹೊರಗೆ ಹೋದರೂ ಊಟ, ವಿಶ್ರಾಂತಿ, ನಿದ್ರೆ ಇವುಗಳ ಸಲುವಾಗಿ ಮನೆಯು ಅಗತ್ಯವಿದೆ.

ಮನೆಯೆನ್ನುವುದು ಎರಡನೇ ತಾಯಿ ಇದ್ದಂತೆ. ತಾಯಿಗೆ ಬಡಕಲು ಮೈ, ಹರಕಲು ಬಟ್ಟೆ ಇರಬಹುದು. ಆದರೆ ಆಕೆ ಮಮತೆಯ ಖನಿಯೇ ಆಗಿರುತ್ತಾಳೆ. ಅದರಂತೆ, ಮನೆ ಹಳೆಯದಾದರೇನು, ಬೀಳಾದರೇನು ? ಅದು ನಮಗೆ ಆಶ್ರಯವಿತ್ತು ತಣಿಸದೇ ಇರುವುದಿಲ್ಲ. ತಾಯ ಬಸುರಿನಿಂದ ಭೂಮಿಗೆ ಬಂದಾಗ ಮೊಟ್ಟಮೊದಲು ಆಶ್ರಯ ನೀಡಿದ್ದು ಮನೆ. ಆ ಮನೆಯಲ್ಲಿಯೇ ತಾಯಿ ತನ್ನ ಎದೆಹಾಲು ಕುಡಿಸಿ, ನಮ್ಮನ್ನು ಬೆಳೆಸಿದಳು. ಅಲ್ಲಿಯೇ ಅವಳು ನಮ್ಮನ್ನು ಎಣ್ಣೆಪೂಸಿ ಎರೆದು ಮಲಗಿಸಿದಳು ; ಜೋಗುಳ ಕೇಳಿಸಿದಳು. ನಾವು ಅಳು ನುಂಗಿ ನಗಲು ತೊಡಗಿದ್ದು ಅದೇ ಮನೆಯಲ್ಲಿಯೇ.

ಮಾತು ಕಲಿಯುವುದಕ್ಕೆ ಮನೆ ನಮಗೆ ಮೊದಲಿನ ಪಾಠಶಾಲೆಯಾಯಿತು. ಅವ್ವ, ಅಪ್ಪ, ಅಕ್ಕ, ಅಣ್ಣ, ಅಜ್ಜ, ಅಜ್ಜಿ, ಅಬಚಿ, ಅತ್ತೆ, ಅತ್ತಿಗೆ ಮೊದಲಾದ ನುಡಿಗಳನ್ನು ಮನೆಯ ಪಾಠಶಾಲೆಯಲ್ಲಿಯೇ ಕಲಿತೆವು. ದನಿತೆಗೆದು ಹಾಡುವುದಕ್ಕೂ ತೊದಲು ನುಡಿಯಲ್ಲಿ ಕಥೆ ಹೇಳುವುದಕ್ಕೂ ಕಲಿತದ್ದು ಮನೆಯಲ್ಲಿಯೆ.

ಮಳೆ, ಬಿಸಿಲು, ಗಾಳಿಗಳ ತೊಂದರೆ ತಪ್ಪಿಸಿ ಕಾಪಾಡುವುದು ಮನೆ. ಜಡ್ಡು ಜಾಪತ್ರೆ ಆದಾಗ ತಂಗಲು ಎಡೆಯಿತ್ತದ್ದು ಮನೆ. ಎಳೆಯ, ಹಳೆಯ ಎಂಬ ಭೇದವಿಲ್ಲದೆ ದಿನಾಲು ಬರಮಾಡಿಕೊಂಡು ನೆಮ್ಮದಿ ನೀಡಿದ್ದು ಮನೆ. ದ್ವಿತೀಯ ಮಾತೆಯಂತಿರುವ ಮನೆಯನ್ನು ನಾವು ಪ್ರೀತಿಸದೆ ಇರಲು ಸಾಧ್ಯವಿಲ್ಲ; ಅದು ಅಚ್ಚುಕಟ್ಟಾಗುವಂತೆ ಅರಯಿಸಬೇಕು : ಕಾಲಕಾಲಕ್ಕೆ ಅದನ್ನು ತಿದ್ದಿ ತೀಡಿ ಸ್ವಚ್ಛವಾಗಿರಿಸಬೇಕು : ಶಾಂತವಾಗಿರಿಸಬೇಕು.

ಮನೆ ಒಂದಾದರೂ ಅದು ನಮ್ಮೆಲ್ಲರ ಮನೆ ಎನಿಸಿದೆ. ತಾಯಿ–ತಂದೆ, ಅಣ್ಣ–ತಮ್ಮ, ಅಕ್ಕ–ತಂಗಿ, ಅಜ್ಜ–ಅಜ್ಜಿ, ಅತ್ತಿಗೆ–ನಾದಿನಿ ಮೊದಲಾದವರು ಆ ಒಂದು ಮನೆಯಲ್ಲಿ ವಾಸಿಸುವರು. ಅವರೆಲ್ಲರಿಗೂ ಅದು "ನಮ್ಮ ಮನೆ" ಎನಿಸುವುದು. ಮನೆಯೆಂಬ ಬೊಡ್ಡೆಗೆ ಮನೆಯವರೆಲ್ಲರೂ ಟೊಂಗೆ, ಟಿಸಿಲು ಇದ್ದ ಹಾಗೆ. ಮನೆ ಮತ್ತು ಮನೆಯ ಕಲೆವಾರುಗಳ ಜನ—ಇವುಗಳ ಸೇರುವೆಗೆ ಮನೆತನವೆನ್ನುತ್ತಾರೆ.

ಮನೆತನವು ಬಾಳಿ ಬದುಕುವುದಕ್ಕೆ ಒಂದು ಉದ್ಯೋಗ ಬೇಕಾಗುತ್ತದೆ. ಕೃಷಿಕರ್ಮ ಉತ್ತಮವೆಂದೂ, ವ್ಯಾಪಾರ ಮಧ್ಯಮವೆಂದೂ ಹೇಳಲಾಗುತ್ತದೆ; ನೌಕರಿ ಕನಿಷ್ಠವೆನಿಸಿದರೂ ಅದು ಇಂದು ಆಕರ್ಷಕವಾಗಿದೆ. ಒಟ್ಟಿನಲ್ಲಿ ಮನೆತನಕ್ಕೆ ಒಂದು ಉದ್ಯೋಗ ಬೇಕು. ದುಡಿಯುವವ ಒಬ್ಬ, ಕುಳಿತು ಉಣ್ಣುವವರು ನಾಲ್ವರು. ಹೀಗಾದರೆ ಮನೆತನದಲ್ಲಿ ನೆಮ್ಮದಿ ಕಾಣಿಸದು. ಹತ್ತು ಜನ ಬದುಕುವಷ್ಟು ಗಳಿಕೆಯನ್ನು ಒಬ್ಬನೇ ಸಂಪಾದಿಸಬಹುದು. ಆದರೇನು. ಉಳಿದವರಿಗೂ ಕೆಲಸವಿರಬೇಕು. ಕೆಲಸಕ್ಕೆ ಪ್ರಾಪ್ತಿ ಕಡಿಮೆ ಇರಬಹುದು. ಆದರೆ ಮನಸ್ಸಿನ ಸಮಾಧಾನ ಹೆಚ್ಚಿನದು. ಮನೆಯವರೆಲ್ಲರೂ ಒಟ್ಟುಗೂಡಿ ಊಟಕ್ಕೆ ಕುಳಿತಾಗ ಆ ಸಮಾಧಾನ ವ್ಯಕ್ತವಾಗುತ್ತದೆ.

ಮನೆತನದೊಳಗಿನ ಜನರೆಲ್ಲರೂ ಪರಸ್ಪರ ಅವಲಂಬಿಸಿರುವಂತೆ, ಒಂದು ಮನೆತನವು ತನ್ನ ನೆರೆಹೊರೆಯ ಮನೆತನಗಳೊಡನೆ ಸಂಬಂಧಗೊಂಡಿರುತ್ತದೆ. ಆದ್ದರಿಂದ ಮನೆಯನ್ನು ಮಾತ್ರ ಅಚ್ಚುಕಟ್ಟುಗೊಳಿಸಿದರೆ ಸಾಕಾಗದು. ಸುತ್ತ ಮುತ್ತಲಿನ ಪ್ರದೇಶಗಳು ಸ್ವಚ್ಛವಾಗಿರುವಂತೆ ನೋಡಿಕೊಳ್ಳುವುದೂ ಮನೆತನದವರ ಕರ್ತವ್ಯವಾಗಿದೆ.

ವ್ಯಕ್ತಿಯು ಮನೆತನದಲ್ಲಿ ವಿಕಾಸಗೊಳ್ಳುತ್ತಾನೆ. ಅದರಂತೆ ಮನೆತನವು ಗ್ರಾಮದಲ್ಲಿ ವಿಸ್ತಾರಗೊಳ್ಳುತ್ತದೆ. ಕಾಲಿಗೆ ಮುಳ್ಳು ತಗುಲಿದಾಗ ತಲೆ ಬಾಗಿ ನಿಲ್ಲುತ್ತದೆ ; ಕೈ ಚಾಚಿ ಬರುತ್ತದೆ ; ಮುಳ್ಳು ಕೀಳುವ ಪ್ರಯತ್ನ ನಡೆಯುತ್ತದೆ. ಅದರಂತೆ ಮನೆತನ ಗ್ರಾಮಗಳಲ್ಲಿ ಅಂಥ ಸಂಬಂಧವು ಬೆಳೆದು ಬರಬೇಕು.

ನಮ್ಮ ಮನೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುವಂತೆ. ನಮ್ಮ ಊರು ಎಂದು ಅಭಿಮಾನದಿಂದ ಹೇಳಿಕೊಳ್ಳುವಂತಾಗಬೇಕು. ಹಾಗೆ ಆದಾಗಲೇ ಅದು ಸ್ವರಾಜ್ಯ. ಅಂಥ ಬಾಳುವೆಯೇ ಸ್ವಾತಂತ್ರ್ಯಕ್ಕೆ ಒಪ್ಪುವಂಥದು. ದೇಶದ ಸ್ವಾತಂತ್ರ್ಯಕ್ಕೆ ಮನೆ–ಮನೆತನಗಳ ಸ್ವಾತಂತ್ರ್ಯವೇ ತಳಹದಿ.

ಅಭ್ಯಾಸ

೧. (ಅ) ಕಠಿನ ಶಬ್ದಗಳ ಅರ್ಥ :—

ಸೂರು = ಚಪ್ಪರ. ಛಾವಣಿ : ಪ್ರಾಸು = ಹುಟ್ಟು : ಅಬಚಿ = ಅಪ್ಪನ ತಂಗಿ ಅಥವಾ ಅಕ್ಕ : ತಂಗು = ವಿಶ್ರಾಂತಿ ಪಡೆ : ದ್ವಿತೀಯಂ = ಎರಡನೇ : ತಲೆಮಾರು = ಒಬ್ಬ ವ್ಯಕ್ತಿಯ ಜೀವನ : ಆಕರ್ಷಕ = ಮನ ಸೆಳೆಯುವಂಥ : ನೆಮ್ಮದಿ = ಸುಖ ; ಪರಸ್ಪರರು = ಇವರಿಗೆ ಅವರು, ಅವರಿಗೆ

ಇವರು : ಅವಲಂಬಿಸು = ಆಧರಿಸು ; ವಿಕಾಸ = ಏಳಿಗೆ : ತಳಹದಿ = ಮೂಲ ; ಪ್ರಾಪ್ತಿ = ಗಳಿಕೆ : ಟೊಂಗೆ = ಕೊಂಬೆ ; ಟಿಸಿಲು = ಸಣ್ಣ ಕೊಂಬೆ ; ಬೊಡ್ಡೆ = ಬುಡ ; ಆರಯಿಸು = ನೋಡಿಕೋ ; ಬದ್ನುಜಾಪತ್ರೆ = ರೋಗರುಜಿನ

(ಆ) ನುಡಿಗಟ್ಟು :—

ನಿಮ್ಮೂರು ಯಾವುದು ಎಂದು ಇಲ್ಲವೆ, ನೀವು ಯಾವ ಊರಿನವರು ಎಂದು ಕೇಳಿದವರಿಗೆ ಒಂದು ಊರಿನ ಹೆಸರು ಹೇಳಬೇಕಾಗುತ್ತದೆ. ಅದೇ ಹೇಳಿ ಕೊಳ್ಳುವುದಕ್ಕೆ ಒಂದೂರು.

೨. ವ್ಯಾಕರಣ ವಿಶೇಷ—

(ಅ) ನಾಮಪದ ಭೇದಗಳು :—ಹೊಲ, ತಾಯಿ. ಗ್ರಾಮ, ಬೊಡ್ಡೆ—ಇವು ರೂಢನಾಮಗಳು.

(ಆ) ಲಿಂಗ—ವಚನ—ವಿಭಕ್ತಿಗಳು :—

ಗಂಡಸರನ್ನು ಕುರಿತ ಶಬ್ದ ಪುಲ್ಲಿಂಗ - ಅಣ್ಣ, ಅಜ್ಜ

ಹೆಂಗಸರನ್ನು ಕುರಿತ ಶಬ್ದ ಸ್ತ್ರೀಲಿಂಗ.—ಅಕ್ಕ, ಅವ್ವ

ಗಂಡಸರು ಹೆಂಗಸರನ್ನು ಬಿಟ್ಟು ಇತರ ಶಬ್ದಗಳು ನಪುಂಸಕಲಿಂಗ—ಮನೆ, ಗಾಳಿ, ಭೂಮಿ.

ಒಂದೇ ವಸ್ತುವಿನ ಸೂಚನೆಯಿದ್ದರೆ ಏಕವಚನ. ಉದಾ.—ಊರು, ಮನೆ

ಅನೇಕ ವಸ್ತುಗಳ ಸೂಚನೆಯಿದ್ದರೆ ಬಹುವಚನ. ಉದಾ.— ನುಡಿಗಳು. ಗ್ರಾಮಗಳು

ವಿಭಕ್ತಿಗಳು		ಪ್ರತ್ಯಯ	ಏಕವಚನ	ಬಹುವಚನ
೧.	ಪ್ರಥಮೆ	ಉ	ಮನೆಯು	ಮನೆಗಳು
೨.	ದ್ವಿತೀಯೆ	ಅನ್ನು	ಮನೆಯನ್ನು	ಮನೆಗಳನ್ನು
೩.	ತೃತೀಯೆ	ಇಂದ	ಮನೆಯಿಂದ	ಮನೆಗಳಿಂದ
೪.	ಚತುರ್ಥಿ	ಗೆ, ಇಗೆ, ಕ್ಕೆ, ಅಕ್ಕೆ	ಮನೆಗೆ	ಮನೆಗಳಿಗೆ
೫.	ಪಂಚಮಿ	ದೆಸೆಯಿಂದ	ಮನೆಯದೆಸೆಯಿಂದ	ಮನೆಗಳದೆಸೆಯಿಂದ
೬.	ಷಷ್ಠಿ	ಅ	ಮನೆಯ	ಮನೆಗಳ
೭.	ಸಪ್ತಮಿ	ಅಲ್ಲಿ	ಮನೆಯಲ್ಲಿ	ಮನೆಗಳಲ್ಲಿ
೮.	ಸಂಬೋಧನೆ	ಏ. ಇರಾ, ಆ. ಈ	ಮನೆಯೇ	ಮನೆಗಳೇ

(ಇ) ಸಂಧಿಗಳು :—ಒಂದು + ಊರು = ಒಂದೂರು (ಸ್ವ. ಲೋ. ಸಂ.)

ಮನೆ + ಎಂಬ = ಮನೆಯೆಂಬ (ಯಕಾರ ಆಗಮ ಸಂ.)

೨. ಪ್ರಶ್ನೆಗಳು : –

(i) ಎಲ್ಲರಿಗೂ ಮನೆಯು ಅಗತ್ಯವಿರುವುದು ಯಾವ ಯಾವ ಕಾರಣಗಳಿಗಾಗಿ ?

(ii) ಮೊದಲ ಪಾಠಶಾಲೆಯಾಗಿ ಮನೆ ನಮಗೆ ಏನು ಕಲಿಸುತ್ತದೆ ?

(iii) ದ್ವಿತೀಯ ಮಾತೆಯಂತಿರುವ ಮನೆಯನ್ನು ನಾವು ಯಾವ ಬಗೆಯಲ್ಲಿ ಪ್ರೀತಿಸಬೇಕು ?

(iv) ಕೆಲಸದಿಂದ ದೊರೆಯುವ ಪ್ರಾಪ್ತಿಗಿಂತ ಇನ್ನಾವುದು ಹೆಚ್ಚಿನದು ?

---

೩. ನಾನು ಕಂಡ ಪಂಚಾಯತಿ

[ನೆರೆಯ ಗ್ರಾಮವಾದ ಹತ್ತೂರಲ್ಲಿಯೇ ನಮ್ಮ ತಂದೆಯವರ ಪ್ರಾಥಮಿಕ ಶಿಕ್ಷಣ ಮುಗಿದದ್ದು. ಆ ಬಳಿಕ ಇತ್ತೀಚಿನ ಇಪ್ಪತ್ತೈದು ವರ್ಷಗಳಲ್ಲಿ ಅವರು ಆ ಊರಿಗೆ ಹೋಗಿರಲೇ ಇಲ್ಲ. ಈಗ, ವಿದ್ಯಾಗುರುಗಳಾದ ಗಂಗಾಧರ ಮಾಸ್ತರರ ಗದ್ದುಗೆಗೆ ಹೋಗಿ ನಮಸ್ಕರಿಸಿ ಬರಬೇಕೆಂದು ತಂದೆಯವರ ಮನಸ್ಸಾಯಿತು, ಹೋದರು. ತಿರುಗಿ ಬಂದ ಬಳಿಕ ಅವರು ನನಗೆ ಹೇಳಿದ ವಿಷಯವನ್ನೇ ಇದ್ದಕ್ಕಿದ್ದ ಹಾಗೆ, ವಿವರಿಸಿದ್ದೇನೆ—ಪ್ರಿಯದರ್ಶಿ.]

"ಪ್ರಿಯದರ್ಶೀ, ಎಲ್ಲವೂ ಬದಲಾವಣೆ ಆಗಿಬಿಟ್ಟಿದೆ. ಹತ್ತೆಯಾಗಿದ್ದ ಹತ್ತೂರು ಇಂದು. ಹತ್ತು ಊರು ಒತ್ತಟ್ಟಿಗೆ ಸೇರಿದಂತೆ ತೋರುತ್ತದೆ. ಹಾಗೆ ಆಗುವುದಕ್ಕೆ ಪಂಚಾಯತಿಯ ದಕ್ಷ ಆಳಿಕೆಯೇ ಕಾರಣವೆಂದು ತಿಳಿಯಿತು.

"ಪಂಚಾಯತಿಯ ಸರಪಂಚ ಅಂದರೆ. ಅಧ್ಯಕ್ಷ ನನ್ನ ಸಹಪಾಠಿಯಾದ ಮರಿಸಿದ್ಧಲಿಂಗಪ್ಪ. ಪೂಜಾರಿ ಮುತ್ತಣ್ಣ, ಕಂಬಾರ ರಾಮಚಂದ್ರ, ಸಮಗಾರ ಎಲ್ಲಪ್ಪ. ಉಪಾಧ್ಯರ ರಂಗಪ್ಪ. ನಾಡಗೌಡರ ಎಂಕಪ್ಪ ಮುಂತಾದ ಸದಸ್ಯರೆಲ್ಲರೂ ಗಂಗಾಧರ ಮಾಸ್ತರರ ಶಿಷ್ಯರೇ ಆಗಿದ್ದಾರೆ. ಮರಿಸಿದ್ಧಲಿಂಗಪ್ಪನಂತೂ ಅವರ ಪಟ್ಟ ಶಿಷ್ಯ. ಗಂಗಾಧರ ಮಾಸ್ತರರು ವರ್ಗದಲ್ಲಿ ಪಾಠ ಹೇಳಿದ್ದು. ಇಂದಿಗೂ ನನ್ನ ಚಿತ್ತದಲ್ಲಿ ಹಸುರಾಗಿಯೇ ಉಳಿದಿದೆ. ಕರ್ನಾಟಕವ ಚರಿತ್ರೆಯಲ್ಲಿ ಬೆಳಗಿದ ಮಂತ್ರಿಗಳ ಕಥೆಯಂತೂ ನಮ್ಮನ್ನು ಸಂಪೂರ್ಣ ಬದಲಿಸಿಯೇ ಬಿಟ್ಟಿತು.

"ಸಾವಿರ ವರ್ಷ ಗತಿಸಿದರೂ ಅಚ್ಚಳಿಯದೆ ನಿಂತ ಗೋಮಟೇಶ್ವರ ಮೂರ್ತಿಯನ್ನು ಕೆತ್ತಿಸಿದ ಚಾವುಂಡರಾಯ. ಸಕಲ ಜನರಿಗೆ ಲೇಸನೆ ಬಯಸಿದ ಭಕ್ತಿ ಭಂಡಾರಿ ಬಸವಣ್ಣ. 'ರಾಜ್ಯವು ವಿರೂಪಾಕ್ಷ ದೇವನದು' ಎಂದು ಧಾವನಿಗೆ

ಖಂಡಿತವಾಗಿ ತಿಳಿಸಿ ಕೊಟ್ಟ **ವಿದ್ಯಾರಣ್ಯಸ್ವಾಮಿ**. ಬಡತನದಲ್ಲಿಯೇ ಮಂತ್ರಿ ಪದವಿಯನ್ನು ನಿರ್ವಹಿಸಿದ **ಮಹಮ್ಮದ್ ಗವಾನ**. ಬ್ರಿಟಿಷರ ವಿಶ್ವಾಸಕ್ಕೂ, ದೇಶೀಯ ರಾಜರ ನಂಬಿಗೆಗೂ ಪಾತ್ರನಾದ **ಪೂರ್ಣಯ್ಯ**. ಮಾದರಿಯ ಮೈಸೂರು ರಾಜ್ಯ ಕಟ್ಟಿದ **ವಿಶ್ವೇಶ್ವರಯ್ಯ** ಇವರಂತೆ ಶಾಶ್ವತ ಕಾರ್ಯ ಮಾಡಿ. ನಿಷ್ಕಳಂಕ ಕೀರ್ತಿ ಗಳಿಸಬೇಕೆಂಬ ಲವಲವಿಕೆ ಆ ಗೆಳೆಯರಲ್ಲಿ ಅಂದೇ ಮೊಳೆಯಿತು. ಅದಿಂದು ಮರವಾಗಿ ನಿಂತಿದ್ದು ಕಂಡು ಬರುತ್ತಿದೆ.

"ಇತ್ತೀಚಿನ ಹತ್ತೆಂಟು ವರ್ಷಗಳಿಂದ ಪಂಚಾಯತಿಯನ್ನು ಗಂಗಾಧರ ಮಾಸ್ತರರ ಶಿಷ್ಯವರ್ಗವೇ ನಿರ್ವಹಿಸುತ್ತ ಬಂದಿದೆ. ಅವರೆಲ್ಲರಿಗೂ ಹೊಲದಿಂದ ಸಾಕಷ್ಟು ಉತ್ಪನ್ನ ಬರುತ್ತದೆ. ಮನೆತನವನ್ನು ನೋಡಿಕೊಳ್ಳುವುದಕ್ಕೆ ಸಮರ್ಥರಾದ ಅವರ ಬಂಧುಗಳು ಇದ್ದಾರೆ. ಇವರನ್ನು ಆ ಬಂಧುಗಳು ಸಂತೋಷ ಪೂರ್ವಕವಾಗಿ ಪಂಚಾಯತಿಗೆ ನೀಡಿದ್ದಾರೆ. ಆದ್ದರಿಂದ ಮರಿಸಿದ್ಧಲಿಂಗಪ್ಪ ನಾಗಲಿ ಅವನ ಸ್ನೇಹಿತರಾಗಲಿ ತಮ್ಮ ಮನೆಯತ್ತ ಹೊರಳಿ ನೋಡುವ ಕಾರಣವೇ ಇಲ್ಲ. ತಮ್ಮ ಮನೆತನದ ತಲೆಗೆ ಹೂ ತರುವಂಥ ಪಂಚಾಯತಿಯ ಕಾರಭಾರವೇ ಅವರ ಜೀವದುಸಿರಾಗಿದೆ.

"ಮರಿಸಿದ್ಧಲಿಂಗಪ್ಪ ನನ್ನನ್ನು ಅಕ್ಕರೆಯಿಂದ ಬರಮಾಡಿಕೊಂಡು ಒಂದೆರಡು ದಿವಸ ತನ್ನಲ್ಲಿದ್ದೇ ತೀರಬೇಕೆಂದು ಛಲ ಹಿಡಿದನು. ನಾನೂ ಆತನ ಸ್ನೇಹಕ್ಕೆ ಸೋತೆನು. ಒಂದೆರಡು ದಿನಗಳಲ್ಲಿ ಹತ್ತೂರಿನ ಬೆಳವಣಿಗೆಯ ವಿಭಾಗಗಳನ್ನೆಲ್ಲ ತೋರಿಸಿಕೊಟ್ಟನು—

'ಅದೊ! ಸಂತೆ ನೆರೆಯುವ ಸ್ಥಳ. ಹಚ್ಚಿ ಬೆಳಸಿದ ಸಾಲು ಗಿಡಗಳಿಂದ ದಟ್ಟವಾದ ನೆರಳು ಹಾಸಿದೆ.

'ಇದೋ! ಶಾಲೆಯ ಕಟ್ಟಡ. ಎಲ್ಲ ತರಗತಿಗಳಿಗೂ ಒತ್ತಟ್ಟಿಗೇ ಸ್ಥಳ ಮಾಡಿಕೊಟ್ಟಿದೆ. ಅದು H ಆಕಾರದಲ್ಲಿದೆ. ಈ ಆಕಾರದ ಕಟ್ಟಡಗಳಿಗೆ ಹೆಚ್ ಆಕಾರದ ಕಟ್ಟಡವೆನ್ನುವರು. ಮಂಗಳೂರು ಹೆಂಚು ಹೊದಿಸಿದೆ.

'ಆಗೋ ಅಲ್ಲಿ ಮಾಧ್ಯಮಿಕ ಶಾಲೆಯನ್ನು ಕಟ್ಟುವ ಕೆಲಸ ಮುಗಿಯ ಬಂದಿದೆ. ಅದರ ಬದಿಯಲ್ಲಿರುವ ಕಟ್ಟಡವೇ ವಾಚನಾಲಯಕ್ಕಾಗಿ ಸಜ್ಜು ಗೊಂಡಿದೆ.

'ಪಂಚಾಯತಿಯ ಸದಸ್ಯರು ಒಂದೊಂದು ಹೊಣೆಯನ್ನು ವಹಿಸಿಕೊಂಡೇ ಬಿಟ್ಟಿರುವರು. ಶಾಲಾ ಗುರುಗಳು ನೀಡುವ ಸೇವಾಸಹಾಯದಿಂದ ಅಕ್ಷರ

ಪ್ರಚಾರ ಕಾರ್ಯ ನಡೆದಿದೆ. ನಮ್ಮೂರಲ್ಲಿ ನೂರಕ್ಕೆ ಅರವತ್ತರಂತೆ ಅಕ್ಷರವಂತರೆಂದು ಲೆಕ್ಕ ಹೊರಟಿದೆ.

'ಕುಡಿಯುವ ನೀರಿಗಾಗಿ ನಲ್ಲಿಯ ಏರ್ಪಾಡು ನಡೆದಿದೆ. ಹಳ್ಳದ ಬದಿಯಲ್ಲಿ ದೊಡ್ಡ ಭಾವಿಯನ್ನು ಕಟ್ಟಿಸಲಾಗಿದೆ. ಗುರುಗಳ ಗದ್ದುಗೆಯ ಬಳಿಯಲ್ಲಿ ಎತ್ತರವಾಗಿ ಕಾಣಿಸುವುದೇ ನೀರಿನ ಟಾಕಿ'

"ನಾನು ಕೇಳಿದೆ—'ಆಡೆತಡೆಗಳೂ ಸಾಕಷ್ಟು ಬರುತ್ತಿರಬಹುದಲ್ಲ!"

'ಬಾರದೆ ಏನು ? ಮುಂಚಿನ ಪಂಚಾಯತಿಯವರ ಆಡಳಿತದ ಕಾಲಕ್ಕೆ. ಅಂಗಡಿಸಾಲಿನ ಶೆಟ್ಟರೆಲ್ಲ ತಮ್ಮ ತಮ್ಮ ಅಂಗಡಿಯ ಮುಂದೆ ಎರಡೆರಡು ಅಡಿ ಸ್ಥಳವನ್ನು ಆಶ್ರಯಿಸಿ ಕಟ್ಟೆ ಕಟ್ಟಿಕೊಂಡಿದ್ದರು !'

'ಅದೇ ಮಾಸ್ಟರ್ ಪ್ಲ್ಯಾನ್ ಎಂದು ತೋರುತ್ತದೆ. ಅದನ್ನು ಹೇಗೆ ಬಗೆಹರಿಸಿದಿರಿ'.

'ಮೊದಲು ನಮ್ಮ ನಮ್ಮ ಮನೆಯ ಮುಂದಿನ ಆಕ್ರಮ ಆಕ್ರಮಣಗಳನ್ನು ಕಿತ್ತಿಹಾಕಿದೆವು. ಅದರಿಂದ ಉಳಿದವರು ತಲೆದೂಗಿ ಸಹಕರಿಸಬೇಕಾಯಿತು. ಗುರುಗಳ ಗದ್ದುಗೆಗೆ ಹೋಗಿ ನಮಸ್ಕರಿಸಿ ಬಂದೋ. ಆಕ್ರಮಣಕಾರರನ್ನು ಎದುರಿಸಿದ್ದೆವು.'

'ಅಧಿಕಾರಕ್ಕಾಗಿ ಕರುಬುವ ಜನರು ಇಲ್ಲವೇ?'

'ಮನೆಯ ಕಿಚ್ಚು ಮನೆಯನ್ನು ಸುಡುವುದಲ್ಲದೆ. ನೆರೆಮನೆಯನ್ನು ಸುಡಲಾರದು. ಮನೆ ಪಟ್ಟಿಯ ವಸೂಲಿ ನಮ್ಮ ಮನೆಯಿಂದಲೇ ಆರಂಭ. ರಾಷ್ಟ್ರೀಯ ಹಬ್ಬದ ದಿವಸ ಊರ ಸ್ವಚ್ಛತೆಗಾಗಿ ಪಂಚಾಯತಿಯವರೇ ಪೊರಕೆಯನ್ನು ಹಿಡಿದುಕೊಂಡು ಮುಂದಾಗುವೆವು. ಗುರುಗಳು ಹಗಲೆಲ್ಲ ಹೇಳುತ್ತಿದ್ದ ಬೀಜಮಾತು ನಿನಗೂ ನೆನಪಿರಬಹುದು—ಕಚ್ಚೆ-ಕೈ-ಬಾಯಿಗಳು ಇಚ್ಚೆಯಲ್ಲಿ ಇದ್ದಿಹರೆ। ಅಚ್ಯುತನಪ್ಪ ಅಜನಪ್ಪ । ಲೋಕದಲಿ ನಿಶ್ಚಿಂತನಪ್ಪ ಸರ್ವಜ್ಞ ।'

'ಎಲ್ಲರೂ ಸಾಧಿಸಬೇಕಾದ ವಿಷಯವಿದು. ಇರಲಿ. ನೀವು ಸಹಕಾರಿ ಸಂಘದ ಪ್ರಯೋಜನ ಪಡೆಯುತ್ತಿರಬಹುದಲ್ಲವೇ?'

'ಸಾಕಷ್ಟು ಪಡೆಯುತ್ತಿದ್ದೇವೆ. ಸೋಸಾಯಿಟಿಯಿಂದ ಆಹಾರಧಾನ್ಯ. ಸಕ್ಕರೆ. ಚಿಮಣಿಎಣ್ಣೆ ತಂದು ಹಗಲಿರುಳೆನ್ನದೆ ಎರಡು ಮೂರು ಸ್ಥಳಗಳಲ್ಲಿಟ್ಟು ವಿತರಣಿ ಮಾಡುತ್ತೇವೆ. ಆದರೆ ಎಲ್ಲರಿಗೂ ಸಮಾಧಾನ ಪಡಿಸುವುದು ಕಠಿಣ. ಅಂಥ ದಾರಿಯನ್ನು ಹುಡುಕುತ್ತಿದ್ದೇವೆ.'

' ಕುಡುಕರನ್ನು ಹೇಗೆ ವಿಶ್ವಾಸದಲ್ಲಿ ತಂದಿರಿ ? '

' ಅದು ಇನ್ನುಮೇಲೆ ಮಾಡಬೇಕೆಂದು ಇಟ್ಟುಕೊಂಡ ಕೆಲಸ. ಗುರು ಬುದ್ಧಿ ಕೊಟ್ಟಂತೆ ಮಾಡುತ್ತಾ ಸಾಗಿದ್ದೇವೆ.'

' ಬಹಳ ಸಂತೋಷವಾಯಿತು. ಮಾದರಿಯ ಪಂಚಾಯತಿ ' ಎಂದೆ ನಾನು.

ಮರಿಸಿದ್ಧಲಿಂಗಪ್ಪನ ಪಂಚಾಯತಿಯನ್ನು ಕನಸಿನಲ್ಲಿ ಕಂಡಂತಾಯಿತು. ಪಂಚಮುಖದಲ್ಲಿ ಪರಮೇಶ್ವರನನ್ನು ಕಾಣಲು ಸಾಧ್ಯವೆನಿಸಿತು ನನಗೆ.

ಅಭ್ಯಾಸ

ಪ್ರಿಯದರ್ಶಿ ಎಂಬ ವಿದ್ಯಾರ್ಥಿಯು ತನ್ನ ತಂದೆ ಕಂಡು ಬಂದು ಹೇಳಿದ ಒಂದು ಪಂಚಾಯಂತಿಯ ಅಭಿವೃದ್ಧಿ ಕಾರ್ಯವನ್ನು ಇದ್ದದ್ದಿದ್ದ ಹಾಗೆ ತನ್ನ ಸಹಪಾಠಿಗಳಿಗೆ ಒಪ್ಪಿಸಿದ್ದಾನೆ.

೧. (ಅ) ಕಠಿನ ಶಬ್ದಗಳ ಅರ್ಥ—

ಪ್ರಾಥಮಿಕ = ಆರಂಭದ : ಗದ್ದುಗೆ = ಸಮಾಧಿ ; ದಕ್ಷ = ಸಮರ್ಥ ; ಸದಸ್ಯ = ಸಭೆಯವರಲ್ಲಿ ಒಬ್ಬ; ಪಟ್ಟಶಿಷ್ಯ = ಮುಖ್ಯಶಿಷ್ಯ ; ಲೇಸು = ಹಿತ ; ಖಂಡಿತ = ಸ್ಪಷ್ಟ ; ಶಾಶ್ವತ = ಕಡೆತನಕ ಉಳಿಯುವಂಥ ; ನಿಷ್ಕಲಂಕ = ಕುಂದಿಲ್ಲದ : ಹುಮ್ಮಸ್ಸು = ಲವಲವಿಕೆ (ಉತ್ಸಾಹ) ; ಟಾಕಿ = ತೊಟ್ಟಿ, ಟ್ಯಾಂಕ್ : ಅಡಿ = ಹನ್ನೆರಡು ಅಂಗುಲಗಳು ; ಅಕ್ರಮ = ಕ್ರಮವಿಲ್ಲದ ; ಆಕ್ರಮಣ = ಇತರರದ್ದನ್ನು ವಶಪಡಿಸಿಕೊಳ್ಳುವುದು : ಕರುಬು = ಹೊಟ್ಟೆಕಿಚ್ಚುಪಡು ; ಪೊರಕೆ = ಕಸಬರಿಗೆ ; ಅಚ್ಯುತ = ವಿಷ್ಣು; ಅಜ = ಬ್ರಹ್ಮ : ಪಂಚಮುಖಿ = ಐದು ಮುಖ, ಪಂಚರ ಮುಖ ; ವಿತರಣ = ಹಂಚುವಿಕೆ: ಚಿಮಣಿಎಣ್ಣೆ = ಸೀಮೆಎಣ್ಣೆ; ಉಪಾಧ್ಯರ = ಉಪಾಧ್ಯಾಯರ.

(ಆ) ನುಡಿಗಟ್ಟು—ಮಾಸ್ಟರ್ ಪ್ಲಾನ್ : ಯಾವ ಯೋಜನೆಯನ್ನಾಗಲಿ ಕೊನೆಯಲ್ಲಿ ಹೇಗೆ ಇರುತ್ತದೆಂಬುದನ್ನು ಗಮನಿಸಿ ಸಿದ್ಧಪಡಿಸಿದ ಯೋಜನೆ.

(1) ಹತ್ತೂರು ಹತ್ತು ಪಟ್ಟು ದೊಡ್ಡದಾಗಿದೆ ಎಂದು ಹೇಳುವ ಅರ್ಥದಲ್ಲಿ ಹತ್ತು ಊರುಗಳು ಒತ್ತಟ್ಟಿಗೆ ಸೇರಿದಂತೆ ತೋರುತ್ತದೆ—ಎಂದು ಹೇಳಲಾಗಿದೆ.

(2) ಪಂಚಾಯತಿಯ ಅಧ್ಯಕ್ಷರನ್ನೂ ಸದಸ್ಯರನ್ನೂ ಅವರ ಮನೆಯವರು ಪಂಚಾಯತಿಗೆ ನೀಡಿದ್ದಾರೆ —ಎಂದರೆ. ಅವರು ಪಂಚಾಯತಿಯ ಕಾರಭಾರವನ್ನಲ್ಲದೆ ಮನೆಯ ಕೆಲಸದಲ್ಲಿ ನೆರವಾಗಬೇಕೆಂದು ಅಪೇಕ್ಷಿಸಿಲ್ಲ ಎಂದ ಹಾಗೆ. ಅವರು ಮನೆಯ ಬಳಗದವರಲ್ಲ. ಪಂಚಾಯತಿಯ ಮಂಡಲಿ – ಎಂಬ ಅಭಿಪ್ರಾಯ.

(3) ಶಾಲೆಯು H ಆಕಾರದಲ್ಲಿದೆಯೆಂದರೆ —ಅದು ಶಾಲೆಯ ಚಿತ್ರವಲ್ಲ, ನಕ್ಷೆ.

(i) ಚಾವುಂಡರಾಯ : ಗಂಗರಾಚಮಲ್ಲನ ಮಂತ್ರಿ

(ii) ವಿದ್ಯಾರಣ್ಯ : ವಿಜಯನಗರದ ಸ್ಥಾಪಕ

(iii) ಬಸವಣ್ಣ : ವೀರಶೈವ ಮತಸ್ಥಾಪಕ

(iv) ಮಹಮ್ಮದ್ ಗವಾನ : ಬೀದರ್ ರಾಜ್ಯದ ಪ್ರಸಿದ್ಧ ಮಂತ್ರಿ

(v) ಪೂರ್ಣಯ್ಯ : ಮೈಸೂರು ರಾಜ್ಯದ ದಿವಾನ್

(vi) ವಿಶ್ವೇಶ್ವರಯ್ಯ : ಮೈಸೂರಿನ ನಾಲ್ವಡಿ ಕೃಷ್ಣರಾಜರ ದಿವಾನ್

೨. ವ್ಯಾಕರಣ ವಿಶೇಷ :—

(ಅ) ಮುಂದಿನ ಶಬ್ದಗಳನ್ನು ರೂಢ. ಅಂಕಿತ, ಅನ್ವರ್ಥಕ ಎಂಬ ಮೂರು ಗುಂಪುಗಳಾಗಿ ವಿಂಗಡಿಸಿ—ಗದ್ದುಗೆ. ಹತ್ತೂರು, ಸದಸ್ಯ, ಸಮಗಾರ, ಮೂರ್ತಿ, ಎಂಕಪ್ಪ, ಗೆಳೆಯ, ಪೂರ್ಣಯ್ಯ.

(ಆ) ಲಿಂಗವನ್ನು ಬದಲಿಸಿ ಹೇಳಿ—ಅಧ್ಯಕ್ಷ. ಗೆಳೆಯ, ಶಿಕ್ಷಕ. ಪರಮೇಶ್ವರ,

(ಇ) ಓಣಿ ಶಬ್ದವನ್ನು ವಿಭಕ್ತಿ ಕ್ರಮದಂತೆ ಎರಡು ವಚನಗಳಲ್ಲಿ ನಡೆಯಿಸಿ.

(ಈ) ಕೆಳಗಿನ ಶಬ್ದಗಳಿಗೆ, ಕಂಸದಲ್ಲಿ ಬರೆದ ವಿಭಕ್ತಿಯ ರೂಪವನ್ನು ಕೊಡಿ—ಬಾವಿಯನ್ನು (ಸಪ್ತಮಿ) ಗದ್ದುಗೆಗೆ (ಪಂಚಮಿ), ಮನೆಯಿಂದ (ದ್ವಿತೀಯೆ), ಮಾದರಿಯ (ಚತುರ್ಥಿ), ಗೆಳೆಯರಲ್ಲಿ (ಸಂಬೋಧನೆ), ಊರಿಂದ (ಪ್ರಥಮೆ).

(ಉ) ಕೆಳಗೆ ಕಾಣಿಸಿದ ಸಂಧಿಗಳಿಗೆ ಈ ಪಾಠದೊಳಗಿಂದ ಒಂದೊಂದು ಶಬ್ದವನ್ನು ಉದಾಹರಿಸಿ—ಸ್ವರಲೋಪ ಸಂಧಿ, ಗುಣಸಂಧಿ, ಯಣ್‌ಸಂಧಿ, ವಕಾರಾಗಮ ಸಂಧಿ. ಸವರ್ಣ ದೀರ್ಘಸಂಧಿ.

೩. ಪ್ರಶ್ನೆಗಳು :—

(i) ಕರ್ನಾಟಕದಲ್ಲಿ ಆಗಿಹೋದ ಆದರ್ಶ ಮಂತ್ರಿಗಳ ಹೆಸರುಗಳನ್ನು ಹೇಳಿರಿ.

(ii) ಗಂಗಾಧರ ಮಾಸ್ತರರ ಶಿಕ್ಷಣದಿಂದ ಅವರ ಶಿಷ್ಯರು ಯಾವ ನಿರ್ಧಾರ ಮಾಡಿದರು?

(iii) ಪಂಚಾಯತಿಯ ಅಧ್ಯಕ್ಷರು—ಸದಸ್ಯರು ಮೊದಲಿಗೆ ತಾವೇ ಪಾಲಿಸ ಬೇಕಾದ ನಿಯಮ ಯಾವುದು?

(iv) ಸಾರ್ವಜನಿಕ ಜೀವನ ನಡೆಸಬೇಕೆನ್ನುವವರಿಗೆ ನಿತ್ಯಬೋಧಪ್ರದವಾದ ಕವನ ಯಾವುದು?

೪. ವಿಶೇಷ ಓದು :—

ಮಹರ್ಷಿ ಟಾಲಸ್ಟಾಯ್ ಅವರ " ಮರುಳು ಮಲ್ಲೇಶಿ " ಕಥೆಯನ್ನು ನೋಡಿರಿ. ಅದು ಚಡಚಣದ ಶ್ರೀ ಅರವಿಂದ ಗ್ರಂಥಾಲಯದ ಪ್ರಕಟನೆಯಾದ " ಪವಿತ್ರಜೀವನ "ದಲ್ಲಿ ಬಂದಿದೆ.

---

೪. ಒಂದು ಪತ್ರ—ಶಾಲೆಯನ್ನು ಕುರಿತು

ಪ್ರೀತಿಯ ಕಿಟ್ಟು,

ನಮ್ಮ ಶಾಲೆಯ ಬಗ್ಗೆ ಒಂದು ಪತ್ರವನ್ನು ಬರೆಯುತ್ತೇನೆ ಎಂದು ನಾನು ನಿನಗೆ ಹೇಳಿದ್ದು ಜ್ಞಾಪಕವಿರಬಹುದು. ನೀನು ಓದಿದ ಈ ಶಾಲೆಯನ್ನು ನೀನು ಆಗಾಗ ಹೊಗಳುತ್ತಿದ್ದೆ. ಈಗ ನಾನು ಇಲ್ಲಿಗೆ ಬಂದು ಸೇರಿದ ಮೇಲೆ ನಿನ್ನ ಮಾತೆಲ್ಲ ನಿಜ ಎಂಬುದು ನನಗೆ ಗೊತ್ತಾಗುತ್ತಿದೆ. ನನಗೆ ಮನೆಗಿಂತ ಶಾಲೆಯ ಮೇಲೆ ಹೆಚ್ಚು ಪ್ರೀತಿ ಬರುವಷ್ಟು, ಅದು ಚೆನ್ನಾಗಿದೆ.

ಈಗ ಶಾಲೆಯ ಕಟ್ಟಡವನ್ನು ದುರಸ್ತಿ ಮಾಡಿದ್ದಾರೆ. ನಮ್ಮ ಮುಖ್ಯಾಧ್ಯಾಪಕರೂ, ಇತರ ಉಪಾಧ್ಯಾಯರೂ ಈ ಕಟ್ಟಡದ ಶುಭ್ರತೆಯ ಬಗ್ಗೆ ಸದಾ ಎಚ್ಚರಿಕೆ ಕೊಡುತ್ತಾ ಇರುತ್ತಾರೆ. ಶಾಲೆಯಲ್ಲಿ ಒಂದು ಕಡೆಯೂ ಕಸ ಕೊಳಕು ಇಲ್ಲ. ಶಾಲೆಯ ಸುತ್ತ ಹೂವಿನ ಗಿಡಗಳ ತೋಟವಿದೆ. ಅವು ಹೂವು ಬಿಟ್ಟಾಗ ನೋಡಲು ಎಷ್ಟು ಚೆನ್ನು ಬಲ್ಲೆಯಾ ?



ನಾವೆಲ್ಲ ಸಮವಸ್ತ್ರವನ್ನು ಧರಿಸಿ ಬರುತ್ತೇವೆ. ನಮ್ಮ ವ್ಯಾಯಾಮ ಶಿಕ್ಷಕರು ಈ ಬಗ್ಗೆ ತುಂಬ ಪ್ರೀತಿಯಿಂದ ತಿಳಿವಳಿಕೆ ಕೊಡುತ್ತಾರೆ. ನಾವೆಲ್ಲ ಒಂದೇ ರೀತಿಯ ಬಟ್ಟೆ ಧರಿಸಿ ವ್ಯಾಯಾಮ ಮಾಡುವಾಗ ನಮಗೇ ಸಂತೋಷವಾಗುತ್ತದೆ. ಕೆಲವು ವೇಳೆ ಸುತ್ತಮುತ್ತಣ ಜನರೆಲ್ಲ ಬಳಿಗೆ ಬಂದು ನೋಡುತ್ತಾ ನಿಲ್ಲುತ್ತಾರೆ. ಆಗ ನನಗೆ ತುಂಬ ಹೆಮ್ಮೆ ಎನಿಸುತ್ತದೆ. ತರಗತಿಗಳ ಒಳಗೆ ಎಲ್ಲವೂ ಅಚ್ಚುಕಟ್ಟು.

ಉಪಾಧ್ಯಾಯರು ಬಂದೊಡನೆ ತರಗತಿಯ ಎಲ್ಲ ಮಕ್ಕಳೂ ಎದ್ದು ನಿಲ್ಲುತ್ತೇವೆ. ಉಪಾಧ್ಯಾಯರು ನಮ್ಮನ್ನು ಪ್ರೀತಿಯಿಂದ ನೋಡಿ. ಕುಳಿತುಕೊಳ್ಳಲು ಹೇಳುತ್ತಾರೆ. ಆ ಮೇಲೆ ಹಿಂದಿನ ದಿನದ ಪಾಠದ ಬಗ್ಗೆ ನಾವೆಷ್ಟು ಜಾಣರೆಂಬುದನ್ನು ಪ್ರಶ್ನೆಗಳ ಮೂಲಕ ಕಂಡುಹಿಡಿಯುತ್ತಾರೆ. ಚೆನ್ನಾಗಿ ಉತ್ತರ ಕೊಟ್ಟವರಿಗೆ ಒಳ್ಳೆಯ ಪ್ರೋತ್ಸಾಹದ ಮಾತುಗಳನ್ನು ಆಡುತ್ತಾರೆ. ಅವರ ಮಾತನ್ನು ಕೇಳಿದರೆ ನಾವೆಲ್ಲ ಚೆನ್ನಾಗಿ ಅಭ್ಯಾಸ ಮಾಡಬೇಕು ಎನಿಸುತ್ತದೆ.

ನಮ್ಮ ಕನ್ನಡದ ಉಪಾಧ್ಯಾಯರ ಪಾಠದ ರೀತಿಯೇ ಚೆನ್ನು. " ಎಲ್ಲಿ, ರಾಜು ಎದ್ದು ನಿಲ್ಲು, ನೆಟ್ಟಗೆ ನಿಂತುಕೊ. ಕೈಗೆ ಪುಸ್ತಕವನ್ನು ತೆಗೆದುಕೋ, ಎರಡು ಕೈಯಲ್ಲೂ ಹಿಡಿದು ಓದು, ನಿಧಾನವಾಗಿ ಓದು, ತಪ್ಪಬೇಡ " ಎಂದು ಹೇಳಿದಾಗ, ಧೈರ್ಯವಿಲ್ಲದವರೂ ಕೂಡ ತಪ್ಪಿಲ್ಲದೆ ಓದುತ್ತಾರೆ. ಇವರನ್ನು ಕಂಡರೆ ನಮಗೆ ತುಂಬ ಪ್ರೀತಿ. ಎಲ್ಲ ತರಗತಿಗೂ ಇವರೇ ಬರಲಿ ಎನ್ನುವಷ್ಟು ಪ್ರೀತಿ. ಒಮ್ಮೆಯೂ ಅವರು ಕಠಿನವಾಗಿ ಮಾತನಾಡಿಲ್ಲ. ಆದರೂ ಯಾರೂ ಅವರೊಂದಿಗೆ ಸಲುಗೆ ವಹಿಸುವುದಿಲ್ಲ. ನಮಗೆ ಅವರಲ್ಲಿ ಗೌರವ. ಪ್ರೀತಿ.

ಮೊನ್ನೆ, ನನಗೆ ಸಭೆಯ ಮುಂದೆ ಮಾತನಾಡುವುದು ಹೇಗೆ ಎಂಬುದನ್ನು ಅವರು ಹೇಳಿಕೊಟ್ಟರು. ಸಭೆಯ ಎದುರಿಗೆ ನಿಲ್ಲಲು ಹೆದರುತ್ತಿದ್ದ ನನಗೆ ಎಷ್ಟು ಧೈರ್ಯ ಬಂತು ! ನನ್ನ ಸ್ನೇಹಿತರೆಲ್ಲ ನಾನು ತುಂಬ ಚೆನ್ನಾಗಿ ಭಾಷಣ ಮಾಡಿದೆನೆಂದು ಹೇಳಿ. ಬೆನ್ನು ತಟ್ಟಿದರು. ಈ ವಿಚಾರವನ್ನು ಅಮ್ಮನಿಗೆ ಹೇಳಿದಾಗ ಅವರಿಗೆ ತುಂಬ ಸಂತೋಷವಾಯ್ತು. ಅಣ್ಣನ ಬಳಿ ಉಪಾಧ್ಯಾಯರೇ ಈ ವಿಚಾರವನ್ನು ಹೇಳಿದ್ದಾರಂತೆ.

ನಾಳೆ ನಮ್ಮ ಶಾಲೆಯ ವಾರ್ಷಿಕೋತ್ಸವ. ನಾನು ಅದರಲ್ಲಿ ಒಂದು ನಾಟಕದಲ್ಲಿ ಭಾಗವಹಿಸಬೇಕೆಂದು ನಮ್ಮ ಉಪಾಧ್ಯಾಯರು ಹೇಳಿದ್ದಾರೆ. ನನಗೆ ಭರತನ ಪಾತ್ರ. ನಾನು ನಮ್ಮ ತಾಯಿಯಾಗುವ ಕೈಕೆಯನ್ನು ಚೆನ್ನಾಗಿ ಬೈಯುವ ಪಾತ್ರ. ಅಮ್ಮನೂ ನಾಟಕ ನೋಡಲು ಬರುತ್ತಾರಂತೆ. ನನ್ನ ಬಗ್ಗೆ ಏನು ತಿಳಿದು ಕೊಳ್ಳುತ್ತಾರೋ ! ನಾಟಕ ಆದ ಮೇಲೆ ನಿನಗೆ ಮತ್ತೆ ಕಾಗದ ಬರೆಯುತ್ತೇನೆ.

ಈ ಮಧ್ಯೆ ಮತ್ತೊಂದು ವಿಚಾರವನ್ನು ಬರೆಯಲು ಮರೆತಿದ್ದೆ. ನಮ್ಮ ಶಾಲೆಗೆ ಈ ಸಲ ನವರಾತ್ರಿಯ ಸ್ಪರ್ಧೆಯಲ್ಲಿ ನಾಲ್ಕು ಆಟಗಳಲ್ಲಿ ಮೊದಲ ಸ್ಥಾನ ಸಿಕ್ಕಿದೆ. ಕ್ರಿಕೆಟ್, ಫುಟ್‌ಬಾಲ್, ವಾಲಿಬಾಲ್ ಮತ್ತು ಕಬಡ್ಡಿ. ನಮ್ಮ ವ್ಯಾಯಾಮ ಶಿಕ್ಷಕರು ನಿನ್ನನ್ನು ಜ್ಞಾಪಿಸಿಕೊಂಡು. ನಿನ್ನ ಹಾಗೆ ವಾಲಿಬಾಲ್ ಆಡುವ ಆಟಗಾರನೇ ಬಂದಿಲ್ಲ ಎನ್ನುತ್ತಿದ್ದರು.

ಕಳೆದ ವರ್ಷದ ಪರೀಕ್ಷೆಯ ಫಲಿತಾಂಶಕ್ಕಿಂತ ಈ ಸಲ ಚೆನ್ನಾಗಿರಬೇಕೆಂದು ಮುಖ್ಯಾಧ್ಯಾಪಕರು ಆಗಾಗ ಹೇಳುತ್ತಿದ್ದಾರೆ. ನನಗೆ ಪ್ರಥಮ ತರಗತಿಯಲ್ಲಿ ತೇರ್ಗಡೆಯಾಗಬೇಕೆಂಬ ಆಸೆಯೇನೋ ಇದೆ. ನೀನು ಹಾಕಿಕೊಟ್ಟ ಮೇಲ್ಪಂಕ್ತಿಯನ್ನು ಅನುಸರಿಸಲು ಪ್ರಯತ್ನಪಡುತ್ತೇನೆ.

ನಿನ್ನ ಕಾಲೇಜು ಪರೀಕ್ಷೆಯು ಮುಗಿದೊಡನೆ ಊರಿಗೆ ಹಿಂದಿರುಗು. ಅಮ್ಮ, ಅಪ್ಪ ಇಬ್ಬರೂ ನಿನಗೆ ಹಾಗೆ ಬರೆಯಬೇಕೆಂದು ಹೇಳಿದ್ದಾರೆ.

ಕಾಗದ ದೊಡ್ಡದಾಯಿತು. ಹೀಗೆ ಬರೆಯುವುದನ್ನೂ ನನಗೆ ನಮ್ಮ ಶಾಲೆಯೇ ಕಲಿಸಿ ಕೊಟ್ಟಿದೆ.

ಇಂತು ನಿನ್ನ ತಮ್ಮ,
ನಾಗರಾಜು.

ಅಭ್ಯಾಸ

೧. ಕಠಿನ ಪದಗಳ ಅರ್ಥ :—

ದುರಸ್ತಿ = ರಿಪೇರಿ, ಸರಿಪಡಿಸುವುದು ; ಸ್ಪರ್ಧೆ = ಪೈಪೋಟಿ : ಶುಭ್ರತೆ = ಕೊಳೆಯಿಲ್ಲದಿರುವುದು ; ಫಲಿತಾಂಶ = ಪರೀಕ್ಷೆಯ ಪರಿಣಾಮ ; ಅಚ್ಚುಕಟ್ಟು = ಅಣಿ ; ಮೇಲ್ಪಂಕ್ತಿ = ಮಾದರಿ ; ಪ್ರೋತ್ಸಾಹ = ಉತ್ತೇಜನ.

೨. ವ್ಯಾಕರಣ :—

(i) ಈ ಪಾಠದಲ್ಲಿರುವ ಎಲ್ಲ ಬಹುವಚನ ಪದಗಳನ್ನು ಗುರುತಿಸಿ.

(ii) ನೀನು, ನಾನು, ಅಮ್ಮ, ಶಾಲೆ—ಈ ಪದಗಳಿಗೆ ಎಲ್ಲ ವಿಭಕ್ತಿ ಪ್ರತ್ಯಯಗಳನ್ನು ಹತ್ತಿಸಿ (ನಾನು, ನೀನು ಎಂಬುದಕ್ಕೆ ಸಂಬೋಧನ ವಿಭಕ್ತಿ ಪ್ರತ್ಯಯ ಮಾತ್ರ ಹತ್ತುವುದಿಲ್ಲ ಎಂಬುದು ನೆನಪಿರಲಿ.)

೩. (i) ತನ್ನ ಶಾಲೆಯ ಬಗ್ಗೆ ರಾಜುವಿಗೆ ಏಕೆ ಗೌರವ ?

(ii) ರಾಜು ಶಾಲೆಯ ಆವರಣದ ಬಗ್ಗೆ ಏನು ಹೇಳಿದ್ದಾನೆ ?

(iii) ರಾಜುವಿನ ಶಾಲೆಯ ತರಗತಿಯ ಹೊರಗು ಒಳಭಾಗಗಳನ್ನು ವರ್ಣಿಸಿ.

(iv) ರಾಜುವಿನ ಉಪಾಧ್ಯಾಯರ ಗುಣಗಳೇನು ?

(v) ಉಪಾಧ್ಯಾಯರಿಂದ ರಾಜು ಕಲಿತುದು ಏನೇನು ?

೫. ಜೋಕಾಲಿ ಹಬ್ಬ

ಜೋಕಾಲಿ ಹಬ್ಬವು ಶ್ರಾವಣ ತಿಂಗಳಲ್ಲಿ ಬರುತ್ತದೆ. ಶ್ರಾವಣವೆಂದರೆ ಮೋಡ ಮುಸುಕಿದ ಮುಗಿಲು, ಜಿಟಿಪಿಟಿ ಮಳೆ ; ಕಿಚಿಪಿಚಿ ಕೆಸರು ; ಮಗು ಬಿಕ್ಕಿ ಬಿಕ್ಕಿ ಅತ್ತಂತೆ ಆಗಿಷ್ಟು ಈಗಿಷ್ಟು ಹನಿಯುದುರಿಸಿ, ಮೋಡಗಳ ಸಾಲು ಹಾರಿ ಹೋಗುತ್ತದೆ. ಜೋಕಾಲಿ ಹಬ್ಬದಲ್ಲಿ ಮೂರು ದಿವಸ ಕಾರ್ಯಕ್ರಮ ನಡೆಯುತ್ತದೆ.

ಭೀಮನ ಅಮಾವಾಸ್ಯೆ ಕಳೆದ ಮೇಲೆ ಒಂದು ತಿಂಗಳು ಶ್ರಾವಣ ಮಾಸ. ಶ್ರಾವಣ ಮಾಸ ಪ್ರಾರಂಭವಾದ ಮೇಲೆ ಬರುವ ನಾಲ್ಕನೆಯ ದಿವಸವೇ ಶ್ರಾವಣ ಚತುರ್ಥಿ. ಇದಕ್ಕೆ ಶ್ರಾವಣ ಶುದ್ಧ ಚತುರ್ಥಿಯೆಂದೂ, ನಾಗಚೌತಿಯೆಂದೂ ಹೆಸರು. ಅಂದು ಶಾಲೆಯಲ್ಲಿ ವಿದ್ಯಾರ್ಥಿಗಳು ಸರಸ್ವತೀಪೂಜೆಯನ್ನು ಹಮ್ಮಿರುತ್ತಾರೆ. ಪ್ರತಿಯೊಬ್ಬ ಬಾಲಕನೂ ಸ್ನಾನ ಮಾಡಿ, ಹೊಸಬಟ್ಟೆಗಳನ್ನು ಧರಿಸುವನು. ಪೂಜೆಗಾಗಿ ಅರಿಸಿನ, ಕುಂಕುಮ, ಗಂಧ, ಹೂಪತ್ರೆ. ನೈವೇದ್ಯಕ್ಕಾಗಿ ಕೊಬ್ಬರಿ ಬಟ್ಟಲು, ದಕ್ಷಿಣೆಗೆ ಬಿಡಿಕಾಸು ಇವನ್ನು ಶಾಲೆಗೆ ಕೊಂಡೊಯ್ಯುತ್ತಾನೆ.

ಹೊಸದಾಗಿ ಗಂಡನ ಮನೆಗೆ ಹೋದ ಮೊದಲಗಿತ್ತಿಯರನ್ನು ತವರುಮನೆಗೆ ಕರೆತಂದಿರುತ್ತಾರೆ. ನಾಗಚೌತಿಯ ದಿವಸ ಅವರು, ತವರು ಮನೆಯನ್ನು ಬೆಳಗುವ ಹಣತಿಗಳನ್ನು ಪೂಜಿಸುವರು. ಆ ಕಾಲಕ್ಕೆ ಹಂಗುನೂಲನ್ನು ಹಣತಿಗೆ ಅಳವಡಿಸಿ, ತಾವೂ ಒಂದನ್ನು ಕೊರಳಲ್ಲಿ ಹಾಕಿಕೊಳ್ಳುತ್ತಾರೆ. ಅಂದು ಅವರಿಗೆ ಉಪವಾಸ ವ್ರತ. ಸಾಯಂಕಾಲ ಅರಳು ಹಿಟ್ಟು, ತಂಬಿಟ್ಟು, ಉಂಡೆ, ಕೊಬ್ಬರಿ ತಿನ್ನುತ್ತಾರೆ.

ಮರುದಿನ ನಾಗಪಂಚಮಿ. ಮನೆಮನೆಯಲ್ಲಿ ಹಿಟ್ಟಿನಿಂದ ಅಥವಾ ಅರಳಿನಿಂದ ಮಾಡಿದ ನಾಗೇಶನಿಗೆ ಹಾಲೆರೆದು ಪೂಜಿಸುತ್ತಾರೆ. ಊರ ಮುಂದಿನ ಹಳ್ಳದ ದಂಡೆಯಲ್ಲಿ ಅರಲಿನಿಂದ ಮಾಡಿದ ನಾಗೇಶನನ್ನು ಹೆಣ್ಣುಮಕ್ಕಳು ಪೂಜಿಸಿ ನೈವೇದ್ಯ ಅರ್ಪಿಸುತ್ತಾರೆ. ನಾಗೇಶನ ನೈವೇದ್ಯಕ್ಕೆ ಹೂರಣ ಕಡುಬು ಬೇಕಾಗುತ್ತದೆ. ಆ ಕಡುಬಿಗೆ 'ಕಾನೋಲಿ' ಎಂದೂ ಹೆಸರಿದೆ. ಮಧ್ಯಾಹ್ನದವರೆಗೆ ಊರ ಆಯುಗಾರರು ಮನೆಮನೆಗೆ ಹೋಗಿ ಅರಳು, ಕೊಬ್ಬರಿ ನೀಡಿಸಿಕೊಂಡು ಹೋಗುತ್ತಾರೆ.

ಊಟವಾದ ಬಳಿಕ ಗಂಡಸರು, ಹೆಂಗಸರು ಹೊಸ ಬಟ್ಟೆಗಳನ್ನು ಧರಿಸಿ, ಹುಣಿಸೆ ಮರಕ್ಕೋ, ಬೇವಿನ ಮರಕ್ಕೋ, ಇನ್ನಾವುದೇ ಮರಕ್ಕೋ ಕಟ್ಟಿದ ಜೋಕಾಲಿಯನ್ನು ಆಡಲು ಹೋಗುತ್ತಾರೆ. ಚಿಕ್ಕ ಮಕ್ಕಳಿಗಾಗಿ ಮನೆಮನೆಗೂ ಒಂದೊಂದು ಜೋಕಾಲಿ ಕಟ್ಟಿರುತ್ತಾರೆ. ಗಂಡುಮಕ್ಕಳು ನಿಂತುಕೊಂಡು ಜೋಕಾಲಿ ಜೀಕುತ್ತಾರೆ. ಆದರೆ ಹೆಣ್ಣುಮಕ್ಕಳು ಕುಳಿತುಕೊಂಡು ಓರಗೆಯವರಿಂದ ಜೋಕಾಲಿಯನ್ನು ಜೀಕಿಸಿಕೊಳ್ಳುತ್ತಾರೆ. ಕಾಲ ಕಸುವುಳ್ಳ ಗಂಡಸರು ಜೋಕಾಲಿಯನ್ನು ಜೀಕಿ, ಜೀಕಿ, ಮುಂದಿನ ಟೊಂಗೆಗೆ ತೂಗುಬಿಟ್ಟ ಕೊಬ್ಬರಿ ಬಟ್ಟಲಿನ ಸರಕ್ಕೆ ಕಾಲು ತಾಕಿಸಿದರೆ, ಆ ಕೊಬ್ಬರಿ ಸರವು ಅವರದಾಗುತ್ತದೆ. ನಾಲ್ಕಾರು ಕಡೆ ಜೋಕಾಲಿಯನ್ನು ದಣಿವಾಗುವವರೆಗೆ ಆಡುತ್ತಾರೆ. ಉತ್ಸಾಹವೇ ಉತ್ಸಾಹ. ಜೋಕಾಲಿಗೆ ಎತ್ತಿನ ಸರಗಂಟೆಯನ್ನು ತೊಡಗಿಸಿದ್ದರಿಂದ ಜೀಕಿಗೊಮ್ಮೆ ಗಣಗಣಲ್ ಎಂಬ ನಾದವು ಜೀಕುವವನ ಉತ್ಸಾಹವನ್ನು ಇಮ್ಮಡಿಸುತ್ತದೆ.

ಜೋಕಾಲಿಯಲ್ಲದೆ ಹೆಣ್ಣುಮಕ್ಕಳೂ, ಹುಡುಗರೂ ತೂಗಿಕೊಳ್ಳುವುದಕ್ಕೆ ಅಲ್ಲಲ್ಲಿ ಚಿರಕಿಗಾಣಗಳನ್ನು ರಚಿಸಿರುತ್ತಾರೆ. ಒಂದು ಸಲಕ್ಕೆ ಇಬ್ಬರನ್ನು ಕುಳ್ಳಿರಿಸಿ ಸುತ್ತುವರಿಯುವಂತೆ ಚಿರಕಿಗಾಣದ ಏರ್ಪಾಡು ಇರುತ್ತದೆ.

ಇಳಿಹೊತ್ತಿಗೆ ಜನರ ಗುಂಪು ಊರ ಚಾವಡಿಯ ಬಳಿಗೆ ಬರುವುದು. ಅಲ್ಲಿಯ ಸಣ್ಣ ದೊಡ್ಡ ಎತ್ತುಗುಂಡುಗಳನ್ನು ಗಟ್ಟಿಗರಾದವರು ತಮ್ಮ ತಮ್ಮ ಅಳವಿನಂತೆ ಎತ್ತಿಯಾಡುವರು. ಅದೊಂದು ಶಕ್ತಿಪ್ರದರ್ಶನ. ಅಂದು ತಿಂದ ಅರಳು-ಕೊಬ್ಬರಿ,

ಹೊರಗಾಗದಾಯು ಆರಗಿ ಹೋಗುವುದರಿಂದ ಸಂಜೆಯ ಊಟ ಯಾವಾಗ ಬಂದೀತೋ ಎಂದು ಕಾಯಬೇಕಾಗುವುದು.

ನಾಗರ ಪಂಚಮಿಯ ಮರುದಿನ ಸಿರಿಯಾಳ ಷಷ್ಠಿ. ಊರಿನ ಪ್ರಮುಖ ವತನದಾರರಾದ ಗೌಡಕುಲಕರ್ಣಿಯವರು ತಮ್ಮ ತಮ್ಮ ಮನೆಯಲ್ಲಿ ಮಂಟಪ ರಚಿಸಿ ಗೌರಿಯ ಪೂಜೆ ಮಾಡುತ್ತಾರೆ. ಮಂಟಪದ ಮುಂದೆ ರಚಿಸಿದ ಕಟ್ಟೆಯ ಮೇಲೆ ಗೋಕಾವಿ. ಚೆನ್ನಪಟ್ಟಣ ಮೊದಲಾದ ಸ್ಥಳಗಳಿಂದ ತರಿಸಿದ ಕಟ್ಟಿಗೆಯ ಗೊಂಬೆಗಳನ್ನೂ. ಹಣ್ಣುಹಂಪಲಗಳನ್ನೂ ವ್ಯವಸ್ಥಿತವಾಗಿ ಇರಿಸಿರುತ್ತಾರೆ. ಹೆಣ್ಣುಮಕ್ಕಳು ಹಬ್ಬದೂಟವನ್ನು ಉಂಡು. ಪೆಟ್ಟಿಗೆಯೊಳಗೆ ಕಟ್ಟಿಡುವ ಸೀರೆ ಕುಪ್ಪಸಗಳನ್ನು ಹೊರತೆಗೆದು ಉಡುತ್ತಾರೆ. ಮಕ್ಕಳನ್ನು ವಸ್ತ್ರ ಒಡವೆಗಳಿಂದ ಸಿಂಗರಿಸಿ. ಬಗಲಲ್ಲಿ ಎತ್ತಿಕೊಂಡು ಇಲ್ಲವೆ ಕೈಹಿಡಿದು ನಡೆಸುತ್ತ ಗೌರಿ ನೋಡಲು ಹೊರಡುತ್ತಾರೆ. ಎರಡು-ಮೂರು ಮನೆಗಳಲ್ಲಿ ಗೌರಿ ನೋಡಿ. ಮನೆಗೆ ಬರಬೇಕಾದರೆ ದೀಪ ಹಚ್ಚುವ ವೇಳೆಯಾಗುತ್ತದೆ.

ಗೌರಿಯನ್ನು ಕುಳ್ಳಿರಿಸಿದ ಮಂಟಪದ ಇಬ್ಬದಿಗಳಲ್ಲಿ ಹೆಣ್ಣುಮಕ್ಕಳು ನೆರೆದು. ಕುಳಿತು. ತಮ್ಮದೇ ಆದ ನುಣ್ಣಗಿನ ಸಣ್ಣ ದನಿಯಲ್ಲಿ ಗೌರಿಯನ್ನು ಕುರಿತ ಹಲವು ಹಾಡುಗಳನ್ನು ಹಾಡುತ್ತಾರೆ. ಅದೊಂದು ಹೆಣ್ಣುಮಕ್ಕಳ ಜಾನಪದ ಗೀತ ಗೋಷ್ಠಿ. ಹೊರಗಿನ ಅಂಗಳದ ಬಯಲಲ್ಲಿ ಗಂಡಸರಿಗಾಗಿ ದಪ್ಪಿನ ಹಾಡು; ಜನರು ಕಿಕ್ಕಿರಿದು ಕುಳಿತು ಹಾಡು ಕೇಳುವುದರಲ್ಲಿ ತಲ್ಲೀನರಾಗಿರುತ್ತಾರೆ. ಅದು ಗಂಡುಮಕ್ಕಳ ಜಾನಪದ ಗೀತಗೋಷ್ಠಿ. ಆ ಕಾರ್ಯಕ್ರಮವು ಒಮ್ಮೊಮ್ಮೆ ಎರಡು ತಾಸು ರಾತ್ರಿಯವರೆಗೆ ಮುಂದುವರಿಯುತ್ತದೆ. ಬಳಿಕ ಗೌರಿಯ ವಿಸರ್ಜನೆಯ ಕಾರ್ಯ.

ಹೀಗೆ ಜೋಕಾಲಿ ಹಬ್ಬವು ಮೂರು ದಿವಸ ಸತತವಾಗಿ. ಹೆಣ್ಣು ಗಂಡು ಎನ್ನದೆ ಸರ್ವರಿಗೂ ಉತ್ಸಾಹ ನೀಡಿ ತೆರೆಯ ಮರೆಗೆ ಸರಿಯುತ್ತದೆ. ಆದರೆ ಮಕ್ಕಳು. ಮನೆಮನೆಗೆ ಕಟ್ಟಿದ ಜೋಕಾಲಿಯಲ್ಲಿ ಕುಳಿತು ಅರಳು-ಕೊಬ್ಬರಿ ತಿನ್ನುತ್ತ ಮತ್ತೆ ನಾಲ್ಕು ದಿನ ಜೀಕಿಕೊಳ್ಳುವರು. ಅದರ ಮಟ್ಟಿಗೆ ಜೋಕಾಲಿ ಹಬ್ಬವು. ಹರಿಜಾತ್ರೆಯಂತೆ ಸಾವಕಾಶವಾಗಿ ಕರಗುವದು.

ಅಭ್ಯಾಸ

ಜೋಕಾಲಿ ಹಬ್ಬವನ್ನು ಕನ್ನಡ ದೇಶದಲ್ಲೆಲ್ಲ ಆಚರಿಸಲಾಗುತ್ತದೆ. ಆದರೆ ಒಂದು ಭಾಗದವರು ಆಚರಿಸುವ ರೀತಿ ಇನ್ನೊಂದು ಭಾಗದವರ ರೀತಿಗೆ ತುಸು ಭಿನ್ನವಾಗಿ

ರುತ್ತವೆ. ಈ ಪಾಠದಲ್ಲಿ ಹೆಚ್ಚಾಗಿ ಉತ್ತರ ಕರ್ನಾಟಕದವರ ಪದ್ಧತಿಯನ್ನೇ ಗಮನಿಸ ಲಾಗಿದೆ :

೧. (ಅ) ಕಠಿನ ಶಬ್ದಗಳ ಅರ್ಥ :—

ಚೌತಿ = ಚವುತಿ, ಚವತಿ, ಅಮಾವಾಸ್ಯೆ ಅಥವಾ ಹುಣ್ಣಿಮೆಯಾದ ಮೇಲೆ ಬರುವ ನಾಲ್ಕನೆಯ ದಿನ : ಅರಲು = ಕೆಸರು ; ಅರಳು = ಬತ್ತ, ಜೋಳ ಮುಂತಾದುವನ್ನು ಹುರಿದಾಗ ಆಗುವ ಅರಳು : ಹವಣ್ಸು = ಹೂಡಿಕೋ ; ಅರಗು = ಜೀರ್ಣವಾಗು : ಆಯಗಾರ = ಗುರಿವುಳ್ಳವನು : ಸರಗಂಟೆ = ಸ್ವರದ ಗಂಟೆ ; ಕಾನೋಲಿ = ಕುಚ್ಚುಕಡಬು ; ಶಕ್ತಿ ಪ್ರದರ್ಶನ = ಶಕ್ತಿಯನ್ನು ತೋರಿಸುವುದು : ಕಟ್ಟಿಡುವ ಸೀರೆ = ವಿಶೇಷ ಪ್ರಸಂಗಗಳಲ್ಲಿ ಮಾತ್ರ ಉಟ್ಟುಕೊಳುವ ಸೀರೆ : ಇಬ್ಬದಿ = ಎರಡು ಬದಿ ; ಗೋಷ್ಠಿ = ಸಭೆ ; ವಿಸರ್ಜನೆ = ಬಿಡುವುದು ; ವತನದಾರ = ಜಮೀನುದಾರ.

(ಆ) ನುಡಿಗಟ್ಟು :—

(i) ಇಡಿಯಾವ ಕೊಬ್ಬರಿಗೆ ಮುಸುಕು, ಗಿಟುಕು ಅನ್ನುತ್ತಾರೆ. ಗಿಟುಕನ್ನು ಇಬ್ಭಾಗ ಮಾಡಿದರೆ ಒಂದೊಂದಕ್ಕೆ ಹೋಳು, ಬಟ್ಟಲು, ಗುಂಡು ಅನ್ನುತ್ತಾರೆ.

(ii) ಹೊಸದಾಗಿ ಗಂಡನ ಮನೆಗೆ ಹೋದ ಮಗಳನ್ನು ಜೋಕಾಲಿ ಹಬ್ಬದ ಹೊತ್ತಿಗೆ ತವರುಮನೆಗೆ ತಪ್ಪದೆ ಕರೆತರುತ್ತಾರೆ. ಅವಳು ಮೊದಲ ಸಾರಿ ಅತ್ತೆಯ ಮನೆಗೆ ಹೋಗಿ ಬಂದವಳು ; ಆದ್ದರಿಂದ ಆಕೆ ಮೊದಲಗಿತ್ತಿ.

(iii) ನಾಗಚೌತಿಯ ದಿನ ಹೆಣ್ಣುಮಕ್ಕಳು ತವರು ಮನೆಯ ಹಣತೆಗಳನ್ನು ಪೂಜಿಸಿ ಅರಳು, ಕೊಬ್ಬರಿ, ಅರಳುಹಿಟ್ಟು ಇವುಗಳ ನೈವೇದ್ಯವನ್ನು ಅರ್ಪಿಸುತ್ತಾರೆ. ಆ ಕಾಲಕ್ಕೆ ನೂಲೆಳೆಗಳನ್ನು ಹಾರ ಮಾಡಿ ಹಣತೆಗೆ ಹಾಕಿ, ತಾವೂ ಒಂದೊಂದನ್ನು ಕೊರಳಲ್ಲಿ ಹಾಕಿಕೊಳ್ಳುತ್ತಾರೆ. ಅದೇ ಹಂಗುನೂಲು ; ತವರು ಮನೆಯ ಹಂಗಿನ ಕುರುಹು.

(iv) ಹಿಟ್ಟಿನಿಂದಾಗಲಿ, ಕೆಸರಿನಿಂದಾಗಲಿ, ತಾಮ್ರ–ಬೆಳ್ಳಿಗಳಿಂದಾಗಲಿ ಮಾಡಿದ ಹೆಡೆಯೆತ್ತಿ ಕುಳಿತ ನಾಗರಹಾವಿನ ಮೂರ್ತಿಗೆ ನಾಗೇಶ, ನಾಗೇಶಿ ಅನ್ನುತ್ತಾರೆ.

(v) ಹೂರಣಗಡುಬನ್ನು ಸೆ ಊಪ್ಪಿನಲ್ಲಿಟ್ಟು ಅಥವಾ ಉಗಿಯಲ್ಲಿಟ್ಟು ಬೇಯಿಸಿದ್ದು ಕಾನೋಲಿ. ದಕ್ಷಿಣ ಭಾಗದವರು ಅದಕ್ಕೆ ಕುಚ್ಚುಕಡಬು ಅನ್ನುತ್ತಾರೆ.

(vi) ನಡು ಹಾಕಿದ ಕಂಬಕ್ಕೆ ಒಂದು ಅಡ್ಡ ಕಂಬವನ್ನು ಸಿಕ್ಕಿಸಿ, ಅದರ ಎರಡು ತುದಿಗಳಲ್ಲಿ ಚಿಕ್ಕ ಜೋಕಾಲಿಗಳನ್ನು ಕಟ್ಟಿ, ಒಬ್ಬೊಬ್ಬರನ್ನು ಕುಳ್ಳಿರಿಸಿ, ನಡುಗಂಬದ ಸುತ್ತಲು ಅಡ್ಡಕಂಬ ತಿರುಗುವಂತೆ ಒಬ್ಬಬ್ಬರು ಸುತ್ತುವರಿಸುತ್ತಾರೆ. ಅದೇ ಚಿರಕಿಗಾಣ.

(vii) ದಪ್ಪವೆಂದರೆ ಲಾವಣಿಕಾರರು ಹಾಡುವಾಗ ಉಪಯೋಗಿಸುವ ಚರ್ಮವಾದ್ಯ. ಅದನ್ನು ಬಾರಿಸುತ್ತ ಹಾಡುವುದರಿಂದ ಆ ಹಾಡುಗಳಿಗೆ ದಪ್ಪಿನ ಹಾಡು ಅನ್ನುತ್ತಾರೆ.

(viii) ಜಾತ್ರೆಯ ಕಾರ್ಯಕ್ರಮಗಳೆಲ್ಲ ಮುಗಿದು ಹೋದ ಮೇಲೆ ಜಾನುವಾರುಗಳ ಜನಜಾತ್ರೆ ಮುಂದಿನ ನಾಲ್ಕಾರು ದಿನ ಹರಿದು ಹೋಗುತ್ತಲೇ ಇರುತ್ತದೆ. ಇದೇ ದನಜಾತ್ರೆ.

೨. ವ್ಯಾಕರಣ ವಿಶೇಷ :—

(ಅ) ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕ ಲಿಂಗಗಳಿಗೆ ಎರಡೆರಡು ಉದಾಹರಣೆಗಳನ್ನು ಹೇಳಿ.

(ಆ) ಪಾಠದಲ್ಲಿ ಬಂದ ಬಹುವಚನದ ಮೂರು ಶಬ್ದಗಳನ್ನು ಉದಾಹರಿಸಿ.

(ಇ) ಸ್ವರಲೋಪ ಸಂಧಿ, ಸವರ್ಣದೀರ್ಘಸಂಧಿ, ವಕಾರಾಗಮ ಸಂಧಿ ಇವುಗಳಿಗೆ ಉದಾಹರಣೆಗಳನ್ನು ಪಾಠದಿಂದ ಆಯ್ಕೆ ಮಾಡಿ.

೩. ಪ್ರಶ್ನೆಗಳು—

೧. ಜೋಕಾಲಿ ಹಬ್ಬದಲ್ಲಿ ಬರುವ ಮೂರು ದಿನಗಳ ಕಾರ್ಯಕ್ರಮಗಳು ಯಾವುವು ?
೨. ಹಣತೆ ಪೂಜೆಯನ್ನು ಯಾರು, ಹೇಗೆ ಮಾಡುವರು ?
೩. ಕೊಬ್ಬರಿ ಗುಂಡುಗಳ ಸರವನ್ನು ಗೆಲ್ಲುವ ಬಗೆ ಹೇಗೆ ?
೪. ಜಾನಪದ ಗೀತಗೋಷ್ಠಿಗಳು ಎಂದು, ಎಲ್ಲಿ ನಡೆಯುವವು ?

---

೬. ಶ್ರೀರಂಗಪಟ್ಟಣ

ನಮ್ಮ ತರಗತಿಯ ಎಲ್ಲ ಮಕ್ಕಳಿಗೂ ಶ್ರೀರಂಗಪಟ್ಟಣವನ್ನು ನೋಡಬೇಕೆಂಬ ಆಸೆಯಾಯಿತು. ನಮ್ಮ ಚರಿತ್ರೆಯ ಉಪಾಧ್ಯಾಯರು ಕೊನೆಯ ಮೈಸೂರು ಯುದ್ಧದಲ್ಲಿ ಟಿಪ್ಪು ಮಡಿದು ಬಿದ್ದುದನ್ನು ವರ್ಣಿಸುತ್ತಾ ಈಗಲೂ ಆ ಸ್ಥಳದಲ್ಲಿ ಒಂದು ' ಬೋರ್ಡು ' ಬರೆದು ನಿಲ್ಲಿಸಿದ್ದಾರೆ ಎಂದು ಹೇಳಿದರು. ಅಲ್ಲದೆ ಆ ಊರಿನಲ್ಲಿರುವ ಇತರ ಪ್ರದೇಶಗಳನ್ನೂ, ಕಟ್ಟಡಗಳನ್ನೂ, ದೇವಾಲಯಗಳನ್ನೂ ಅವರು ವರ್ಣಿಸುತ್ತಿದ್ದಾಗ ನಮಗೆಲ್ಲಾ ಆ ಊರನ್ನು ನೋಡಲೇಬೇಕೆಂಬ ಮನಸ್ಸಾಯಿತು.

ನಮ್ಮ ತರಗತಿಯ ವಿದ್ಯಾರ್ಥಿಗಳು ಮೊದಲು ನಮ್ಮ ನಮ್ಮಲ್ಲಿಯೇ ಮಾತನಾಡಿಕೊಂಡು ನಮ್ಮ ತಂದೆ-ತಾಯಿಗಳನ್ನು ಕೇಳಬೇಕೆಂದು ನಿಶ್ಚಯಿಸಿಕೊಂಡೆವು. ರಾತ್ರಿ ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಮನೆಯಲ್ಲಿ ಈ ವಿಚಾರವನ್ನು

ಎತ್ತಿದಾಗ ಎಲ್ಲರ ಮನೆಯಲ್ಲಿಯೂ ಪ್ರೋತ್ಸಾಹವೇ ಸಿಕ್ಕಿತು. ಪಟೇಲರು ಮೊದಲೇ ಶ್ರೀರಂಗಪಟ್ಟಣವನ್ನು ನೋಡಿದ್ದುದರಿಂದ ಅವರು ಅವರ ಮಗನಿಗೆ ಶ್ರೀರಂಗಪಟ್ಟಣವನ್ನು ಮತ್ತಷ್ಟು ವರ್ಣಿಸಿದರು. ಅಲ್ಲದೆ ಅವರ ಮಗನು ಖಂಡಿತ ಶಾಲೆಯ ಮಕ್ಕಳೊಡನೆ ಹೋಗಬೇಕೆಂದರು. ಗೌಡರ ಮಗನಿಗೂ ಅದೇ ಬಗೆಯ ಪ್ರೋತ್ಸಾಹ ಸಿಕ್ಕಿತು. ಎಲ್ಲ ಹಿರಿಯರೂ ಹೀಗೆಯೇ ಸಹಾಯಕರಾಗಿದ್ದರು.

ಮಾರನೆಯ ದಿನ ಮಕ್ಕಳೆಲ್ಲರೂ ಚರಿತ್ರೆಯ ಉಪಾಧ್ಯಾಯರ ಬಳಿ ಹೋಗಿ ಅವರ ಇಚ್ಛೆಯನ್ನು ಹೇಳಿದಾಗ ಅವರಿಗೆ ಆಶ್ಚರ್ಯವೂ, ಸಂತೋಷವೂ ಆಯಿತು. ಮುಖ್ಯೋಪಾಧ್ಯಾಯರು ಶಾಲೆಯ ಕಡೆಯಿಂದ ಸಹಾಯ ಮಾಡುವುದಾಗಿ ಹೇಳಿದರು. ಚರಿತ್ರೆಯ ಉಪಾಧ್ಯಾಯರೇ ನಮ್ಮ ಜೊತೆ ಬರುವುದೆಂದು ನಿಶ್ಚಯವಾದಾಗ ನಮಗೆ ಇನ್ನೂ ಹೆಚ್ಚಿನ ಆನಂದವಾಯಿತು.

ನಮ್ಮ ಚರಿತ್ರೆಯ ಅಧ್ಯಾಪಕರು ತುಂಬ ಒಳ್ಳೆಯವರು. ಅನೇಕ ಪುಸ್ತಕಗಳನ್ನು ಓದಿ ತುಂಬ ತಿಳಿವಳಿಕೆಯನ್ನು ಹೊಂದಿದ್ದಾರೆ. ಅವರು ಇಂಥ ಪ್ರವಾಸಗಳಿಗೆ ಯಾವಾಗಲೂ ಪ್ರಾಮುಖ್ಯವನ್ನು ಕೊಡುತ್ತಿದ್ದರು. ಅವರು ಪ್ರವಾಸದ ದಿನವನ್ನು ಗೊತ್ತುಪಡಿಸಿ ಎಲ್ಲ ಏರ್ಪಾಟುಗಳನ್ನು ನಮ್ಮ ಮೂಲಕವೇ ಮಾಡಿಸಿದರು. ಆರು ಜನ ಹುಡುಗರನ್ನು ಆರಿಸಿ ಒಬ್ಬೊಬ್ಬರಿಗೆ ಒಂದೊಂದು ಕೆಲಸವನ್ನು ಗೊತ್ತು ಮಾಡಿದರು. ಜನಾರ್ಧನನಿಗೆ ಬಸ್ಸು ಗೊತ್ತುಮಾಡುವ ಕೆಲಸ. ಶಿವನಂಜಪ್ಪನಿಗೆ ಅಡಿಗೆ ಸಾಮಾನುಗಳನ್ನು ಕೊಂಡುಕೊಳ್ಳುವ ಕಾರ್ಯ. ಜಗನ್ನಾಥನಿಗೆ ಎಲ್ಲರ ಬಳಿ ಹಣವನ್ನು ವಸೂಲು ಮಾಡುವ ಉದ್ಯೋಗ. ಶ್ರೀಕಂಠಯ್ಯನಿಗೆ ಯಾರು ಯಾರು ಏನೇನನ್ನು ತರಬೇಕೆಂಬುದರ ಮೇಲ್ವಿಚಾರಣೆ ಮತ್ತು ಹಂಚುವ ಹಕ್ಕು. ಎಲ್ಲರ ಪಟ್ಟಿಯನ್ನು ತಯಾರು ಮಾಡಿ ಎಲ್ಲರ ಮನೆಗೂ ಹೋಗಿ ಮಕ್ಕಳ ತಂದೆ-ತಾಯಿಗಳಿಗೆ ಹೇಳಿ ಬರುವ ಕೆಲಸ ಸಂಜೀವನಿಗೆ. ಶ್ರೀರಂಗಪಟ್ಟಣದಲ್ಲಿ ಏನೇನು ನೋಡಬೇಕೆಂಬುದನ್ನು ಪಟ್ಟಿ ಮಾಡುವುದು, ಅವುಗಳ ಬಗೆಗೆ ಚಾರಿತ್ರಿಕ ಸಂಗತಿಗಳನ್ನು ಸಿದ್ಧ ಮಾಡಿ ಬರೆದಿಡುವುದು, ಈ ಕೆಲಸ ತರಗತಿಯ ಮೊದಲಿಗನಾದ ರಾಮಕೃಷ್ಣನಿಗೆ. ಇವರೆಲ್ಲರಿಗೂ ನಮ್ಮ ಚರಿತ್ರೆಯ ಉಪಾಧ್ಯಾಯರು ಮಾರ್ಗದರ್ಶನ ಮಾಡುತ್ತಲೇ ಇದ್ದರು.

ಪ್ರವಾಸದ ದಿನ ಬಂದಾಗ ಎಲ್ಲರೂ ಬೆಳಗ್ಗೆ ಶಾಲೆಯ ಬಳಿ ಗಂಟುಮೂಟೆಗಳೊಡನೆ ಸಿದ್ಧವಾದರು. ಬಸ್ಸು ನಮಗಿಂತ ಮೊದಲೇ ಬಂದಿತ್ತು. ನಮ್ಮ ತಂದೆ-ತಾಯಿಗಳು ಶಾಲೆಯ ಬಳಿಗೆ ಬಂದು ಬೀಳ್ಕೊಟ್ಟರು. ಶಾಲೆಗೆ 'ಜೈ' ಕಾರವನ್ನು ಹೇಳಿದ ಮೇಲೆ ಬಸ್ಸು ಹೊರಟಿತು.



ನಮ್ಮ ಊರಿಗೆ ಶ್ರೀರಂಗಪಟ್ಟಣ ನೂರು ಮೈಲಿಯಷ್ಟು ದೂರದಲ್ಲಿದೆ. ಇನ್ನೂ ಇಪ್ಪತ್ತು ಮೈಲಿಯಷ್ಟು ಪ್ರವಾಸ ಮಾಡಿಲ್ಲ. ಅಷ್ಟರಲ್ಲಿಯೇ ಒಬ್ಬ ತನ್ನ ಗಂಟೊಂದನ್ನು ಬಿಚ್ಚಿ ಎಲ್ಲರಿಗೂ ಒಂದೊಂದು ರವೆವುಂಡೆಯನ್ನು ಹಂಚಿದನು. ಅವರ ತಾಯಿ ಪ್ರೀತಿಯಿಂದ ಶಾಲೆಯ ಮಕ್ಕಳಿಗೆ ಕಳುಹಿಸಿದ್ದ ಕಾಣಿಕೆ ಅದು. ರವೆವುಂಡೆ ಪೂರೈಸುವುದರೊಳಗಾಗಿ ಚಕ್ಕುಲಿಯ ಹಂಚಿಕೆ ಮತ್ತೊಬ್ಬನಿಂದ. ಹೀಗೆ ತೇಂಗೊಳಲು. ನಿಪ್ಪಟ್ಟು. ಪುರಿವುಂಡೆ. ಅಂಟಿನುಂಡೆ, ಸಜ್ಜಪ್ಪ ಇತ್ಯಾದಿ ತಿಂಡಿಗಳನ್ನು ತಿಂದು ಎಲ್ಲರಿಗೂ ನಿದ್ದೆ ಬಂದಂತಾಯಿತು. ನಮ್ಮ ಚರಿತ್ರೆಯ ಅಧ್ಯಾಪಕರು "ಬಂದ ಕೆಲಸವಾಯಿತಲ್ಲ. ಇನ್ನು ಹಿಂದಿರುಗೋಣ" ಎಂದು ಹಾಸ್ಯ ಮಾಡಿದರು.

ನಾವು ಶ್ರೀರಂಗಪಟ್ಟಣವನ್ನು ಸೇರಿದಾಗ ಬೆಳಿಗ್ಗೆ ಹತ್ತು ಗಂಟೆ. ನದಿಯ ಬಳಿಯ ಛತ್ರದಲ್ಲಿ ಅಡಿಗೆಗೆ ಏರ್ಪಾಟು ಮಾಡಿ, ನಾವೆಲ್ಲಾ ನದಿಯಲ್ಲಿ ಕೈಕಾಲು ತೊಳೆದುಕೊಂಡು ಮೊದಲು ಶ್ರೀರಂಗನಾಥನ ದೇವಾಲಯಕ್ಕೆ ಹೋದೆವು. ದೊಡ್ಡ ದೇವಸ್ಥಾನ. ದೊಡ್ಡ ವಿಗ್ರಹ. ಕೊಳಗವನ್ನೇ ತಲೆದಿಂಬನ್ನಾಗಿ ಮಾಡಿ ಮಲಗಿದ ಶ್ರೀರಂಗನಾಥನ ವಿಗ್ರಹ ತುಂಬ ಸೊಗಸು. ಅಲ್ಲಿ ಪೂಜೆ ಮಾಡಿಸಿಕೊಂಡು ನಾವು ಊರನ್ನೆಲ್ಲ ಸುತ್ತಿದೆವು. ಊಟ ಮಾಡಿದ ಬಳಿಕ ದರಿಯಾದವಲತ್ ಉದ್ಯಾನ. ಮಸೀದಿ. ಗುಂಬಜ್. ನೆಲಮನೆಯ ಸೆರೆಕೋಣೆ ಮತ್ತು ಇಂಗ್ಲೀಷರು ಕೋಟೆಯನ್ನು ಹತ್ತಿದ ಸ್ಥಳ. ಟಿಪ್ಪು ಸತ್ತು ಬಿದ್ದ ಸ್ಥಳ—ಇವುಗಳನ್ನೆಲ್ಲ ನೋಡಿಕೊಂಡುಬಂದೆವು. ಸಾಯುತ್ತಿದ್ದಾಗಲೂ ಟಿಪ್ಪು ತನ್ನ ಕತ್ತಿಯನ್ನು ಸೆಳೆದ ಕಥೆಯನ್ನು ನಮ್ಮ ಉಪಾಧ್ಯಾಯರು ಹೇಳಿದಾಗ. ನಮಗೆಲ್ಲಾ ಕಣ್ಣಿನಲ್ಲಿ ನೀರು ಬಂತು.

ಸಂಜೆಯಾದರೂ ನಮಗಾರಿಗೂ ಊರಿಗೆ ಹಿಂದಿರುಗಲು ಮನಸ್ಸೇ ಇಲ್ಲ. ಸುಮಾರು ಇನ್ನೂರು ವರ್ಷಗಳ ಹಿಂದಕ್ಕೆ ನಮ್ಮನ್ನು ಕರೆದುಕೊಂಡು ಹೋದ

ಈ ಚಾರಿತ್ರಕ ಸ್ಥಳವನ್ನು ನಾವೆಂದೂ ಮರೆಯುವುದಿಲ್ಲವೆಂದು ನಿರ್ಧಾರ ಮಾಡಿ ಕೊಂಡು ಊರಿಗೆ ಹಿಂದಿರುಗಿದೆವು.

ರಾತ್ರಿಯೆಲ್ಲ ಶ್ರೀರಂಗಪಟ್ಟಣದ ಕನಸೇ !

ಅಭ್ಯಾಸ

೧. ಮೈಸೂರಿಗೆ 9 ಮೈಲಿ ದೂರದಲ್ಲಿರುವ ಈ ಇತಿಹಾಸ ಪ್ರಸಿದ್ಧವಾದ ಸ್ಥಳದಲ್ಲಿ ಈಗಲೂ ಚರಿತ್ರೆಯ ಅವಶೇಷಗಳನ್ನು ಚೆನ್ನಾಗಿ ಕಾಣಬಹುದು. ಈ ಊರು ಒಂದು ಸಣ್ಣ ದ್ವೀಪ. ಕಾವೇರಿಯು ಎರಡು ಕವಲುಗಳಾಗಿ ಇದನ್ನು ಸುತ್ತಿದೆ. ಇಲ್ಲಿ ಅನೇಕ ದೇವಸ್ಥಾನಗಳು ಇವೆ. ಒಂದು ಕಾಲದಲ್ಲಿ ಇದು ಮೈಸೂರು ರಾಜ್ಯದ ರಾಜಧಾನಿಯಾಗಿತ್ತು.

೨. ಕಠಿನ ಪದಗಳ ಅರ್ಥ :—

ಇಚ್ಛೆ = ಆಸೆ, ಅಪೇಕ್ಷೆ. ಚಾರಿತ್ರಕ = ಚರಿತ್ರೆಗೆ ಸಂಬಂಧಿಸಿದ. ಅಂಟಿನುಂಡೆ = ಉತ್ತರ ಕರ್ನಾಟಕದಲ್ಲಿ ಮಾಡುವ ಒಂದು ಬಗೆ ಸಿಹಿ ಉಂಡೆ. ಸಜ್ಜಪ್ಪ = ಒಂದು ಬಗೆ ಸಿಹಿ ತಿಂಡಿ. ದರಿಯಾದವಲತ್ = ಇದು ಟಿಪ್ಪುವಿನ ಬೇಸಗೆಯ ಅರಮನೆ. ಮಸೀದಿ = ಇದು ತುಂಬ ಎತ್ತರವಾದ ಎರಡು ಗೋಪುರಗಳನ್ನು ಹೊಂದಿದೆ. ಮೇಲೆ ನಿಂತರೆ ಶ್ರೀರಂಗಪಟ್ಟಣವನ್ನು ಪೂರ್ತಿ ನೋಡಬಹುದು. ಗುಂಬಜ್ = ಇಲ್ಲಿ ಹೈದರ್, ಟಿಪ್ಪು ಮತ್ತು ಹೈದರನ ಹೆಂಡತಿ ಇವರ ಸಮಾಧಿ ಇವೆ. ಇಲ್ಲಿನ ಕಪ್ಪುಕಲ್ಲಿನ ಕಂಬಗಳನ್ನು ಎಲ್ಲರೂ ಮೆಚ್ಚಿದ್ದಾರೆ. ಇದು ಶ್ರೀರಂಗಪಟ್ಟಣಕ್ಕೆ ಸ್ವಲ್ಪ ದೂರದಲ್ಲಿ ಇದೆ. ಸೆರೆಕೋಣೆ = ಟಿಪ್ಪು ಇಂಗ್ಲೀಷ್ ಸೆರೆಯಾಳು ಗಳನ್ನು ಇಲ್ಲಿ ಇಟ್ಟಿದ್ದನೆಂದು ಹೇಳುತ್ತಾರೆ.

೩. ವ್ಯಾಕರಣ :—

(i) ಈ ಪದಗಳ ಲಿಂಗಗಳನ್ನು ಹೇಳಿ :—

ಬೋರ್ಡು	ಮಗ
ಕಟ್ಟಡ	ಪಟೇಲ
ವಿದ್ಯಾರ್ಥಿ	ಉಪಾಧ್ಯಾಯ
ತಂದೆ	ನದಿ
ತಾಯಿ	ಮಸೀದಿ

(ii) ಮೇಲಿನ ಶಬ್ದಗಳ ಪಟ್ಟಿಯಲ್ಲಿ ಸಂಸ್ಕೃತ ಪದಗಳನ್ನು ಗುರುತಿಸಿ.

(iii) ಈ ಪದಗಳಿಗೆ ಬಹುವಚನರೂಪಗಳನ್ನು ಬರೆಯಿರಿ :—

ಗಂಟು	ಮಗು	ಪ್ರವಾಸ
ತಿಂಡಿ	ಉಪಾಧ್ಯಾಯ	ಹುಡುಗ
ತಾಯಿ	ಅಧ್ಯಾಪಕ	ಅವನು

೧. (i) ಮಕ್ಕಳಿಗೆ ಪ್ರವಾಸದ ಆಸೆ ಏಕೆ ಆಯಿತು ?
(ii) ಈ ಆಸೆಗೆ ಪ್ರೋತ್ಸಾಹ ಕೊಟ್ಟವರು ಯಾರು ?
(iii) ಚರಿತ್ರೆಯ ಅಧ್ಯಾಪಕರ ಗುಣ ಎಂಥದು ?
(iv) ಯಾವ ಯಾವ ಹುಡುಗರು ಏನೇನು ಕೆಲಸ ಮಾಡಿದರು ?
(v) ನೀವು ಮಾಡಿದ ಇಂಥ ಪ್ರವಾಸದ ಬಗ್ಗೆ ಹತ್ತು ವಾಕ್ಯಗಳನ್ನು ಬರೆಯಿರಿ.

---

೭. ಜೇನುಗೂಡು

ರಾಜು, ಈ ಜೇನುಗೂಡಿನ ಕಟ್ಟಡದ ಮಾಟ ಎಷ್ಟು ಅದ್ಭುತವಾಗಿದೆ. ನೋಡು! ಗೂಡೇನು! ಇದೊಂದು ಮಹಲೇ ಸರಿ! ಮೇಣದ ಮಹಲು! ಜೇನಿನ ಮುಂದೆ ನಾವು ದರಿದ್ರರು. ನಮ್ಮ ಮನೆಗಳಲ್ಲಿ ಹೆಚ್ಚೆಂದರೆ ನಾಲ್ಕಾರು ಕೋಣೆಗಳಿರುತ್ತವೆ. ಜೇನಿನ ಮಹಲಿನಲ್ಲಿ ಅಂತಹ ಕೋಣೆಗಳು ಅನೇಕ. ತಾಳ್ಮೆಯಿದ್ದು ಎಣಿಸಿದರೆ ಅವುಗಳ ಸಂಖ್ಯೆ ಲಕ್ಷ ಮುಟ್ಟುತ್ತದೆ. ಜೇನು ತಾನು ವಾಸಿಸುವುದು, ಮೊಟ್ಟೆ ಇಡುವುದು, ಮರಿಗಳನ್ನು ಬೆಳೆಸುವುದು. ಆಹಾರ ತುಂಬಿಡುವುದು, ಎಲ್ಲವು ಈ ಕೋಣೆಗಳಲ್ಲಿಯೇ.

ಜೇನುಗೂಡಿನ ಅಂಚನ್ನು ಮುರಿದು ನೋಡು, ಹೇಗೆ ಮೆತ್ತಗಿದೆ. ಇದನ್ನೇ ಮೇಣ ಅನ್ನುವುದು. ನಮ್ಮ ಮನೆಗಳಿಗೆ ಇಟ್ಟಿಗೆ ಗಾರೆಗಳಿದ್ದಂತೆ, ಜೇನುಗೂಡಿಗೆ ಈ ಮೇಣ ಮೂಲ ಸಾಮಗ್ರಿ. ನಾವು ಮನೆ ಕಟ್ಟಲು ಹತ್ತಾರು ತರಹೆಯ ಸಾಮಗ್ರಿ ಬೇಕು—ಇಟ್ಟಿಗೆ, ಗಾರೆ, ಸಿಮೆಂಟು, ಕಬ್ಬಿಣ, ಮರಮುಟ್ಟು, ಇತ್ಯಾದಿ. ಜೇನಿಗೆ ತನ್ನ ಗೂಡು ಕಟ್ಟಲು ಈ ಮೇಣವೊಂದೇ ಸಾಕು. ನಾವು ಪ್ರತಿಯೊಂದನ್ನು ದುಡ್ಡು ತೆತ್ತು ತರಬೇಕು. ಜೇನಾದರೋ ಈ ನಿರ್ಮಾಣ ಸಾಮಗ್ರಿಯನ್ನು ತನ್ನ ದೇಹದಿಂದ ತಾನೇ ಉತ್ಪತ್ತಿ ಮಾಡಿಕೊಳ್ಳುತ್ತದೆ.

ಇಡೀ ಕೀಟಗಳ ಜಾತಿಯಲ್ಲೇ ಜೇನಿಗೆ ಸರಿಗಟ್ಟುವ ಕೀಟ ಇನ್ನೊಂದಿಲ್ಲ. ಅದರ ಜೀವನವೇ ಅದ್ಭುತ. ಅದು ಮನುಷ್ಯನಿಗೆ ಮಹಾ ಉಪಕಾರಿ. ಸೊಳ್ಳೆ, ತಿಗಣೆಗಳು ನಮ್ಮ ರಕ್ತಹೀರಿ, ನೊಣ ನಾವು ತಿನ್ನುವ ಆಹಾರಕ್ಕೆ ಮುತ್ತಿ ಭಯಂಕರ ರೋಗಗಳನ್ನು ಹರಡುತ್ತವೆ. ಇರುವೆ, ಜಿರಳೆಗಳೂ ಹಾಗೆಯೇ. ಗೆದ್ದಲು ನಮ್ಮ ಮರಮುಟ್ಟುಗಳನ್ನು ತಿಂದು ಮನೆ ಹಾಳು ಮಾಡುತ್ತದೆ. ಆದರೆ ಜೇನು ಈ ಕೀಟಗಳಂತೆ ವಿನಾಶಕಾರಿಯಲ್ಲ. ಅದು ನಮಗೆ ರುಚಿಕರವಾದ

ಜೇನುತುಪ್ಪ ತಯಾರಿಸಿ ಬಾಯಿ ಸಿಹಿ ಮಾಡುತ್ತದೆ. ಅಷ್ಟೇ ಅಲ್ಲ : ಜಗತ್ತಿನಲ್ಲಿ ಜೇನಿಲ್ಲದೆ ಹೋಗಿದ್ದರೆ ನಾವು ಅದೆಷ್ಟೋ ಹಣ್ಣು ಕಾಯಿಗಳ ಮುಖ ನೋಡುತ್ತಿರಲಿಲ್ಲ.



ನಾವು ಮನೆ ಕಟ್ಟುವ ಮೊದಲು ನೆಲವನ್ನು ಮಟ್ಟಸಮ ಮಾಡುತ್ತೇವೆ ತಾನೆ ? ಜೇನುಗಳೂ ಹಾಗೆಯೇ ಮಾಡುತ್ತವೆ. ಇಲ್ಲವಾದರೆ ಗೂಡು ಸಮನಾಗಿ ನಿಲ್ಲುವುದೆಂತು ! ಕಳ್ಳಿ, ನಂದಿಬಟ್ಟಲು ಮುಂತಾದ ಗಿಡಗಳ ಕೊಂಬೆಯನ್ನು ಮುರಿದಾಗ ಒಂದು ಬಗೆಯ ಹಾಲು ಸೋರುವುದನ್ನು ನೀನು ನೋಡಿದ್ದೀಯೆ. ಅದೇ ಒಣಗಿದ ಮೇಲೆ ಗೋಂದಿನಂತಹ ಅಂಟಾಗುತ್ತದೆ. ಮನೆಜೇನುಗಳು ಕಸ ಕೊಳಕೆಲ್ಲವನ್ನು ಬಳಿದು ಸ್ವಚ್ಛ ಮಾಡುತ್ತಿರುವಾಗ ಬಯಲುಜೇನುಗಳ ಇನ್ನೊಂದು ಗುಂಪು ರೆಂಬೆ ಕೊಂಬೆಗಳ ಸಂದಿನಿಂದ, ಮೊಗ್ಗಿನ ಅಡಿಯಿಂದ ಈ ಅಂಟನ್ನು ಶೇಖರಿಸಿಕೊಂಡು ಬರುತ್ತದೆ. ಇದು ಜೇನಿನ ಉಪಯೋಗಕ್ಕೆ ಮಾತ್ರ ಬರುವ ಅಂಟು.

ಜೇನಿಗೆ ಗಾಳಿಯೆಂದರೆ ಮಹಾ ಭೀತಿ. ಗೂಡಿನೊಳಗೆ ಗಾಳಿ ಹಾಯದಂತೆ ಅದು ಬಿರುಕುಗಳನ್ನೆಲ್ಲ ಈ ಅಂಟಿನಿಂದ ಮುಚ್ಚಿ ಭದ್ರವಾಗಿ ಪಾಯ ಹಾಕುತ್ತದೆ. ಜೇನುಗೂಡು ಕೊಂಬೆಯ ಮೇಲಿನಿಂದ ಕೆಳಕ್ಕೆ ಬೀಳದಂತೆ ಅದನ್ನು ಹಿಡಿದೆತ್ತಿ ನಿಲ್ಲಿಸುವುದು ಈ ಅಂಟೇ. ಇದಾದ ಮೇಲೆ ಸಾವಿರಾರು ಹುಳುಗಳು ತಮ್ಮ ದೇಹದ ತಳದಿಂದ ಒಸರುವ ಮೇಣದ ಚಕ್ಕೆಗಳಿಂದ ಗೂಡುಗಳನ್ನು ಕಟ್ಟುತ್ತವೆ. ಸಾವಿರಾರು ಹುಳುಗಳು ಶ್ರಮದಿಂದ ಅನೇಕ ದಿನಗಳವರೆಗೆ ಈ ಗೂಡಿನ

ಮಾರ್ಗವಾಗಿ ಸಾಧಾರಣ ಗಾತ್ರದ ಗೂಡೊಂದನ್ನು ನಿರ್ಮಿಸಲು ಇಪ್ಪತ್ತು ಸಾವಿರ ಹುಳುಗಳ ಹಿಂಡಿಗೆ ಒಂದೆರಡು ತಿಂಗಳಾದರೂ ಹಿಡಿಯುತ್ತದೆ.

ಜೇನಿಗೆ ಮನುಷ್ಯರಷ್ಟು ಬುದ್ಧಿಯಿಲ್ಲ. ನಿಜ. ಅವರೆಯಷ್ಟು ಗಾತ್ರದ ಆ ಹುಳುವಿಗೆ ಇರುವುದು ಸಾಸಿವೆಯ ಗಾತ್ರದ ಮಿದುಳು. ಆದರೂ ಪ್ರಕೃತಿ ಅದನ್ನು ಒಬ್ಬ ಪ್ರತಿಭಾವಂತ ಇಂಜಿನಿಯರನ್ನಾಗಿ, ಅದ್ಭುತ ವಾಸ್ತುಶಿಲ್ಪಿಯನ್ನಾಗಿ ಮಾಡಿದೆ. ಅದರ ನಿರ್ಮಾಣಕೌಶಲ ನಮ್ಮನ್ನು ದಂಗು ಬಡಿಸುತ್ತದೆ. ಮನುಷ್ಯರ ಹಾಗೂ ಪ್ರಾಣಿಗಳ ಕೈಗೆ ಎಟುಕದಿರಲೆಂದೋ, ಮೇಲಿದ್ದಷ್ಟೂ ಸೌಂದರ್ಯ ಹೆಚ್ಚೆಂದೋ ಜೇನು ಸಾಧಾರಣವಾಗಿ ಮೇಲೆ ಗೂಡು ಕಟ್ಟುತ್ತದೆ ; ಭೂಮಿಗೆ ಎತ್ತರದಲ್ಲಿ. ಅದೂ ಮೇಲಿನಿಂದ ಕೆಳಕ್ಕೇ ಹೊರತು ಕೆಳಗಿನಿಂದ ಮೇಲಕ್ಕಲ್ಲ. ಅವುಗಳಂತೆ ನಮ್ಮ ಇಂಜಿನಿಯರುಗಳು ಬೇರೆ ಯಾವ ಆಧಾರವೂ ಇಲ್ಲದೆ ಬರಿಯ ಮೇಣದಂತಹ ವಸ್ತುವಿನಿಂದ ಮೇಲಿನಿಂದ ಕೆಳಕ್ಕೆ ಭಾರ ತಡೆಯಬಲ್ಲ ಆಕಾಶಸೌಧವನ್ನು ಕಟ್ಟಿ ನೋಡಲಿ, ಆಗ ತಿಳಿಯುತ್ತದೆ ಜೇನಿನ ಹಿರಿಮೆ !

ಅಭ್ಯಾಸ

೧. ಕಠಿನ ಪದಗಳ ಅರ್ಥ :—

ಅದ್ಭುತ = ಆಶ್ಚರ್ಯಕರ. ಸ್ವಚ್ಛ = ಶುಭ್ರ. ಮಹಲು = ದೊಡ್ಡ ಮನೆ. ವಾಸ್ತುಶಿಲ್ಪಿ = ಕಟ್ಟಡಗಳನ್ನು ಕಟ್ಟುವ ಶಿಲ್ಪಿ. ತಾಳ್ಮೆ = ಸೈರಣೆ. ಆಕಾಶಸೌಧ = ನೆಲವನ್ನು ಮುಟ್ಟದ ಮಹಡಿಯ ಮನೆ. ನಿರ್ಮಾಣ = ಕಟ್ಟುವುದು. ಸಾಮಗ್ರಿ = ಪದಾರ್ಥ. ವಿನಾಶಕಾರಿ = ನಾಶ ಮಾಡುವವ. ಮಟ್ಟಸ = ಸಮಕಟ್ಟು. ಮನೆಜೇನು = ಗೂಡಿನಲ್ಲಿದ್ದು ಕೆಲಸ ಮಾಡುವ ಹುಳು. ಬಯಲುಜೇನು = ಹೊರಗೆ ಹಾರಿ ಹೋಗಿ ಮಕರಂದ, ಪರಾಗಗಳನ್ನು ತರುವ ಕೆಲಸದ ಹುಳು.

೨. ಸಾಮಗ್ರಿ, ಉತ್ಪತ್ತಿ, ಉಪಕಾರಿ, ಸ್ವಚ್ಛಮಾಡು. ಹಿಡಿದೆತ್ತಿ ನಿಲ್ಲಿಸು, ಹಲ್ಲೆ—ಈ ಪದಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಉಪಯೋಗಿಸಿ.

೩. (i) ಜೇನಿನ ಮನೆಗೂ ನಮ್ಮ ಮನೆಗೂ ಏನು ವ್ಯತ್ಯಾಸ ?

(ii) ಜೇನು ಹೇಗೆ ಅಂಟನ್ನು ತರುತ್ತದೆ ?

(iii) ಜೇನು ಮನೆ ಕಟ್ಟುವ ರೀತಿ ಯಾವುದು ?

(iv) ಮನುಷ್ಯನಿಗಿಂತ ಜೇನು ಹೇಗೆ ಹೆಚ್ಚು ಬುದ್ಧಿವಂತವಾದುದು ?

ಈ ಗದ್ಯಭಾಗವನ್ನು ಎಸ್. ಬಾಲುರಾವ್ ಅವರು ಬರೆದಿರುವ ' ಜೇನವ್ವನ ಸಂಸಾರ ' ಎಂಬ ಗ್ರಂಥದಿಂದ ಆರಿಸಿ ಹೊಂದಿಸಿದೆ. ಈ ಪುಸ್ತಕವನ್ನು ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದೆ. ಆ ಪುಸ್ತಕವನ್ನು ತರಿಸಿ ಓದಿ.

———

೮. ನವರಾತ್ರಿ

ಭಾದ್ರಪದ ತಿಂಗಳು ಮುಗಿಯುವ ಹೊತ್ತಿಗೆ ಬಹುತರವಾಗಿ ಮಳೆ ಹೊರಪಾಗಿರುತ್ತದೆ. ಹೊಲಗದ್ದೆಗಳಲ್ಲಿ ಕೊಯ್ಲಿಗೆ ಬೆಳೆ ತೂಗಲಾಡುತ್ತಿರುತ್ತದೆ. ಸಮುದ್ರವನ್ನೇ ಉಟ್ಟ ಭೂಮಿತಾಯಿ ಹಸಿರು ಕುಪ್ಪಸ ತೊಟ್ಟಂತೆ ಬೆಳೆಗಳ ಬಣ್ಣ ಒಪ್ಪವಿಟ್ಟಿರುತ್ತದೆ. ಹೊಳೆ ಹಳ್ಳಗಳು ಒಡಲಿನಲ್ಲಿ ತಿಳಿನೀರು ತುಂಬಿಕೊಂಡು, ನೀಲಾಕಾಶವನ್ನು ಒಡಮೂಡಿಸುತ್ತವೆ. ಸುತ್ತಲೂ ಕಣ್ಣರಳಿಸಿ ನೋಡಿದರೆ ಪ್ರಸನ್ನತೆ ಸೂಸುತ್ತದೆ. ಅದು ನವರಾತ್ರಿಯ ಆಗಮನದ ಸೂಚನೆ.

ಮನೆ ಮನೆಯಲ್ಲಿ ಹಬ್ಬದ ಸಿದ್ಧತೆ. ನೆಲ–ಗೋಡೆಗಳನ್ನು ಸಾರಣೆ–ಕಾರಣೆಗಳಿಂದ ಸಿಂಗರಿಸಿದ್ದಾರೆ. ಹಾಸಿಗೆ–ಹೊದಿಕೆಗಳನ್ನು ಒಗೆದು ತಂದು ಮಡಿ ಮಾಡಿದ್ದಾರೆ. ಆಶ್ವೀಜ ಶುದ್ಧ ಪ್ರತಿಪದೆಯ ದಿವಸ ದೇವಿಯ ಹೆಸರಿನಲ್ಲಿ ದೀಪ ಹಾಕುವ ಏರ್ಪಾಡು ನಡೆದಿದೆ. ಎಲ್ಲಮ್ಮ, ಜಗದಂಬೆ ಮೊದಲಾದ ಹೆಸರಿನಿಂದ ಒಂಬತ್ತು ದಿನ. ಮಹಾನವಮಿಯವರೆಗೆ ನೋಂಪಿಯಲ್ಲಿ ತೊಡಗುವರು. ಗೃಹಿಣಿಯರು ಉಪವಾಸವನ್ನೋ, ಫಲಹಾರವನ್ನೋ ಕೈಕೊಂಡು ದೇವರ ಜಗುಲಿಗೆ ತಲೆಕೊಟ್ಟು ಮಲಗುವರು. ಒಂದು ಪಾತ್ರೆಯಲ್ಲಿ ಸ್ವಚ್ಛ ಮಣ್ಣು ತುಂಬಿ, ಅದರಲ್ಲಿ ವಿವಿಧ ಬೀಜಗಳನ್ನು ಕಲಸಿ ಅದನ್ನು ಜಗುಲಿಯ ಮೇಲಿಡುವರು. ಅದಕ್ಕೆ ಘಟಸ್ಥಾಪನೆ ಅನ್ನುತ್ತಾರೆ.

ಆ ರಾತ್ರಿಗಳು ಸಂಖ್ಯೆಯಲ್ಲಿ ನವರಾತ್ರಿಯಾದಂತೆ, ಮನಸ್ಸನ್ನು ಪರಿಶುದ್ಧಗೊಳಿಸುವ ನವರಾತ್ರಿಯಾಗಿಯೂ ಪರಿಣಮಿಸುತ್ತವೆ. ಕರ್ನಾಟಕವು ಇದೇ ಸಂದರ್ಭವನ್ನು ನಾಡಹಬ್ಬವೆಂದು ಆಯ್ಕೆ ಮಾಡಿಕೊಂಡಿರುತ್ತದೆ. ಮನೆಗಳೆಲ್ಲ ಥಳಥಳವಾಗಿ, ಮನಗಳೆಲ್ಲ ಪರಿಶುದ್ಧಗೊಳ್ಳುತ್ತಿರುವಾಗ ಗ್ರಾಮದ ಪರವಾಗಿ ದೇವಿಯ ಉಪಾಸನೆ ನಡೆಯಬೇಡವೇ?

ಶಾಲೆಯಲ್ಲಿ ನಮ್ಮ ನಾಡದೇವಿಯನ್ನು ಭುವನೇಶ್ವರಿ ಇಲ್ಲವೆ ಚಾಮುಂಡೇಶ್ವರಿ ಎಂಬ ಹೆಸರಿನಲ್ಲಿ ಸ್ಥಾಪಿಸುವರು. ಪಾತ್ರೆಯಲ್ಲಿ ತುಂಬಿದ ಮಣ್ಣಿನಲ್ಲಿ ಊರಿದ್ದ ಬೀಜಗಳೆಲ್ಲ ಮೊಳೆತು ಭರದಿಂದ ಬೆಳೆಯುತ್ತ ದಟ್ಟ ಸಸಿಯಾಗುವವು. ಬೆಳಗು ಮುಂಜಾನೆ ನಾಡದೇವಿಯನ್ನು "ಏಳು ಶೂರರ ಖಣೀ" ಎಂಬ ಹಾಡಿನಿಂದ ಎಬ್ಬಿಸಿ, ಕನ್ನಡತಾಯನ್ನು ಚಿತ್ರಿಸಿದ ಧ್ವಜವನ್ನು ಎತ್ತಿಕೊಂಡು ಶಾಲೆಯ

ಬಾಲಕರು ನಗರ ಸಂಕೀರ್ತನಕ್ಕೆ ಹೊರಡುವರು. ಅಷ್ಟರಲ್ಲಿ ಪ್ರತಿಯೊಂದು ಮನೆಯವರು ತಮ್ಮ ತಲೆಬಾಗಿಲ ಮುಂದೆ ನೀರ ತಳಿಹಾಕಿ. ರಂಗವಲ್ಲಿ ರೇಖಿಸಿರು ತ್ತಾರೆ. ಸಂಕೀರ್ತನವು ಮನೆಯ ಮುಂದೆ ಬರುತ್ತಲೆ ಮನೆಯವರು ಧ್ವಜದಡಿಗೆ ಬಿಂದಿಗೆ ನೀರು ಸುರಿದು. ಹೂಮಾಲೆ ಹಾಕಿ ಆರತಿ ಬೆಳಗುವರು ; ತೆಂಗು ಒಡೆಯು ವರು. ಇಲ್ಲವೆ ಉತ್ತತ್ತಿ ಅಥವಾ ಕಲ್ಲುಸಕ್ಕರೆಯನ್ನು ನೈವೇದ್ಯಕ್ಕೆ ತೋರಿಸುವರು. ಬಳಿಕ 'ಕನ್ನಡ ತಾಯಿಗೆ ಜಯವಾಗಲಿ' ಎಂದು ಉಗ್ಗಡಿಸಿ ಬಾಲಕ ವೃಂದವು ಮುಂದೆ ಸಾಗುವುದು.

"ಸಿರಿನಾಡ ಭೂಮಿತಾಯಿ ಬಂದಿಹಳಿದೋ ನೀವೇಳಿ" ಎಂಬ ಹಾಡು ಕೇಳಿ. ಎದ್ದು ಬಂದು ಎಲ್ಲ ಜಾತಿಯವರು ತಲೆವಾಗಿ ಕೈ ಮುಗಿಯುವರು. ನವ ರಾತ್ರಿಯ ಒಂಬತ್ತು ದಿನಗಳ ಬೆಳಗಿನಲ್ಲಿ ನಾಡ ದೇವಿಯ ಸ್ತುತಿಯನ್ನು. ನಾಡ ಹಿರಿಮೆಯ ಹಾಡುಗಳನ್ನು ಕಿವಿ ತುಂಬುವಂತೆ ಕೇಳಿ ಸಾಮಾಜಿಕರು ಉತ್ಸಾಹ ಗೊಳ್ಳುವರು. ನಗರ ಸಂಕೀರ್ತನವೇ ಬೆಳಗು ಮುಂಜಾವಿನ ಕಾರ್ಯಕ್ರಮ. ಅದು 'ಏರಿಸಿ ಹಾರಿಸು ಕನ್ನಡದ ಬಾವುಟಾ' ಎಂಬ ಗೀತದಿಂದ ಕೊನೆಗೊಳ್ಳುತ್ತದೆ.

ಶಾಲೆಯ ಬಾಲಕರಲ್ಲಿ ಹಲವು ವಿಧದ ಪಂದ್ಯಾಟಗಳನ್ನು ನಡೆಸಲಾಗುವದು. ಕೆಲವರು ನಿಬಂಧ ಸ್ಪರ್ಧೆಯಲ್ಲಿ. ಕೆಲವರು ಗಾಯನ ಸ್ಪರ್ಧೆಯಲ್ಲಿ ಭಾಗ ವಹಿಸುವರು. ಚಿಕ್ಕ ಚಿಕ್ಕ ಏಕಾಂಕಗಳನ್ನು ಅಭಿನಯಿಸುವರು. ಹಾಸ್ಯ ವಿನೋದ ಗಳಿಂದ ಸಾಮಾಜಿಕರನ್ನು ಹರುಷಗೊಳಿಸುವರು. ಹೆಣ್ಣು ಮಕ್ಕಳು ತಮ್ಮ ಕಸೂತಿ–ರಂಗವಲ್ಲಿಗಳನ್ನು ಪ್ರದರ್ಶಿಸುವರು. ಸ್ಪರ್ಧೆಯಲ್ಲಿ ಗೆಲುವು ಪಡೆದವರಿಗೆ ಕೊನೆಯ ದಿನ ಬಹುಮಾನ ನೀಡಲಾಗುವುದು.



ನಾಡಿನಲ್ಲಿ ಹೆಸರು ಗಳಿಸಿದ ಒಬ್ಬಿಬ್ಬರು ಸಾಹಿತಿಗಳನ್ನು ಬರಮಾಡಿಕೊಂಡು ಅವರ ಭಾಷಣವನ್ನು ಸಾಯಂಕಾಲದಲ್ಲಿ ಏರ್ಪಡಿಸುವರು. ಕೀರ್ತನ, ಏಕಪಾತ್ರಾಭಿನಯ ಕಾರ್ಯಕ್ರಮಗಳನ್ನೂ ಇರಿಸಿಕೊಳ್ಳುವದುಂಟು. ನವರಾತ್ರಿಯ ಒಂಬತ್ತು ದಿವಸ ಊರೊಳಗಿನ ಗಂಡಸರೂ ಹೆಂಗಸರೂ ಹಲವು ವಿಧದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕಂಡು ಕೇಳಿ ಹರುಷಗೊಳ್ಳುವರು. ಹಿಂದಿನ ಹನ್ನೆರಡು ತಿಂಗಳು ತುಕ್ಕು ಹಿಡಿದ ಮನಸ್ಸು ಬುದ್ಧಿಗಳಲ್ಲಿ ಅದಾವುದೋ ನವಶಕ್ತಿಯನ್ನು ತುಂಬಿಕೊಳ್ಳುವರು. ಅದೆಂಥದೋ ಹೊಸ ಲೋಕಕ್ಕೆ ಬಂದ ಅನುಭವ ಅವರಿಗಾಗುವದು. ಹಿಂದಿನ ಕಾಲದಲ್ಲಿ ರಾಜರು ದಸರೆಯ ದಿನ ಸೇನಾಸಮೇತವಾಗಿ ಸೀಮೋಲ್ಲಂಘನ ಮಾಡುತ್ತಿದ್ದರು. ಇಂದಿನ ಯುಗದಲ್ಲಿ ಪ್ರಜೆಗಳು ಹಳೆಯ ವಿಚಾರಗಳನ್ನು ಕೊಡಹಿ, ಹೊಸ ವಿಚಾರಗಳಲ್ಲಿ ಅಡಿಯಿಟ್ಟರೆ ಸೀಮೋಲ್ಲಂಘನ ಮಾಡಿದಂತಾಗುವುದಿಲ್ಲವೇ ?

ನಾಡಹಬ್ಬದ ಈ ಕಾರ್ಯಕ್ರಮವು ಒಂಬತ್ತು ದಿವಸ ಅದ್ದೂರಿಯಿಂದ ನಡಯುವಂತೆ. ಪಂಚಾಯತಿಯವರು ಹಲವು ವಿಧದಿಂದ ಸಹಾಯ ನೀಡುವರು. ಶಾಲೆಯ ಗುರುಗಳೆಲ್ಲ ಅತಿ ಉತ್ಸಾಹದಿಂದ ಸಹಕರಿಸಿ, ವಿದ್ಯಾರ್ಥಿಗಳನ್ನು ಪಠ್ಯೇತರ ಚಟುವಟಿಕೆಗಳಲ್ಲಿ ತರಬೇತಿಗೊಳಿಸುವರು ; ಹಾಗೂ ಕಾರ್‍ಯವನ್ನು ನಿರ್ವಹಿಸಿಕೊಂಡು ಹೋಗುವರು.

ನವರಾತ್ರಿಗಳನ್ನು ಈ ವಿಧದಲ್ಲಿ ಆಚರಿಸಿದ ಬಾಲಕರಿಗೆ ದಸರೆಯ ಹಬ್ಬ ದೂಟವು ಅಣಿಯಾಗಿರುತ್ತದೆ. ಅವರು ತಮ್ಮ ತಮ್ಮ ಪಾಲಕರೊಡನೆ ವಾದ್ಯ ಗಳನ್ನು ಊದಿಸುತ್ತ, ಬಾರಿಸುತ್ತ ಶಮೀ ವೃಕ್ಷವನ್ನು ಪೂಜಿಸಲು ಊರ ಹೊರಗೆ ಸಾಗುವರು. ಆ ಮೇಲೆ ಶಮೀದಳ ಅಂದರೆ ಬನ್ನಿಯ ಪತ್ರೆಯನ್ನು 'ಬಂಗಾರ' ವೆಂದು ಕರೆದು ಗುರುಹಿರಿಯರಿಗೆ ಕೊಟ್ಟು ವಂದಿಸಿ, ಆಶೀರ್ವಾದ ಪಡೆಯುವರು. ಹಿಂದಿನ ಹನ್ನೆರಡು ತಿಂಗಳಲ್ಲಿ ಏನಾದರೂ ಮನಸ್ತಾಪ ಮಾಡಿಕೊಂಡವರು, ದಸರೆಯ ದಿನ ಪರಸ್ಪರ ಬನ್ನಿ–ಬಂಗಾರ ಕೊಟ್ಟು ಮನಸ್ತಾಪವನ್ನು ಮರೆತು ಸ್ನೇಹದಿಂದ ಇರತೊಡಗುವರು.

ಅಭ್ಯಾಸ

೧. ಇಡಿಯ ಕರ್ನಾಟಕದಲ್ಲಿ ನವರಾತ್ರಿಯನ್ನು ಆಚರಿಸಲಾಗುತ್ತದೆ. ಆದರೆ ಆಚರಿಸುವ ವಿಧಾನವು ಮಾತ್ರ ಎಲ್ಲ ಕಡೆಗೆ ಒಂದೇ ಪ್ರಕಾರವಾಗಿಲ್ಲ.

೨. (ಅ) ಕಠಿನ ಶಬ್ದಗಳ ಅರ್ಥ :—

ಪ್ರಸನ್ನತೆ = ಹರುಷ : ನೋಂಪಿ = ವ್ರತ : ಗೃಹಿಣಿ = ಮನೆಯ ಒಡತಿ ; ನವ = ಒಂಬತ್ತು, ಹೊಸ ; ಪರಿಣಮಿಸು = ಉಂಟಾಗು : ನಗರ ಸಂಕೀರ್ತನ = ಪ್ರಭಾತ ಫೇರಿ ; ಉಗ್ಗಡಿಸು = ಘೋಷಿಸು ; ವೃಂದ = ಸಮೂಹ : ಪಂದ್ಯಾಟ = ಮೇಲಾಟ, ಸ್ಪರ್ಧೆ ; ಸಾಹಿತಿ = ಸಾಹಿತ್ಯವನ್ನು ತಿಳಿದವ : ತುಕ್ಕು = ಜಂಗು : ಸೀಮೋಲ್ಲಂಘನ = ಎಲ್ಲೆಯನ್ನು ದಾಟುವುದು ; ಅದ್ದೂರಿ = ವೈಭವ ; ಶಮೀವೃಕ್ಷ = ಬನ್ನಿಮರ ; ಮನಸ್ತಾಪ = ದ್ವೇಷ. ಹಗೆತನ : ಸ್ನೇಹ = ಪ್ರೀತಿ.

(ಆ) ನುಡಿಗಟ್ಟು :—

(i) ಘಟಸ್ಥಾಪನೆಯ ದಿವಸ ಹೊತ್ತಿಸಿದ ದೀವಿಗೆ ವಿಜಯದಶಮಿಯವರಗೆ, ಅಖಂಡವಾಗಿ ಬೆಳಗುವಂತೆ ಏರ್ಪಾಡುಗೊಳಿಸುವುದಕ್ಕೆ ದೀಪಹಾಕುವುದು ಅನ್ನುತ್ತಾರೆ. ಅದೇ ನಂದಾದೀಪ.

(ii) ನಾಟಕದೊಳಗಿನ ಎಲ್ಲ ಪಾತ್ರಗಳನ್ನು ವಿವಿಧ ಭಂಗಿಗಳಲ್ಲಿ ಒಬ್ಬನೇ ಅಭಿನಯಿಸುವುದಕ್ಕೆ ಏಕಪಾತ್ರಾಭಿನಯವೆನ್ನುತ್ತಾರೆ.

೩. ವ್ಯಾಕರಣ ವಿಶೇಷ—

(ಅ) ನಾಮಗಳನ್ನು (ರೂಢ–ಅಂಕಿತ–ಅನ್ವರ್ಥಗಳಲ್ಲಿ) ವಿಂಗಡಿಸಿ :—

ಕುಪ್ಪಸ, ಆಶ್ವೀಜ, ಎಲ್ಲಮ್ಮ, ಗೃಹಿಣಿ, ಕರ್ನಾಟಕ, ವಿದ್ಯಾರ್ಥಿ, ಬೀಜ, ಕಲ್ಲುಸಕ್ಕರೆ.

(ಆ) ಲಿಂಗಗಳನ್ನು ಬದಲಿಸಿ—ನಾಡದೇವಿ, ಬಾಲಕ, ಗೃಹಿಣಿ, ಗುರು.

ವಿಭಕ್ತಿ ಕ್ರಮದಿಂದ ಎರಡೂ ವಚನಗಳಲ್ಲಿ ಹೇಳಿ—ಜಗುಲಿ, ಏಕಾಂಕ.

(ಇ) ಸಂಧಿಯನ್ನು ಕಂಡುಹಿಡಿಯಿರಿ (ಶಬ್ದ ಬಿಡಿಸಿ)—ನೀಲಾಕಾಶ, ಭುವನೇಶ್ವರಿ, ಫಲಾಹಾರ. ಧ್ವಜದಡಿಗೆ, ತಲೆವಾಗಿ, ಏಕಾಂಕ, ಏಕಪಾತ್ರಾಭಿನಯ, ಸೀಮೋಲ್ಲಂಘನ, ಹಬ್ಬದೂಟ, ಪರ್ಯೇತರ.

೪. ಪ್ರಶ್ನೆಗಳು :—

(i) ನವರಾತ್ರಿಯ ಆಗಮನದ ಸೂಚನೆ ಯಾವುದು ?

(ii) ಘಟಸ್ಥಾಪನೆ ಅಂದರೇನು ?

(iii) ಪ್ರಜಾಪ್ರಭುತ್ವದಲ್ಲಿ ಸೀಮೋಲ್ಲಂಘನವನ್ನು ಸಾಧಿಸುವುದು ಹೇಗೆ ?

(iv) ಕರ್ನಾಟಕವು ನವರಾತ್ರಿಯನ್ನೇ ನಾಡಹಬ್ಬವೆಂದು ಆಯ್ದುಕೊಂಡ ಕಾರಣವೇನು?

---

೬. ಲಾಲಬಹಾದ್ದೂರ ಶಾಸ್ತ್ರಿ

ನೆಹರು ಅವರ ತರುವಾಯ ಸ್ವತಂತ್ರ ಭಾರತದ ಪ್ರಧಾನಿಯಾಗಿ ಪೂರ್ಣ ಯಶಸ್ಸನ್ನು ಗಳಿಸಿದವರೆಂದರೆ ಲಾಲಬಹಾದ್ದೂರ ಶಾಸ್ತ್ರಿ. ಲಾಲಬಹಾದ್ದೂರ ಅಂದರೆ ಮುದ್ದು ಪರಾಕ್ರಮಿ. ಅವರು ತಮ್ಮ ಅಂಕಿತ ನಾಮವನ್ನು ಅನ್ವರ್ಥ

ನಾಮವನ್ನಾಗಿ ಮಾರ್ಪಡಿಸಿಕೊಂಡವರು. ಲಾಲಬಹಾದ್ದೂರರು ಭಾರತದ ನಿಷ್ಠಾವಂತ ಜನನಾಯಕ.

ಲಾಲಬಹಾದ್ದೂರರು ಮುಘಲ್‌ಸರಾಯಿ ಎಂಬ ಹಳ್ಳಿಯಲ್ಲಿ ಗಾಂಧಿ ಜಯಂತಿ ದಿನ (೧೯೦೪) ಹುಟ್ಟಿದರು. ತಂದೆ ಬಡ ಉಪಾಧ್ಯಾಯನಾಗಿದ್ದ ಶಾರದಾ ಪ್ರಸಾದ : ತಾಯಿ ಶೀಲವತಿಯಾದ ರಾಮದುಲಾರಿ ದೇವಿ. ಒಂದು ವರ್ಷದ ಕೂಸು ಆಗಿರುವಾಗಲೇ ಲಾಲಬಹಾದ್ದೂರರು ತಂದೆಯನ್ನು ಕಳಕೊಂಡರು. ಎರಡು ಹೆಣ್ಣು ಒಂದು ಗಂಡು ಮಗುವಿನೊಡನೆ ತಾಯಿ ತನ್ನ ತಂದೆ ಹಜಾರಿಲಾಲರನ್ನು ಆಶ್ರಯಿಸಿದಳು.

ಅಜ್ಜ ಮೊಮ್ಮಗನನ್ನು ಚಿಟುಕಾಣಿ (ನನ್ಹಿ) ಎಂದು ಅಕ್ಕರೆಯಿಂದ ಕರೆಯುತ್ತಿದ್ದನು. ಅಜ್ಜನ ಮನೆಯಲ್ಲಿ ಹತ್ತು ವರ್ಷ ಕಳೆಯುವ ಹೊತ್ತಿಗೆ, ಲಾಲಬಹಾದ್ದೂರರು ೬ನೆಯ ತರಗತಿ ಮುಗಿಸಿದರು. ಮುಂದಿನ ವಿದ್ಯಾಭ್ಯಾಸಕ್ಕಾಗಿ ವಾರಣಾಸಿಯ ಹರಿಶ್ಚಂದ್ರ ಪ್ರೌಢಶಾಲೆಯನ್ನು ಪ್ರವೇಶಿಸಿದರು. ಅವರಲ್ಲಿ ಹುದುಗಿದ್ದ ಧೈರ್ಯ–ಆತ್ಮಾಭಿಮಾನಗಳು, ವಿದ್ಯಾರ್ಥಿಯಾಗಿರುವಾಗಲೇ ಪ್ರಕಟವಾದವು.

ಗಂಗಾನದಿಯ ಆಚೆಯ ದಡದಲ್ಲಿದ್ದ ಜಾತ್ರೆಗೆ, ಒಮ್ಮೆ ಲಾಲಬಹಾದ್ದೂರರು ಸಹಪಾಠಿಗಳೊಡನೆ ಹೋದರು. ಆದರೆ ಬರುವಾಗ ಓರಗೆಯವರ ಕಣ್ಣು ತಪ್ಪಿಸಬೇಕಾಯಿತು. ಯಾಕೆಂದರೆ ಅವರ ಬಳಿಯಲ್ಲಿ ದೋಣಿಯವನಿಗೆ ಕೊಡಲು ಕಾಸು ಇರಲಿಲ್ಲ. ಸ್ನೇಹಿತರನ್ನು ಕೇಳಲು ಅಭಿಮಾನ ಒಪ್ಪಲಿಲ್ಲ. ಸಾಯಂಕಾಲದ ಮಬ್ಬು ಕವಿಯುವ ಹೊತ್ತಿಗೆ. ಗಂಗೆಯನ್ನು ಹಾರಿ. ಈಜಿ ಈಚೆಗೆ ಬಂದರು. ಇನ್ನೊಮ್ಮೆ, ಉಪಾಧ್ಯಾಯರ ಮೂರು ವರ್ಷದ ಮಗು ನದಿಯಲ್ಲಿ ಮುಳುಗಿ ಹೋಗುವ ಸಂದರ್ಭ. ಮಗುವನ್ನು ಹೆಗಲ ಮೇಲೆ ಕುಳ್ಳಿರಿಸಿಕೊಂಡು ಈಜಿ ದಡವನ್ನು ಸೇರಿದರು : ಅಪಮೃತ್ಯುವಿನಿಂದ ಪಾರಾದರು.

ಚಿಕ್ಕಂದಿನಿಂದಲೂ ಓದಾಳಿಯಾದ ಅವರಿಗೆ ಗುರುನಾನಕರ ಪದ್ಯಗಳೆಂದರೆ ತುಂಬ ಇಷ್ಟ. "ಹುಲ್ಲಿನಂತೆ ಚಿಟುಕಾಣಿಯೆ ಆಗಿರು। ಹಸುರಾಗುಳಿವುದು ಮರವೊಣಗಿದರೂ" ಎಂಬ ಚುಟಕ ಯಾವಾಗಲೂ ಅವರ ತುದಿನಾಲಗೆಯ ಮೇಲೆ ನಲಿಯುತ್ತಿತ್ತು. ಶಾಲಾನಾಟಕಗಳಲ್ಲಿ ಕೃಪಾಚಾರ್ಯನ ಪಾತ್ರ ವಹಿಸುವುದೇ ಅವರಿಗೆ ತೃಪ್ತಿಯ ಕೆಲಸವಾಗಿತ್ತು.

"ಸ್ವರಾಜ್ಯ ನಮ್ಮ ಜನ್ಮ ಸಿದ್ಧ ಹಕ್ಕು" ಎಂಬ ತಿಲಕರ ಮಾತು ಕೇಳಿದಾಗ, ಹತ್ತು ಹನ್ನೆರಡು ವಯಸ್ಸಿನ ಬಾಲಕನಾದ ಅವರ ಮೈ ಉಬ್ಬಿತು. ಗಾಂಧಿ

ಅವರ ಭಾಷಣವು ಅವರಲ್ಲಿ ಮಿಂಚಿನ ಹೊಳೆಯನ್ನೇ ತುಳುಕಾಡಿಸಿತು. ೧೯೨೧ರ ಅಸಹಕಾರ ಆಂದೋಲನದ ಕಾಲಕ್ಕೆ ಹದಿನೇಳು ವಯಸ್ಸಿನ ಲಾಲಬಹಾದ್ದೂರರು ಶಾಲೆ ಬಿಟ್ಟು ಹೊರಬಂದರು. ಮನೆಯವರ ಬುದ್ಧಿವಾದಕ್ಕೆ ಅವರು ಕಿವಿಗೊಡಲಿಲ್ಲ. ಮೆರವಣಿಗೆಯಲ್ಲಿ ಭಾಗವಹಿಸಿದ್ದಕ್ಕೆ ಅವರನ್ನು ಪೊಲೀಸರು ಬಂಧಿಸಿದರು. ಆದರೆ ಬಾಲಕನೆಂದು ಆಗಲೇ ಬಿಟ್ಟುಕೊಟ್ಟರು.

ಬಳಿಕ ಕಾಶೀ ವಿದ್ಯಾಪೀಠವನ್ನು ಸೇರಿ ಅಭ್ಯಾಸ ಮುಂದುವರಿಸಿದರು. ಅಲ್ಲಿ ನಾಲ್ಕು ವರ್ಷ ಡಾ॥ ಭಗವಾನದಾಸರ ಶಿಷ್ಯನಾಗಿ ಸಮಚಿತ್ತವನ್ನು ಗಳಿಸಿಕೊಂಡರು. ಅಲ್ಲದೆ ೧೯೨೬ರಲ್ಲಿ " ಶಾಸ್ತ್ರಿ " ಎಂಬ ಪದವಿ ಗಳಿಸಿ ವಿದ್ಯಾಪೀಠದಿಂದ ಹೊರಬಿದ್ದರು.

ಲಲಿತಾದೇವಿಯೊಡನೆ ೧೯೨೭ರಲ್ಲಿ ವಿವಾಹವಾದಾಗ ಅವರ ವಯಸ್ಸು ಇಪ್ಪತ್ತುಮೂರು. ಆ ಕಾಲಕ್ಕೆ ಒಂದು ಚರಖಾ ಹಾಗೂ ಕೆಲವು ಗಜ ಒರಟು ಖಾದಿ ಬಟ್ಟೆ ಇವೇ ಮದುಮಗ ಕೇಳಿ ಪಡೆದ ವರದಕ್ಷಿಣೆ.

ಉಪ್ಪಿನ ಸತ್ಯಾಗ್ರಹ(೧೯೩೦)ದಲ್ಲಿ ಪ್ರಮುಖ ಪಾತ್ರ ವಹಿಸಿ ೨½ ವರ್ಷ ಸೆರೆಮನೆಯ ಸತ್ಕಾರ ಪಡೆದರು. ಅಂದಿನಿಂದ ಅವರಿಗೆ ಸೆರೆಮನೆಯೇ ಎರಡನೇ ಮನೆ ಆಗಿಬಿಟ್ಟಿತು. ಅವರಿಗೆ ಏಳು ಸಾರಿ ಶಿಕ್ಷೆಯಾಗಿ ಒಟ್ಟು ಒಂಬತ್ತು ವರ್ಷ ಸೆರೆಮನೆಯಲ್ಲಿ ಕಳೆದರು. ಸೆರೆಮನೆಯಲ್ಲಿಯೂ ಆದರ್ಶ ಕೈದಿ: ಶಿಸ್ತು ಸಂಯಮ ಮಾದರಿಯದು. ಸೆರೆಯಾಳು ಆಗಿರುವಾಗಲೇ ಮನೆಯಲ್ಲಿ ಮಗಳು ತೀರಿಕೊಂಡಳು. ಮಗನಿಗೆ ವಿಷಮಶೀತಜ್ವರದ ಬಾಧೆ. ಆದರೆ ಲಾಲಬಹಾದ್ದೂರರು ಅಚಲವಾಗಿಯೇ ಇದ್ದರು.



ಬಹುತರ ಎಲ್ಲ ಆಂದೋಲನಗಳಲ್ಲಿ ಅವರು ಪ್ರಾಮಾಣಿಕವಾಗಿ ಭಾಗವಹಿಸುತ್ತಲೇ ಇದ್ದರು. ಸ್ವತಂತ್ರ ಭಾರತದಲ್ಲಿ ಆಡಳಿತ ಸಂಘಟನಾಚಾತುರ್ಯದಿಂದ ಕೇಂದ್ರಸರ್ಕಾರದಲ್ಲಿ ಒಂದಾದ ಮೇಲೊಂದು ಮಂತ್ರಿ ಪದವನ್ನು ಪಡೆದು ಸತತವಾಗಿ ಹದಿನೇಳು ವರ್ಷ ದಕ್ಷರಾಗಿ ಕಾರ್ಯನಿರ್ವಹಿಸುತ್ತಾ ಬಂದರು. ಆ ಬಳಿಕ ೧೯೬೪ರಲ್ಲಿ ತೆರವಾದ ಭಾರತ ಪ್ರಧಾನಿ ಪಟ್ಟವನ್ನು ಮಹಾಸೇವೆಯೆಂದು ಹೊತ್ತರು.

ಚಿಟುಕಾಣಿ ಲಾಲಬಹಾದ್ದೂರರರು ಮೊದಲಿಗೆ ವಿಶ್ವರಾಷ್ಟ್ರಗಳನ್ನು ಒಲಿಸಿಕೊಳ್ಳುವ ಯತ್ನ ನಡೆಸಿದರು. ಬಳಿಕ. ಕಾಶ್ಮೀರವನ್ನು ಕಬಳಿಸಲು ಹೊಂಚಿದ

ಪಾಕೀಸ್ತಾನವನ್ನು ಎದುರಿಸಿದರು. "ನಾವು ನಾಶವಾದರೂ ಚಿಂತೆಯಿಲ್ಲ. ಆದರೆ ನಮ್ಮ ಧ್ವಜದ ಕೀರ್ತಿಗೆ ಕಲಂಕಹತ್ತಲು ಅವಕಾಶ ಕೊಡುವಂತಿಲ್ಲ" ಎಂದು ಘೋಷಣೆ ಮಾಡಿದರು. ಅದರಂತೆ ಪಾಕೀಸ್ತಾನವನ್ನು ಹತೋಟಿಯಲ್ಲಿ ತಂದರು.

ಸೋವಿಯತ್ ಪ್ರಧಾನಿ ಕೊಸಗಿನ್‌ರ ಆಹ್ವಾನದಂತೆ. ಭಾರತ–ಪಾಕೀಸ್ತಾನ ಪ್ರಧಾನಿಗಳು ತಾಷ್ಕೆಂಟಿನಲ್ಲಿ ಒಪ್ಪಂದಕ್ಕಾಗಿ ಸೇರಿದರು. (೧೯೬೬) ಒಪ್ಪಂದಕ್ಕೆ ಅಂಕಿತವನ್ನು ಹಾಕಿದರು. ಆದರೆ ಅಂದು ರಾತ್ರಿ ಮಲಗಿಕೊಂಡ ಲಾಲ ಬಹಾದ್ದೂರರು ಮತ್ತೆ ಏಳಲಿಲ್ಲ. "ಯುದ್ಧವೀರ–ಶಾಂತಿದೂತ" ಎಂಬ ಅವರ ಕೀರ್ತಿ ಮಾತ್ರ ಮುಗಿಲಿಗೇರಿತು. ಆದರೊಂದಿಗೆ ಅವರು ಹೇಳಿಕೊಟ್ಟ "ಜೈ ಜವಾನ್, ಜೈ ಕಿಸಾನ್" ಎಂಬ ಮಂತ್ರ ಇಂದಿಗೂ ನಿನದಿಸುತ್ತಿದೆ.

ಅಭ್ಯಾಸ

೧. ಪಂಡಿತ ಜವಹರಲಾಲರು ಭಾರತದ ಮೊಟ್ಟಮೊದಲಿನ ಪ್ರಧಾನಮಂತ್ರಿಗಳು. ಅವರು ಹದಿನೇಳು ವರ್ಷ ಸಮರ್ಥವಾಗಿ ನಡೆಯಿಸಿಕೊಂಡು ಬಂದ ಆಡಳಿತದ ಹೊಣೆಯನ್ನು ಲಾಲಬಹಾದ್ದೂರ ಶಾಸ್ತ್ರಿಗಳು ಅಷ್ಟೇ ಸಮರ್ಥವಾಗಿ ನಡೆಯಿಸುವ ಹೊತ್ತಿಗೆ ಅಕಸ್ಮಾತ್ತಾಗಿ ಇಹಲೋಕದ ವ್ಯಾಪಾರ ಮುಗಿಸಿದರು.

೨. (ಅ) ಕಠಿನ ಶಬ್ದಗಳು :—

ನಿರ್ವಹಿಸು = ಸಾಗಿಸು ; ಆತ್ಮಾಭಿಮಾನ = ತನ್ನ ಗೌರವದ ಬಗ್ಗೆ ಹೆಮ್ಮೆ : ಓದಾಳಿ = ಹೆಚ್ಚು ಓದುವವ : ಆಂದೋಲನ = ಚಳುವಳಿ : ಸಹಪಾಠಿ = ಕೂಡಿ ಕಲಿಯುವವ : ಸಮಚಿತ್ತ = ಸ್ಥಿರಮನಸ್ಸು : ಆದರ್ಶ = ಮಾದರಿ : ವಿಷಮಶೀತಜ್ವರ = ಟೈಫಾಯಿಡ್ : ಅಪಮೃತ್ಯು = ಕೆಟ್ಟ ರೀತಿಯ ಸಾವು : ಸಂಘಟನೆ = ಒಂದುಗೂಡಿರುವಿಕೆ : ಕಬಳಿಸು = ನುಂಗು : ಆಹ್ವಾನ = ಕರೆ ; ಅಂಕಿತ = ಸಹಿ.

(ಆ) ನುಡಿಗಟ್ಟು :—

(೧) ಲಾಲಬಹಾದ್ದೂರರ ಅಜ್ಜನು ಅವರ ಚಿಕ್ಕ ಆಕೃತಿಯನ್ನು ಕಂಡು, ಪ್ರೀತಿಯಿಂದ ಚಿಟುಕಾಣಿ ಎಂದು ಕರೆದನು. ಅದನ್ನೇ ಅವರು ಮನನ ಮಾಡಿ, ಇರುವೆ ಸಕ್ಕರೆ ಮೇದಂತೆ, ಚಿಟುಕಾಣಿಯಾಗಿಯೇ ಮಹತ್ತರ ಕೆಲಸ ನೆರವೇರಿಸಿದರು.

(೨) ಶಾಸ್ತ್ರಿಗಳು ಭಾರತ ಕಲ್ಯಾಣಕ್ಕೆ ಎರಡು ಉಪಾಯಗಳನ್ನು ಘೋಷಿಸಿದರು "ಜೈ ಜವಾನ್ ! ಜೈ ಕಿಸಾನ್" ಸಬಲವಾದ ಸೈನ್ಯ, ಪ್ರಬಲವಾದ ಕೃಷಿ ಇವುಗಳಿಂದಲೇ ಭಾರತದ ಸ್ವಾತಂತ್ರ್ಯವು ಸ್ಥಿರಗೊಳ್ಳುವುದು.

೩. ವ್ಯಾಕರಣ ವಿಶೇಷ :—

(ಅ) ವಚನ ಬದಲಿಸಿ ಬರೆಯಿರಿ— ಬಂದಾರು. ತಿನ್ನುವೆನು. ಹೂಗಳಿಗೆ. ಗಂಡಸರನ್ನು.

(ಆ) ಗೆರೆ ಹೊಡೆದ ಶಬ್ದಗಳ ವಿಭಕ್ತಿ ಹೇಳಿರಿ—

ಸಂಗನು ಪುಸ್ತಕ ಓದುತ್ತಿದ್ದಾನೆ.
ಮನೆಯನ್ನು ಕಾಯ್ದುದ್ದು ನಾಯಿ.
ಕೊಡದಿಂದ ನೀರು ಸೋರಿತು.
ಕೀಲಿಯನ್ನು ಮೊಳೆಯಿಂದ ತೆರೆದರು.

೪. ಪ್ರಶ್ನೆಗಳು :—

(೧) ವಿದ್ಯಾರ್ಥಿ ಲಾಲಬಹಾದ್ದೂರರವರು ತುಂಬಿ ಹರಿಯುವ ಗಂಗಾನದಿಯನ್ನು ಈಜಿ ಬಂದ ಕಾರಣವೇನು ?

(೨) ಚಿಟುಕಾಣೆಯ ತುದಿನಾಲಗೆಯ ಮೇಲೆ ಯಾವಾಗಲೂ ನಲಿಯುತ್ತಿದ್ದ ಚುಟುಕ ಪದ್ಯ ಯಾವುದು ?

(೩) ಮದುವೆಯ ಕಾಲಕ್ಕೆ ವರದಕ್ಷಿಣೆಯೆಂದು ಶಾಸ್ತ್ರಿಗಳು ಏನನ್ನು ಮಾವನಿಂದ ಪಡೆದರು ?

(೪) ಶಾಸ್ತ್ರಿಗಳ ರಾಷ್ಟ್ರಸೇವೆ ಯಾವ ಆಂದೋಲನದಿಂದ ಆರಂಭವಾಯಿತು ?

೫. ವಿಶೇಷ ಓದು :—

ಸಿಂಪಿ ಲಿಂಗಣ್ಣನವರು ಬರೆದ " ಭಾರತೀಯ ಮಹಾಪುರುಷರು " ಹಾಗೂ " ಬಾಳ ಬೇಸಾಯ " ಗ್ರಂಥಗಳನ್ನು ಅವಲೋಕಿಸಿರಿ.

---

೧೦. ಸಾಮ್ರಾಟ ಅಶೋಕ

" ನಾನು ಊಟಮಾಡುತ್ತಿರಲಿ. ಅಂತಃಪುರದಲ್ಲಿರಲಿ, ಶಯನಮಂದಿರದಲ್ಲಿರಲಿ, ಯಾವುದೇ ಕೆಲಸದಲ್ಲಿ ತೊಡಗಿರಲಿ. ಪ್ರಯಾಣಕ್ಕೆ ಹೊರಟಿರಲಿ. ವಿಶ್ರಾಂತಿ ಪಡೆಯುತ್ತಿರಲಿ. ಒಟ್ಟಿನಲ್ಲಿ ನಾನು ಎಲ್ಲಿದ್ದರೂ ವೇಳೆಯ ನಿರ್ಬಂಧವಿಲ್ಲದೆ, ನಿವೇದಕರು ಬಂದು ಜನರ ಸುಖದುಃಖಗಳ ವರದಿಯನ್ನು ತಿಳಿಸತಕ್ಕದ್ದು. ಎಲ್ಲಿದ್ದರೂ ನಾನು ಜನರಿಗಾಗಿ ಚಿಂತಿಸುತ್ತೇನೆ. ಜನರಿಗಾಗಿ ದುಡಿಯುತ್ತೇನೆ."

ಸುಮಾರು ಎರಡು ಸಾವಿರ ವರುಷಗಳಿಗೂ ಹಿಂದೆ ಭಾರತವನ್ನಾಳಿದ ಚಕ್ರವರ್ತಿಯೊಬ್ಬ ತನ್ನ ಅಧಿಕಾರಿಗಳಿಗೆ ನೀಡಿದ ಆದೇಶವಿದು. ಆ ಚಕ್ರವರ್ತಿ

ಬೇರೆ ಯಾರೂ ಅಲ್ಲ, ಅಜೇಯ ವೀರನೆಂದೂ. ರಾಜಯೋಗಿಯೆಂದೂ. ಧರ್ಮ ಪರಾಯಣನೆಂದೂ. ಕುಶಲ ಶಾಸಕನೆಂದೂ, ಪ್ರಜಾರಂಜಕನೆಂದೂ ಭಾರತ ಇತಿಹಾಸದಲ್ಲಿ ಅಮರನಾದ ಸಾಮ್ರಾಟ ಅಶೋಕ.

ಮೌರ್ಯ ವಂಶದ ಮೂಲ ಪುರುಷನಾದ ಚಂದ್ರಗುಪ್ತನ ನಂತರ ಅವನ ಮಗ ಬಿಂದುಸಾರನು ಪಟ್ಟಕ್ಕೆ ಬಂದನು. ಆ ಬಿಂದುಸಾರನ ಮಗನೇ ಅಶೋಕ. ಅಶೋಕನ ಜನನ ಪಾಟಲಿಪುತ್ರದಲ್ಲಿ ಆಯಿತು. ಪ್ರಾಪ್ತವಯಸ್ಕನಾದ ಕೂಡಲೆ ಬಿಂದುಸಾರನು ಅಶೋಕನನ್ನು ಅವಂತಿ ರಾಜ್ಯಕ್ಕೆ ಮಂಡಲಾಧಿಪತಿಯನ್ನಾಗಿ ನೇಮಿಸಿದನು. ವಿದ್ಯೆ, ಸಂಪತ್ತು, ಕಲೆ ಇವುಗಳಿಗೆ ತವರುಮನೆಯೆನಿಸಿದ ಉಜ್ಜಯನಿ ಅವಂತಿ ರಾಜ್ಯದ ರಾಜಧಾನಿಯಾಗಿತ್ತು. ಆಡಳಿತ ಸೂತ್ರವನ್ನು ವಹಿಸಿಕೊಂಡ ಕೆಲದಿನಗಳಲ್ಲಿಯೆ ಅಶೋಕನು ಕುಶಲ ಶಾಸಕನೆಂದೂ. ರಾಜತಂತ್ರ ನಿಪುಣನೆಂದೂ ಹೆಸರು ಪಡೆದನು. ಇದೇ ಕಾಲಕ್ಕೆ ತಕ್ಷಶಿಲೆಯ ನಾಗರಿಕರು ಮಗಧ ದೇಶದ ಆಳ್ವಿಕೆಗೆ ವಿರೋಧವಾಗಿ ಬಂಡೆದ್ದರು. ಆಗ ಬಂಡುಗಾರರನ್ನು ಸದೆ ಬಡಿಯಲು ಬಿಂದುಸಾರನು ಅಶೋಕನನ್ನು ಕಳಿಸಿದನು. ಕೂಡಲೆ ತಕ್ಷಶಿಲೆಗೆ ಹೋಗಿ ಒಳ್ಳೆಯ ಧೈರ್ಯದಿಂದ. ಚಾಣಾಕ್ಷತನದಿಂದ ಬಂಡುಗಾರರ ಹುಟ್ಟನ್ನು ಅಡಗಿಸಿದನು. ಮುಂದೆ ಬಿಂದುಸಾರನ ಮರಣಾನಂತರ ಅಶೋಕನು ಪಟ್ಟಕ್ಕೆ ಬಂದನು.

ಪಟ್ಟಕ್ಕೆ ಬಂದ ಕೆಲ ದಿನಗಳಲ್ಲಿಯೆ ಅಶೋಕನು ತನ್ನ ಪೂರ್ವಿಕರಂತೆ ರಾಜ್ಯ ವಿಸ್ತಾರ ಕಾರ್ಯದಲ್ಲಿ ತೊಡಗಿದನು. ಕಳಿಂಗದ ರಾಜನು ಅಶೋಕನ ಆಧಿಪತ್ಯ ವನ್ನು ಒಪ್ಪಲಿಲ್ಲ. ಕಳಿಂಗವು ಚಿಕ್ಕ ರಾಜ್ಯವಾದರೂ ಅದು ಶೂರ-ವೀರರ ನಾಡು. ಕಳಿಂಗ ದೇಶದ ಜನರು ಸ್ವಾತಂತ್ರ್ಯಪ್ರಿಯರು, ಸ್ವಾಭಿಮಾನಿಗಳು. ಅಶೋಕನು ಕಳಿಂಗವನ್ನು ಗೆದ್ದು ವಶಪಡಿಸಿಕೊಳ್ಳಲು ದೊಡ್ಡ ಸೈನ್ಯದೊಡನೆ ದಂಡೆತ್ತಿ ಹೋದನು.

ಕಳಿಂಗರಾಜ್ಯದವರು ಮಗಧದ ಪ್ರಚಂಡ ಸೈನ್ಯವನ್ನು ಧೈರ್ಯದಿಂದ ಎದುರಿಸಿದರು. ಜೀವದ ಹಂಗು ತೊರೆದು ಕಾದಿದರು. ಮಗಧದ ಮಹಾ ಸೈನ್ಯದೆದುರು ಕಳಿಂಗ ಯೋಧರ ಆಟ ನಡೆಯಲಿಲ್ಲ. ಅನೇಕ ದಿನಗಳವರೆಗೆ ಅಖಂಡವಾಗಿ ನಡೆದ ಈ ಘನಘೋರ ಸಂಗ್ರಾಮದಲ್ಲಿ ಅಶೋಕನು ವಿಜಯ ಶಾಲಿಯಾದನು.

ಅಶೋಕನಿಗೆ ಅದ್ಭುತ ವಿಜಯ ದೊರಕಿತು. ಆದರೆ ಆ ಮಹಾ ವಿಜಯದ ಬೆಲೆ ಎಷ್ಟು? ಅಶೋಕನ ಒಂದು ಶಾಸನ ಇದರ ಲೆಕ್ಕವನ್ನು ಕೊಟ್ಟಿದೆ:

"ಒಂದು ಲಕ್ಷ ಜನ ಯುದ್ಧ ನಡೆದಾಗ ಸತ್ತರು. ಒಂದೂವರೆ ಲಕ್ಷ ಜನ ಸೆರೆಸಿಕ್ಕರು. ಇವಕ್ಕಿಂತಲೂ ಹೆಚ್ಚು ಜನರು ಸತ್ತುಹೋದರು."

ಸ್ವತಃ ಸೈನ್ಯದ ನಾಯಕನಾಗಿ ಹೋಗಿದ್ದ ಅಶೋಕನು ರಣಭೂಮಿಯನ್ನು ಕಣ್ಣಾರೆ ಕಂಡನು. ದೃಷ್ಟಿ ಹರಿಯುವವರೆಗೂ ಬಿದ್ದಿರುವ ಸೈನಿಕರ ಛಿನ್ನವಿಚ್ಛಿನ್ನವಾದ ದೇಹ. ಹರಿಯುತ್ತಿರುವ ರಕ್ತದ ಕಾಲುವೆಗಳು : ಅರೆಜೀವಿಗಳಾಗಿ ಬಿದ್ದು ನರಕಯಾತನೆಯನ್ನನುಭವಿಸುತ್ತ ನರಳುತ್ತಿದ್ದ ಅಸಂಖ್ಯ ಗಾಯಾಳುಗಳು ; ಪರ್ವತಪ್ರಾಯವಾಗಿ ಬಿದ್ದ ಆನೆ ಕುದುರೆಗಳ ದೇಹಗಳು. ಮಾಂಸ ಮಜ್ಜಾದಿಗಳನ್ನು ತಿನ್ನಲು ಹಾತೊರೆಯುತ್ತಿದ್ದ ರಣಹದ್ದುಗಳು. ಒಂದೆ ! ಎರಡೆ ! ನೂರಾರು ದುರಂತ ದೃಶ್ಯಗಳನ್ನು ಕಂಡ ಅಶೋಕನ ಹೃದಯ ಮಮ್ಮಲ ಮರುಗಿತು. ಆ ಮಾರಣಹೋಮವನ್ನು ಕಂಡ ಅಶೋಕನ ಒಡಲು ದುಃಖದ ಕಡಲಾಯಿತು.

"ಅಯ್ಯೋ ! ನಾನೆಂತಹ ಹೇಯಕಾರ್ಯ ಮಾಡಿದೆ ! ವಿಶಾಲವಾದ ಸಾಮ್ರಾಜ್ಯದ ಅಧಿಪತಿಯಾಗಿದ್ದರೂ ತುಂಡು ಭೂಮಿಯ ಆತಿಯಾಶೆಗಾಗಿ ಇಷ್ಟೊಂದು ಜನರ ಸಾವು ನೋವುಗಳಿಗೆ ಕಾರಣನಾದೆನಲ್ಲ ! ಏನನ್ನೂ ಅರಿಯದ ಸಹಸ್ರಾರು ಮುಗ್ಧ ಮಕ್ಕಳುಮರಿಗಳನ್ನು ತಬ್ಬಲಿಯನ್ನಾಗಿ ಮಾಡಿದೆನಲ್ಲ ! ಸಹಸ್ರಾರು ಸಹೋದರಿಯರ ಮುತ್ತೈದೆತನವನ್ನು ಮಣ್ಣುಗೂಡಿಸಿದೆನಲ್ಲ ! ಅಸಂಖ್ಯಾತ ಜನರು ಅಂಗವಿಕಲರಾಗಿ ಜೀವನದುದ್ದಕ್ಕೂ ನರಳಿ ನೋಯುವಂತೆ

ಮಾಡಿದೆನಲ್ಲ! ಛೀ! ನನ್ನ ಸಾಮ್ರಾಜ್ಯದ ದಾಹಕ್ಕೆ ಧಿಕ್ಕಾರವಿರಲಿ" ಎಂದು ಪರಿತಪಿಸುತ್ತ ಪಾಟಲಿಪುತ್ರಕ್ಕೆ ತೆರಳಿದನು.

ಕಳಿಂಗ ಯುದ್ಧವೆ ಅಶೋಕನ ಕೊನೆಯ ಯುದ್ಧವಾಯಿತು. ಇನ್ನೆಂದೂ ಕೈಯಲ್ಲಿ ಶಸ್ತ್ರ ಹಿಡಿಯುವುದಿಲ್ಲವೆಂದು ಪ್ರತಿಜ್ಞೆ ಮಾಡಿದನು. ಇತಿಹಾಸದಲ್ಲಿ ಯುದ್ಧದಲ್ಲಿ ಸೋತು ಶಸ್ತ್ರ ಕೆಳಗಿಟ್ಟ ರಾಜರು ಅನೇಕರಿದ್ದಾರೆ. ಆದರೆ ಯುದ್ಧದಲ್ಲಿ ವಿಜಯಿಯಾಗಿ ಕರುಣೆಯಿಂದ ಶಸ್ತ್ರ ಕೆಳಗಿಟ್ಟ ಏಕೈಕ ಸಾಮ್ರಾಟ ಅಶೋಕ.

ಕಳಿಂಗದ ಘೋರ ಹತ್ಯಾಕಾಂಡದಿಂದ ಕದಡಿದ ಅಶೋಕನ ಮನಸ್ಸಿಗೆ ಆಗ ಪ್ರಚಲಿತವಿದ್ದ ಬೌದ್ಧ ಧರ್ಮವು ಶಾಂತಿಯನ್ನು ನೀಡಿತು. ಬೌದ್ಧ ಧರ್ಮದ ಅಹಿಂಸೆ, ದಯೆ ಮತ್ತು ಮಾನವ ಪ್ರೇಮಗಳು ಅಶೋಕನ ಮನವನ್ನು ಸೂರೆಗೊಂಡವು. ಅವನು ಉಪಗುಪ್ತನೆಂಬ ಭಿಕ್ಷುವಿನಿಂದ ಬೌದ್ಧ ಧರ್ಮದ ದೀಕ್ಷೆಯನ್ನು ಪಡೆದನು.

ಅಶೋಕನು ಬೌದ್ಧ ಧರ್ಮದ ಪ್ರಸಾರಕ್ಕಾಗಿ ಬಹಳಷ್ಟು ಶ್ರಮಿಸಿದನು. ಮಹಾಮಾತ್ಯರು, ಯುಕ್ತರು ಮತ್ತು ರಾಜವೀರರು ಎಂಬ ಅಧಿಕಾರಿಗಳನ್ನು ನೇಮಿಸಿದನು. ಯಾವಾಗಲೂ ಪ್ರವಾಸದಲ್ಲಿದ್ದು ಬೌದ್ಧ ಧರ್ಮದ ಪ್ರಚಾರ ಮಾಡುವದೇ ಅವರ ಕರ್ತವ್ಯವಾಗಿತ್ತು. ಅಶೋಕನು ಬುದ್ಧನ ಜೀವನಕ್ಕೆ ಸಂಬಂಧಿಸಿದ ಎಲ್ಲ ಸ್ಥಳಗಳಿಗೆ ಯಾತ್ರಾರ್ಥಿಯಾಗಿ ಹೋಗಿ ಬಂದನು. ಹೋದ ಕಡೆಯಲ್ಲೆಲ್ಲ ಜನರಿಗೆ ಧರ್ಮ ಬೋಧನೆ ಮಾಡಿದನು. ತನ್ನ ರಾಜ್ಯದ ಮೂಲೆ ಮೂಲೆಗಳಲ್ಲಿ ದೊಡ್ಡ ದೊಡ್ಡ ಬಂಡೆಗಲ್ಲುಗಳ ಮೇಲೆ, ಶಿಲಾಸ್ತಂಭಗಳ ಮೇಲೆ, ಬೌದ್ಧ ಧರ್ಮದ ತತ್ವಗಳನ್ನು ಕೆತ್ತಿಸಿದನು. ನಮ್ಮ ರಾಜ್ಯದ ರಾಯಚೂರು ಜಿಲ್ಲೆಯ 'ಮಸ್ಕಿ' ಎಂಬಲ್ಲಿ ಮತ್ತು ಚಿತ್ರದುರ್ಗ ಜಿಲ್ಲೆಯ 'ಸಿದ್ದಾಪುರ' ಮತ್ತು 'ಬ್ರಹ್ಮಗಿರಿ'ಗಳಲ್ಲಿ ಅಶೋಕನ ಶಿಲಾಶಾಸನಗಳಿವೆ. ಅಶೋಕನು ಸಿರಿಯಾ, ಇಜಿಪ್ತ, ಮ್ಯಾಸಿಡೋನಿಯ, ಬರ್ಮಾ ಮೊದಲಾದ ದೇಶಗಳಿಗೆ ಧರ್ಮ ಪ್ರಚಾರಕರನ್ನು ಕಳಿಸಿದನು. ಸಿಂಹಳಕ್ಕೆ ಸ್ವತಃ ತನ್ನ ಮಕ್ಕಳಾದ ಮಹೇಂದ್ರ ಮತ್ತು ಸಂಘಮಿತ್ರೆ ಇವರನ್ನು ಕಳಿಸಿಕೊಟ್ಟನು. ನಮ್ಮ ಕನ್ನಡನಾಡಿನ ಬನವಾಸಿಗೂ ಅಶೋಕನು ಧರ್ಮ ಪ್ರಚಾರಕರನ್ನು ಕಳಿಸಿದ್ದನು.

ಅಶೋಕನು ಮಾಡಿದಷ್ಟು ಜನೋಪಕಾರಿ ಕೆಲಸಗಳನ್ನು ಮಾಡಿದ ರಾಜರು ಅತಿ ವಿರಳ. ಅವನ ಪ್ರಾಣಿ ದಯೆಯಂತೂ ವಿಶ್ವವಿಖ್ಯಾತವಾಗಿದೆ. ಪ್ರಾಣಿಗಳ ಚಿಕಿತ್ಸೆಗಾಗಿ ಆಸ್ಪತ್ರೆಗಳನ್ನು ತೆರೆದ ರಾಜರಲ್ಲಿ ಇವನೇ ಮೊದಲಿಗನು. ರಾಜ

ಮಾರ್ಗದ ಎರಡೂ ಬದಿಗೆ ಸಾಲು ಮರಗಳನ್ನು ಹಚ್ಚಿದನು. ವಿಶ್ರಾಂತಿ ಗೃಹಗಳನ್ನು ತೆರೆದನು. ಬೇಸಿಗೆಯ ಕಾಲದಲ್ಲಿ ನೀರಡಸಿ ಬಂದ ದಾರಿಗರಿಗೆ ಅರವಟ್ಟಿಗೆಗಳ ವ್ಯವಸ್ಥೆ ಮಾಡಿದನು. ವ್ಯವಸಾಯಕ್ಕಾಗಿ ನೀರಾವರಿ ಕಾಲುವೆಗಳ ಸೌಕರ್ಯವನ್ನು ಒದಗಿಸಿದನು. ವಿದ್ಯಾಪ್ರಸಾರದ ಕಾರ್ಯವನ್ನು ಕೈಕೊಂಡನು. ನಾಲಂದ ವಿಶ್ವವಿದ್ಯಾಲಯವು ಅಶೋಕನಿಂದಲೇ ಪ್ರಾರಂಭವಾಯಿತೆಂದು ಹೇಳುತ್ತಾರೆ. ದಾನ ಧರ್ಮಗಳಲ್ಲಿ ಅವನು ಕೊಡುಗೈದೊರೆಯಾಗಿದ್ದನು.

ಅನೇಕ ರಾಜರುಗಳು ತಮ್ಮ ದಂಡಯಾತ್ರೆಯ ಬಗೆಗೆ, ದಾನದತ್ತಿಗಳನ್ನು ಕೊಟ್ಟ ಬಗ್ಗೆ, ವಿಸ್ತಾರವಾಗಿ ಶಿಲಾಶಾಸನಗಳಲ್ಲಿ ಬರೆಯಿಸಿಕೊಂಡಿದ್ದಾರೆ. ಆದರೆ ಅಶೋಕನು ಲೋಕಕಲ್ಯಾಣಕ್ಕಾಗಿ, ಪ್ರಜೆಗಳನ್ನು ' ಅಸತ್ಯದಿಂದ ಸತ್ಯದೆಡೆಗೆ, ಕತ್ತಲೆಯಿಂದ ಬೆಳಕಿನೆಡೆಗೆ, ಸಾವಿನಿಂದ ಅಮರತ್ವದ ಕಡೆಗೆ ' ಕರೆದೊಯ್ಯುವ ಧರ್ಮ ಶಾಸನಗಳನ್ನು ಬರೆಯಿಸಿದನು. ಎಲ್ಲರಿಗೂ ಅರ್ಥವಾಗುವಂತಹ ಅತಿ ಸರಳವಾದ ಭಾಷೆಯಲ್ಲಿ ಬಂಡೆಗಲ್ಲುಗಳ ಮೇಲೆ, ಶಿಲಾಸ್ತಂಭಗಳ ಮೇಲೆ, ಗುಹೆಗಳ ಗೋಡೆಗಳ ಮೇಲೆ ಬರೆಯಿಸಿದನು.

ಅಶೋಕನು ಶಾಸನಗಳಲ್ಲಿ ತನ್ನನ್ನು ' ದೇವಾನಾಂಪ್ರಿಯ,' ' ಪ್ರಿಯದರ್ಶಿ ' ಎಂದು ಕರೆದುಕೊಂಡಿದ್ದಾನೆ. ಎಂದರೆ ದೇವತೆಗಳಿಗೂ, ಮನುಷ್ಯರಿಗೂ ಪ್ರಿಯನಾಗಿ ಬಾಳಿದವನು ಎಂದು ಅರ್ಥ. ಇವೆರಡೂ ಅವನಿಗೆ ಅನ್ವರ್ಥಕಗಳಾದ ಹೆಸರುಗಳೆ.

ಅಂತೆಯೆ ಸುಪ್ರಸಿದ್ಧ ಆಂಗ್ಲ ಇತಿಹಾಸಕಾರರಾದ ಎಚ್. ಜಿ. ವೆಲ್ಸರು " ಇತಿಹಾಸದ ಆಗಸದಲ್ಲಿ ಎಂದೋ ಮಿನುಗಿ ಅಂದೇ ಇಲ್ಲದಂತಾಗಿರುವ ನೂರಾರು ಸಾವಿರಾರು ರಾಜರ, ರಾಜಪರಮೇಶ್ವರರ ನಡುವೆ ಪ್ರಜ್ವಲಿಸಿ ಇಂದಿಗೂ ತೊಳಗಿ ಬೆಳಗುತ್ತಿರುವ ಧ್ರುವ ತಾರೆ " ಎಂದು ಅಶೋಕ ಚಕ್ರವರ್ತಿಯನ್ನು ವರ್ಣಿಸಿದ್ದಾರೆ.



ಮಹಾತ್ಮಾ ಗಾಂಧೀಜಿಯವರ ನೇತೃತ್ವದಲ್ಲಿ ಸ್ವಾತಂತ್ರ್ಯವನ್ನು ಪಡೆದ ಭಾರತ, ಅಶೋಕ ಚಕ್ರವನ್ನು ತನ್ನ ಧ್ವಜ ಚಿಹ್ನೆಯನ್ನಾಗಿ ಆರಿಸಿಕೊಂಡಿದೆ. ಅನೇಕ ನಗರಗಳಲ್ಲಿ ಅಶೋಕಸ್ತಂಭಗಳನ್ನು ನಿಲ್ಲಿಸಿದ್ದಾರೆ.

ಇದು ಸ್ವತಂತ್ರ ಭಾರತವು ಅಶೋಕ ಚಕ್ರವರ್ತಿಗೆ ತೋರಿಸಿದ ಅಪೂರ್ವ ಗೌರವವಾಗಿದೆ.

ಅಭ್ಯಾಸ

೧. ಕಠಿನ ಪದಗಳ ಅರ್ಥ :—

ಅಂತಃಪುರ = ರಾಣಿಯರು ವಾಸಮಾಡುವ ಸ್ಥಳ ; ಶಯನಮಂದಿರ = ಮಲಗುವ ಕೋಣೆ : ನಿರ್ಬಂಧ = ಅಡ್ಡಿ ; ಅಜೇಯ = ಜಯಿಸಲು ಆಗದ ; ರಂಜಕ = ಸಂತೋಷ ಪಡಿಸುವವ ; ಅಮರ = ಸಾವಿಲ್ಲದ ; ಪ್ರಾಪ್ತವಯಸ್ಕ = ವಯಸ್ಸಿಗೆ ಬಂದವ ; ಶಾಸಕ = ಆಡಳಿತಗಾರ : ಬಂಡೇಳು = ವಿರೋಧಿಸು (ದಂಗೆ ಏಳು) ; ಹುಟ್ಟು = ಮೂಲ : ಆಧಿಪತ್ಯ = ಅಧಿಕಾರ (ಪರಮಾಧಿಕಾರ) ; ಕಬಳಿಸು = ನುಂಗು : ಅಖಂಡವಾಗಿ = ಒಂದೇ ಸಮನೆ ; ಘನಘೋರ = ಭಯಂಕರ ; ಛಿನ್ನವಿಛಿನ್ನವಾದ = ಚೂರುಚೂರಾದ : ಅರೆಜೀವಿ = ಅರ್ಧ ಬದುಕಿದ : ದುರಂತ = ಕೇಡು (ದುಃಖದಿಂದ ಕೊನೆಗೊಳ್ಳುವ) ; ಒಡಲು = ಹೊಟ್ಟೆ, ದೇಹ ; ಕಡಲು = ಸಮುದ್ರ ; ಅಳಿಯಾಸೆ = ಕೆಟ್ಟ ಆಸೆ, ಹೀನ ಅಪೇಕ್ಷೆ : ತಬ್ಬಲಿ = ಅನಾಥ ; ಪರಿತಪಿಸು = ದುಃಖಿಸು : ಏಕೈಕ = ಒಬ್ಬನೇ : ಸೌಕರ್ಯ = ಅನುಕೂಲತೆ ; ಕೊಡುಗೈ ದೊರೆ = ಮಹಾ ಉದಾರಿ ; ಧ್ರುವ = ಶಾಶ್ವತ ; ತಾರೆ = ನಕ್ಷತ್ರ.

೨. ಸಂಧಿಗಳು :—

(೧) ಮಂಡಲ + ಅಧಿಪತಿ = ಮಂಡಲಾಧಿಪತಿ (ಸವರ್ಣದೀರ್ಘ ಸಂಧಿ)
(೨) ಅಳಿ + ಆಶೆ = ಅಳಿಯಾಶೆ (ಆಗಮ ಸಂಧಿ)
(೩) ಏಕ + ಏಕ = ಏಕೈಕ (ವೃದ್ಧಿ ಸಂಧಿ)
(೪) ಜನ + ಉಪಕಾರಿ = ಜನೋಪಕಾರಿ (ಗುಣ ಸಂಧಿ)
(೫) ಯಥಾ + ಅರ್ಥ = ಯಥಾರ್ಥ (ಸವರ್ಣದೀರ್ಘ ಸಂಧಿ)

ನುಡಿಗಟ್ಟುಗಳು :—

(೧) ಮಮ್ಮಲ ಮರುಗು = ಬಹಳವಾಗಿ ನೊಂದುಕೊಳ್ಳು
(೨) ಹುಟ್ಟು ಅಡಗಿಸು = ಮೂಲವನ್ನೇ ನಾಶಮಾಡು
(೩) ಆಟ ನಡೆ = ಕೈಸಾಧಿಸು
(೪) ಮನವನ್ನು ಸೂರೆಗೊಳ್ಳು = ಮನಸ್ಸಿಗೆ ಅತಿಯಾಗಿ ಹಿಡಿಸು

ಕೆಳಗಿನ ವಾಕ್ಯಗಳಲ್ಲಿಯ ಕರ್ತೃ, ಕರ್ಮ, ಕ್ರಿಯಾಪದಗಳನ್ನು ತೋರಿಸಿ :—

(೧) ಅಶೋಕನು ಕಳಿಂಗದ ಮೇಲೆ ಯುದ್ಧವನ್ನು ಹೂಡಿದನು.
(೨) ಯುದ್ಧದಲ್ಲಿ ಅಶೋಕನು ಒಂದೂವರೆ ಲಕ್ಷ ಜನರನ್ನು ಸೆರೆ ಹಿಡಿದನು.

(೩) ಯುದ್ಧದ ದೃಶ್ಯವನ್ನು ನೋಡಿದನು : ಅಶೋಕನ ಮನ ಮಮ್ಮಲ ಮರುಗಿತು.

(೪) ಸ್ವತಂತ್ರಭಾರತವು ಅಶೋಕಚಕ್ರವನ್ನು ತನ್ನ ಧ್ವಜಚಿಹ್ನೆಯನ್ನಾಗಿ ಆಯ್ದುಕೊಂಡಿದೆ.

(೫) ಅಶೋಕನು ಬೌದ್ಧ ಧರ್ಮವನ್ನು ಸ್ವೀಕರಿಸಿದನು.

ಕೆಳಗಿನ ನುಡಿಗಟ್ಟುಗಳನ್ನು ನಿಮ್ಮ ವಾಕ್ಯಗಳಲ್ಲಿ ಉಪಯೋಗಿಸಿರಿ :—

(೧) ಮಮ್ಮಲ ಮರುಗು.

(೨) ಹುಟ್ಟು ಅಡಗಿಸು.

(೩) ಮನವನ್ನು ಸೂರೆಗೊಳ್ಳು.

೩. ಪ್ರಶ್ನೆಗಳು :—

(೧) ಅಶೋಕನು ಯಾರ ಮಗನು ?

(೨) ಅಶೋಕನು ತನ್ನ ಅಧಿಕಾರಿಗಳಿಗೆ ಕೊಟ್ಟ ಆದೇಶ ಯಾವುದು ?

(೩) ಅಶೋಕನು ಪಟ್ಟಕ್ಕೆ ಬರುವ ಮೊದಲು ಮಾಡಿದ ಕಾರ್ಯಗಳು ಯಾವುವು ?

(೪) ಕಳಿಂಗ ಯುದ್ಧದಲ್ಲಿ ಆದ ನಷ್ಟವೆಷ್ಟು ?

(೫) ಕಳಿಂಗ ಯುದ್ಧವು ಅಶೋಕನ ಮನಸ್ಸಿನ ಮೇಲೆ ಯಾವ ಪರಿಣಾಮವನ್ನುಂಟು ಮಾಡಿತು ?

(೬) ಧರ್ಮ ಪ್ರಚಾರಕ್ಕಾಗಿ ಅಶೋಕನು ಕೈಗೊಂಡ ಕಾರ್ಯಗಳು ಯಾವುವು ?

(೭) ಅಶೋಕನು ಮಾಡಿದ ಜನೋಪಕಾರಿ ಕೆಲಸಗಳು ಯಾವುವು ?

(೮) ಆಂಗ್ಲ ಇತಿಹಾಸಕಾರ ಎಚ್. ಜಿ. ವೆಲ್ಸರು ಅಶೋಕನನ್ನು ಏನೆಂದು ವರ್ಣಿಸಿದ್ದಾರೆ ?

---

೧೧. ಕಾಡು

'ಹುಲಿಗೆ ತನ್ನ ಕಾಡೇನು ಪರರ ಕಾಡೇನು ?' ಎಂಬ ಒಂದು ಗಾದೆಯಿದೆ. ಕಾಡಿನಲ್ಲಿ ಹುಲಿಗೆ ಸರ್ವಾಧಿಕಾರವಿರುತ್ತದೆ ಎಂಬುದು ಅದರ ಅರ್ಥ. ಇದರಲ್ಲಿ ಸತ್ಯವಿಲ್ಲದಿಲ್ಲ. "ಕಾಡು" ಎಂದ ಒಡನೆಯೇ ಕ್ರೂರ ಪ್ರಾಣಿಗಳ ಹೆಸರು ನೆನಪಿಗೆ ಬಂದರೆ ಆಶ್ಚರ್ಯವಿಲ್ಲ. ಮಾಂಸಾಹಾರಿಗಳಾದ ಕ್ರೂರ ಪ್ರಾಣಿಗಳಿಗೆ ಕಾಡು ನಿಜವಾದ ಆಶ್ರಯಸ್ಥಾನ. ದಟ್ಟವಾದ ಕಾಡಿನಲ್ಲಿ ಎಂಥೆಂಥ ಪ್ರಾಣಿಗಳಿವೆ ಎಂಬುದನ್ನು ಹೇಳುವುದೇ ಕಷ್ಟ. ಕೆಲವು ದೇಶಗಳಲ್ಲಿರುವ ಕಾಡನ್ನು ಜನರು ಇನ್ನೂ ಪ್ರವೇಶ ಮಾಡುವುದಕ್ಕೇ ಆಗಿಲ್ಲ. ಆದುದರಿಂದಲೇ 'ಕಾಡು' ಎಂಬುದು ಅಷ್ಟು ಆಶ್ಚರ್ಯಕರವಾದ ಶಬ್ದವಾಗಿದೆ.

ಬೆಟ್ಟ, ಕಾಡು ಎಂಬ ಎರಡು ಪದಗಳು ಜೊತೆಜೊತೆಯಲ್ಲಿ ಪ್ರಯೋಗ ವಾಗುತ್ತವೆ. ಇವೆರಡಕ್ಕೂ ಇರುವ ಸಂಬಂಧವೂ ಹೆಚ್ಚು. ಬೆಟ್ಟವಿದ್ದ ಕಡೆ ಮಳೆ ಹೆಚ್ಚು : ಮಳೆ ಬಿದ್ದ ಕಡೆ ಕಾಡು ಬೆಳೆಯುವುದು ಹೆಚ್ಚು. ಅಂಥ ಪ್ರದೇಶಗಳನ್ನು ಮಲೆನಾಡು ಎಂದೇ ಕರೆಯುತ್ತಾರೆ. ಕನ್ನಡ ದೇಶದಲ್ಲಿ ಶಿವಮೊಗ್ಗ, ಹಾಸನ, ಕೊಡಗು. ಮಂಗಳೂರು. ಕಾರವಾರ. ಚಿಕ್ಕಮಗಳೂರು ಮುಂತಾದ ಪ್ರದೇಶಗಳು ಇಂಥ ನಾಡು. ಮಲೆ ಎಂದರೆ ಗುಡ್ಡ. ಗುಡ್ಡಗಳು ಹೆಚ್ಚಾಗಿದ್ದ ನಾಡೇ ಮಲೆನಾಡು. ಅಲ್ಲಿ ಮಳೆಯೂ ಹೆಚ್ಚಾಗಿ ಬೀಳುವುದರಿಂದ ಕಾಡುಗಳೂ ಹೆಚ್ಚು. ಇಲ್ಲಿಯ ಜನರಿಗೆ ತಮ್ಮ ಪ್ರದೇಶವನ್ನು ಕಂಡರೆ ತುಂಬಾ ಪ್ರೀತಿ. " ಅಲ್ಲಿ ಕಷ್ಟಕ್ಕಿಂತ ಸುಖವೇ ಹೆಚ್ಚು, ಸದಾ ಶಾಂತಿಯಿರುತ್ತದೆ " ಎನ್ನುತ್ತಾರೆ ಅವರು.

ಬೆಟ್ಟದ ಮೇಲೆ ಬಿದ್ದ ನೀರು ಕೆಳಗೆ ಹರಿದು ಝರಿಯಾಗಿ ಪ್ರವಹಿಸುತ್ತದೆ. ಬೆಟ್ಟದ ತಪ್ಪಲೆಲ್ಲ ತಂಪಾಗಿದ್ದು ಗಿಡಮರಗಳ ಬೆಳವಣಿಗೆಗೆ ಸಹಾಯವಾಗಿರುತ್ತದೆ. ಮರಗಳು ದಟ್ಟವಾಗಿ ಬೆಳೆಯುತ್ತವೆ. ಬಳ್ಳಿಗಳು ಮರಗಳನ್ನು ಸುತ್ತಿಕೊಂಡು ಬಿಸಿಲನ್ನು ಹುಡುಕಿಕೊಂಡು ಮೇಲೆ ಮೇಲೆ ಏರುತ್ತವೆ. ಪರಸ್ಪರ ಸ್ಪರ್ಧೆಯಿಂದ ಇವು ಎತ್ತರವಾಗಿ ಬೆಳೆಯುತ್ತಿರುವಂತೆ ಕಾಣುತ್ತದೆ. ಇಷ್ಟು ಸಾಂದ್ರವಾದ ಮರಗಿಡಗಳ ಗುಂಪಿನಲ್ಲಿ ಸೂರ್ಯಕಿರಣಗಳು ಒಳಗೆ ಪ್ರವೇಶಿಸಲಾರವು. ಆದುದರಿಂದ ಒಳಗೆಲ್ಲ ಕತ್ತಲೆಯೇ.

ಇಂಥ ಮರಗಳ ಮೇಲೆ ಅನೇಕ ರೀತಿಯ ಪಕ್ಷಿಗಳು ಗೂಡುಕಟ್ಟುತ್ತವೆ. ಶಾಖಾಮೃಗಗಳು ಓಡಾಡುತ್ತವೆ. ಅಳಿಲು ಸುಳಿದಾಡುತ್ತದೆ. ಕಾಡಿನ ಒಳಗೆ ಅನೇಕ ಬಗೆಯ ಮೃಗಗಳು ವಾಸಮಾಡುತ್ತವೆ. ಇವುಗಳಲ್ಲಿ ಕ್ರೂರ ಮೃಗಗಳೂ ಉಂಟು, ಸಾಧು ಪ್ರಾಣಿಗಳೂ ಉಂಟು. ಜಿಂಕೆಯನ್ನು ಹುಲಿ ತಿನ್ನುತ್ತದೆ. ಆನೆಯನ್ನು ಸಿಂಹ ಕಬಳಿಸುತ್ತದೆ. ಇಂಥ ಬಲಿಷ್ಠ ಪ್ರಾಣಿಗಳು ತಿಂದು ಮಿಕ್ಕುದನ್ನು ನರಿ ತೋಳಗಳು ಮುಗಿಸುತ್ತವೆ. ಮಾನವನು ಈ ಕ್ರೂರ ಮೃಗಗಳನ್ನು ಬೇಟೆ ಯಾಡುತ್ತಾನೆ. ಈ ಬೇಟೆ ದೇವರ ಸೃಷ್ಟಿಯಲ್ಲಿ ಸದಾ ನಡೆದೇ ಇರುತ್ತದೆ.

ಕಾಡಿನ ಅಂತರಾಳದಲ್ಲಿ ಈ ಕ್ರೂರ ಘಟನೆಗಳು ನಡೆಯುತ್ತಿದ್ದರೂ ಬಹಿರಂಗ ದಲ್ಲಿ ನಮಗೆ ಕಾಣುವುದು ಅದರ ಸೌಂದರ್ಯ ಮಾತ್ರ. ಬೆಟ್ಟವನ್ನೆಲ್ಲಾ ತಬ್ಬಿಕೊಂಡು ಅದನ್ನು ತನ್ನಲ್ಲಿ ಹುದುಗಿಸಿಕೊಂಡು ಕಾಡು ಬೆಳೆಯುತ್ತದೆ. ಪರ್ವತೋನ್ನತವಾದ ಮರಗಳನ್ನು ನೋಡುವುದೇ ಒಂದು ಸೊಗಸು. ಕಾಡು ಸದಾ ಹಸುರಾಗಿಯೇ ಕಾಣುತ್ತದೆ. ಮಾಗಿಯಲ್ಲಿ ಸ್ವಲ್ಪ ಹಳದಿಗೆ ತಿರುಗಬಹುದು : ಬೇಸಿಗೆಯಲ್ಲಿ ಸ್ವಲ್ಪ ಮಂಕಾಗಬಹುದು : ಮರಗಳ ಮೇಲೆ ಧೂಳು ಕವಿದಿರ

ಬಹುದು ; ಮಳೆಗಾಲ ಬಂದರೆ ಈ ಮಂಕುತನ. ಈ ಧೂಳು ಮಾಯವಾಗಿ, ಅಚ್ಚ ಹಸರು ತಾಂಡವವಾಡುತ್ತದೆ. ಮೋಡಗಳು ಆಕಾಶದಲ್ಲಿ ಸುಳಿದಾಡುತ್ತಾ ಸೂರ್ಯನು ಕಂಡೂ ಕಾಣದಂತೆ ಬಿಸಿಲನ್ನು ಹೊರಹೊಮ್ಮಿಸುವಾಗ ಮರಗಳು ಗಾಳಿಗೆ ಚಲಿಸುವಾಗ, ಕಾಡಿನ ನೋಟ ಬಹು ಸುಂದರ, ರಮ್ಯ. ಬೆಟ್ಟದ ಎತ್ತರವಾದ ಪ್ರದೇಶದಲ್ಲಿ ಕಾಡನ್ನು ಸೀಳಿಕೊಂಡು ಝರಿ ಹರಿಯುತ್ತಿದ್ದರೆ ಅದನ್ನು ನೋಡಲು ದೇವತೆಗಳೂ ಇಳೆಗಿಳಿದು ಬಂದಾರು !

ಕಡುಬೇಸಗೆಯಲ್ಲಿ ಒಮ್ಮೊಮ್ಮೆ, ಇಂಥ ಸುಂದರವಾದ ಕಾಡಿನಲ್ಲಿ ಕಾಳ್ಗಿಚ್ಚು ಉತ್ಪತ್ತಿಯಾಗುತ್ತದೆ. ಆಗ ಬೆಂಕಿಯು ಕ್ರಮವಾಗಿ ಅಧಿಕವಾಗುತ್ತಾ ಹೋಗಿ ಭಯಂಕರವಾದ ಪ್ರಮಾಣವನ್ನೇ ಪಡೆಯುತ್ತದೆ. ಮೃಗಪಕ್ಷಿಗಳು ದಿಕ್ಕೆಟ್ಟು ಓಡುತ್ತವೆ. ಕಾಳ್ಗಿಚ್ಚನ್ನು ದೂರದಲ್ಲಿ ನಿಂತು ನೋಡುವುದಕ್ಕೆ ಕೂಡ ಹೆದರಿಕೆ ಯಾಗುತ್ತದೆ. ಭಾರಿ ಪ್ರಮಾಣದ ಕಾಳ್ಗಿಚ್ಚಿನಲ್ಲಿ ಸಾವಿರಾರು ಮರಗಳು ಸುಟ್ಟು ಹೋಗುತ್ತವೆ. ಈ ನಷ್ಟದ ಮೊತ್ತವನ್ನು ಲೆಕ್ಕ ಹಾಕುವುದೇ ಕಷ್ಟ. ಗಂಧ, ತೇಗ, ಮತ್ತಿ, ಹೊನ್ನೆ ಮುಂತಾದ ಮರಗಳು ಸುಟ್ಟುಹೋದರೆ ಆಗುವ ನಷ್ಟ ಇನ್ನೂ ಅಧಿಕ.

ಕಾಡನ್ನು ಕಡಿದು ನಾಡು ಮಾಡುವುದಕ್ಕೆ ಹೋಗಿ, ನಮ್ಮ ಜನ ಈಗ ಕಷ್ಟಕ್ಕೆ ಸಿಕ್ಕಿಕೊಂಡಿದ್ದಾರೆ. ಕಾಡಿದ್ದ ಕಡೆ ಈಗ ನೆಲ ಬೋಳಾಗಿ ಅಲ್ಲಿ ಮಳೆಯೇ

ಬೀಳುವುದಿಲ್ಲ. ಮಳೆಯಿಲ್ಲದೆ ಬೆಳೆಯಿಲ್ಲ. ಈಗೀಗ ಹೊಸ ಕಾಡುಗಳನ್ನು ಬೆಳೆಯಲು ಮೊದಲು ಮಾಡಿದ್ದಾರೆ. 'ವನಮಹೋತ್ಸವ' ಹುಟ್ಟಿಕೊಂಡದ್ದು ಹೀಗೆ. ವನಮಹೋತ್ಸವದಂದು ಸಸಿಗಳನ್ನು ನೆಟ್ಟು ಕಾಡು ಬೆಳೆಸುವ ಕಾರ್ಯವನ್ನು ಪ್ರತಿ ವರ್ಷ ಆಚರಿಸುತ್ತಿದ್ದೇವೆ. ಈ ಸಸಿಗಳು ಗಿಡಗಳಾಗಿ, ಮರಗಳಾಗಿ, ವೃಕ್ಷರಾಜರಾಗಿ ಗಟ್ಟಿಯಾಗಿ ನೆಲೆನಿಂತ ಮೇಲೆ ಹೊಸ ಕಾಡು ಎಂಬುದು ಆಗುತ್ತದೆ. ಆಗ ಮಳೆ ಬಂದು ದೇಶಕ್ಕೆ ಶುಭವಾಗುತ್ತದೆ. ಊರು ಬೆಳೆಯುವಂತೆಯೇ ಕಾಡೂ ಬೆಳೆಯಬೇಕಾದುದು ಜನರಿಗೆ ಅಗತ್ಯ.

ಅಭ್ಯಾಸ

೧. ಕಠಿನಪದಗಳ ಅರ್ಥ :—

ಸರ್ವಾಧಿಕಾರ = ಸಂಪೂರ್ಣ ಅಧಿಕಾರ ; ಕಬಳಿಸು = ನುಂಗು, ತಿನ್ನು ; ಕ್ರೂರ = ದಯೆಯಿಲ್ಲದ, ಭಯಂಕರ ; ಹುದುಗಿಸು = ಮುಚ್ಚಿಟ್ಟುಕೋ ; ಆಶ್ರಯಸ್ಥಾನ = ವಾಸಿಸುವ ಸ್ಥಳ ; ಘಟನೆ = ಸಂಗತಿ : ಪ್ರಯೋಗ = ಉಪಯೋಗ : ಪರ್ವತೋನ್ನತ = ಪರ್ವತದಂತೆ ಎತ್ತರ ; ಝರಿ = ಬೆಟ್ಟದ ನದಿ : ತಾಂಡವವಾಡು = ಎಲ್ಲೆಲ್ಲೂ ಇರು, ವ್ಯಾಪಿಸು ; ಸಾಂದ್ರ = ದಟ್ಟ ; ರಮ್ಯ = ಸುಂದರ : ಶಾಖಾಮೃಗ = ಕಪಿ, ಕೋತಿ : ಮೊತ್ತ = ಒಟ್ಟು.

೨. ವನಮಹೋತ್ಸವ = ಕಾಡನ್ನು ಬೆಳೆಸುವುದಕ್ಕಾಗಿ ಸಸಿಗಳನ್ನು ನೆಡುವ ಹಬ್ಬ.

೩. (i) ಹುಲಿ, ಕಾಡು, ಪ್ರಾಣಿ, ಶಿವಮೊಗ್ಗ, ಹಾಸನ, ಬೆಂಕಿ, ಮಲೆನಾಡು—ಇಲ್ಲಿರುವ ಪದಗಳಲ್ಲಿ ರೂಢ ಅನ್ವರ್ಥ ಅಂಕಿತ ನಾಮಗಳನ್ನು ಗುರುತಿಸಿ.

(ii) ಮಾಂಸಾಹಾರಿ, ಗಾದೆಯಿದೆ, ಇಳಿಗಿಳಿದು, ಶುಭವಾಗು—ಇಲ್ಲಿನ ಸಂಧಿಗಳನ್ನು ಗುರುತಿಸಿ.

(iii) 'ಕಾಡು' ಎಂಬ ಶಬ್ದಕ್ಕೆ ಎಲ್ಲ ವಿಭಕ್ತಿ ಪ್ರತ್ಯಯಗಳನ್ನೂ ಹತ್ತಿಸಿ.

(iv) ಬಳ್ಳಿ, ಬೇಸಗೆ—ಈ ಶಬ್ದಗಳ ತತ್ಸಮಗಳನ್ನು ಹೇಳಿ.

೪. (i) ಕಾಡು ಏಕೆ ಆಶ್ಚರ್ಯವನ್ನುಂಟುಮಾಡುತ್ತದೆ ?

(ii) ಮಲೆನಾಡಿಗೆ ಆ ಹೆಸರು ಬರಲು ಕಾರಣವೇನು ?

(iii) ಕಾಡಿನಲ್ಲಿ ಕತ್ತಲೆಯಿರಲು ಏನು ಕಾರಣ ?

(iv) ಕಾಡಿನೊಳಗಿನ ಬೇಟೆಯನ್ನು ವಿವರಿಸಿ.

(v) ಕಾಡಿನಲ್ಲಿ ಬೆಂಕಿ ಹುಟ್ಟಿಕೊಂಡರೆ ಏನಾಗುತ್ತದೆ ?

(vi) ಕಾಡನ್ನು ಏಕೆ ಬೆಳೆಯಬೇಕು ?

೧೨. ಹುಲಿ

ಸೌಂದರ್ಯ, ಶಕ್ತಿ ಮತ್ತು ಗಾಂಭೀರ್ಯಗಳ ದೃಷ್ಟಿಯಿಂದ ವ್ಯಾಘ್ರಕ್ಕೆ ಮೃಗರಾಜನೆಂಬ ಬಿರುದನ್ನು ಕೊಟ್ಟಿದ್ದರೆ ಹೆಚ್ಚು ಸಾರ್ಥಕವಾಗುತ್ತಿತ್ತು. ಹುಲಿಯಂತಹ ಗಂಭೀರ ಪ್ರಾಣಿ ಬೇರೊಂದಿಲ್ಲ. ಅದಕ್ಕೆ ಅಳುಕು, ಅಂಜಿಕೆ ಎಂಬುದೇ ಇಲ್ಲ. ತನ್ನ ಹೊಟ್ಟೆ ತುಂಬಿದಾಗ ಯಾರ ಲಕ್ಷ್ಯವೂ ಇಲ್ಲದೆ ಕಾಡಿನಲ್ಲಿ ಗಂಭೀರವಾಗಿ ಸಂಚರಿಸುವ ಹುಲಿಯನ್ನು ನೋಡುವದೆಂದರೇನೇ ಒಂದು ರಸದೂಟ. ಆದ್ದರಿಂದ ಹುಲಿಯನ್ನು ನಮ್ಮ ದೇಶದ ರಾಷ್ಟ್ರೀಯ ಪ್ರಾಣಿಯೆಂದು ಕರೆದದ್ದು ಯೋಗ್ಯವಾಗಿದೆ.

ಸಿಂಹ ಹುಲಿಗಿಂತ ಎತ್ತರವಾಗಿದ್ದರೂ ಅದರ ದೇಹ ಹುಲಿಯಷ್ಟು ಉದ್ದವಲ್ಲ. ಕಾಲುಗಳು ಅಷ್ಟು ಬಲಿಷ್ಠವಲ್ಲ. ಹುಲಿಗೂ ಸಿಂಹಕ್ಕೂ ಕಾದಾಟವಾದರೆ ಹುಲಿಯೇ ಗೆಲ್ಲುತ್ತದೆ. ಹಲವು ವರುಷಗಳ ಹಿಂದೆ ಲಾಹೋರ ಮೃಗಾಲಯದಲ್ಲಿ ಆಕಸ್ಮಿಕವಾಗಿ ಪಂಜರಗಳಿಂದ ಹೊರಬಿದ್ದ ಒಂದು ಸಿಂಹಕ್ಕೂ ಹುಲಿಗೂ ಜಗಳವಾಗಿ ಹುಲಿಯೇ ಸಿಂಹವನ್ನು ಕೊಂದುಬಿಟ್ಟಿತಂತೆ. ನಮ್ಮ ಭಾರತದಲ್ಲಿ ಸಿಂಹಗಳ ಸಂಖ್ಯೆ ಕಡಿಮೆಯಾಗಲು ಅಧಿಕ ಸಂಖ್ಯೆಯಲ್ಲಿರುವ ಹುಲಿಗಳೇ ಕಾರಣವಾಗಿರಬಹುದು.

ಹುಲಿಯು ಬೆಕ್ಕು ಇಲ್ಲವೆ ಮಾರ್ಜಾಲ ವರ್ಗಕ್ಕೆ ಸೇರಿದ್ದು. ಹುಲಿಯ ಮುಖವು ದುಂಡಗಿರುತ್ತದೆ. ಇದರ ಮೈಯಲ್ಲಿ ಬಲಯುತವೂ, ಚುರುಕೂ ಆದ ಸ್ನಾಯುಖಂಡಗಳು ತುಂಬಿವೆ. ಆದ್ದರಿಂದಲೇ ಇದು ಬಲಿಷ್ಠವಾಗಿದೆ. ಆದರಿಂದ ಹುಲಿಯು ಎತ್ತರಕ್ಕೂ, ಉದ್ದಕ್ಕೂ ಜಿಗಿಯಬಲ್ಲುದು. ಇದರ ಹಿಂಗಾಲು ಮುಂಗಾಲುಗಳು ದೇಹಕ್ಕೆ ತಕ್ಕಂತೆ ಬಲಿಷ್ಠವಾಗಿವೆ. ಇಂತಹ ಶಕ್ತಿಯುತವಾದ ಶರೀರದಿಂದ ಹುಲಿಯು ಎಂತಹ ವೈರಿಯನ್ನೂ ಕೆಡವಿ ಕೊಂದು ಹಾಕಬಲ್ಲುದು. ಹುಲಿಯ ಹಿಂಗಾಲುಗಳಲ್ಲಿ ನಾಲ್ಕು ಬೆರಳುಗಳೂ ಮುಂಗಾಲುಗಳಲ್ಲಿ ಐದು ಬೆರಳುಗಳೂ ಇವೆ. ಹುಲಿಯು ತನ್ನ ದೇಹದ ಭಾರವನ್ನು ಹೆಚ್ಚಾಗಿ ಮುಂಗಾಲುಗಳ ಮೇಲೆಯೆ ಹಾಕಿ ನಡೆಯುತ್ತದೆ. ಸದ್ದಿಲ್ಲದೆ ನಡೆಯಬೇಕಾದಾಗ ಅದು ತನ್ನ ವಕ್ರವಾದ ಉಗುರುಗಳನ್ನು ಒಳಗೆ ಎಳೆದುಕೊಳ್ಳುತ್ತದೆ.

ಹುಲಿಯ ದವಡೆಯ ಸ್ನಾಯುಗಳು ತುಂಬ ಬಲವಾದುವು. ಅದರ ಹಲ್ಲುಗಳು ಮಾಂಸವನ್ನು ಕಚ್ಚಲು, ಕತ್ತರಿಸಲು ಮತ್ತು ಹರಿದು ತಿನ್ನಲು ಅನುಕೂಲವಾಗಿವೆ. ಅದರ ನಾಲಗೆಯಲ್ಲಿ ಒಳಕ್ಕೆ ತಿರಿಚಿಕೊಂಡ ಮುಳ್ಳುಗಳಿವೆ. ಇಷ್ಟೆಲ್ಲ ಆಯುಧಗಳಿದ್ದರೂ ಹುಲಿಯು ಮರೆಯಲ್ಲಿ ಅಡಗಿ ಕುಳಿತೋ, ವಾಸನೆಯನ್ನು ಹಿಂಬಾಲಿಸಿಯೋ ಪ್ರಾಣಿಗಳ ಹೆಜ್ಜೆಯ ಜಾಡನ್ನು ಅನುಸರಿಸಿಯೋ ಬೇಟೆಯಾಡುತ್ತದೆ.



ಹುಲಿಗಳು ಹೆಚ್ಚಾಗಿ ಏಷಿಯಾ ಖಂಡದ ಮಂಚೂರಿಯಾ ದೇಶದಿಂದ ಹಿಡಿದು ಚೀನ, ಭಾರತ, ಮಲಯ, ಜಾವಾ ಮತ್ತು ಬೋರ್ನಿಯೋ ದೇಶಗಳ ಕಾಡುಗಳಲ್ಲಿ ವಾಸಿಸುತ್ತಿವೆ. ಭಾರತದಲ್ಲಿ ಹುಲಿಗಳು ಹೆಚ್ಚಾಗಿ ಬಂಗಾಲ, ಬಿಹಾರ, ಪಶ್ಚಿಮ ಘಟ್ಟದ ಮಲೆನಾಡಿನ ಕಾಡು, ನೇಪಾಳ ಮತ್ತು ಹಿಮಾಲಯದ ತೆರಾಂ ಮುಂತಾದ ಸ್ಥಳಗಳಲ್ಲಿ ವಾಸವಾಗಿವೆ. ಮಂಚೂರಿಯಾ ದೇಶದ ಹುಲಿಗಳು ನಮ್ಮ ದೇಶದ ಹುಲಿಗಳಿಗಿಂತಲೂ ದೊಡ್ಡವಾಗಿವೆ. ಹುಲಿಗಳ ಮೈಬಣ್ಣ ಸಾಮಾನ್ಯವಾಗಿ ಕಂದು ಮತ್ತು ಕಿತ್ತಳೆ. ಚೀನ ದೇಶದಲ್ಲಿ ನೀಲಿ ಛಾಯೆಯ ಹುಲಿಗಳಿವೆಯೆಂದು ತಿಳಿದುಬಂದಿದೆ.

ಹುಲಿಗಳು ಗಂಡು ಮತ್ತು ಹೆಣ್ಣು ಜತೆಗೂಡಿ ವಾಸಿಸುವ ಜೀವಿಗಳು. ಹೆಚ್ಚಾಗಿ ಅವು ಗವಿಗಳಲ್ಲಿಯೆ ವಾಸಿಸುತ್ತವೆ. ತಾಯಿ ಹುಲಿಯು ಬೇಟೆಯಾಡಲು ಹೋಗುವಾಗ ತನ್ನ ಜೊತೆ ಮರಿಗಳನ್ನು ಕರೆದುಕೊಂಡು ಹೋಗುತ್ತದೆ. ಮತ್ತು ಆ ಮರಿಗಳಿಗೆ ಬೇಟೆಯಾಡುವ ಶಿಕ್ಷಣವನ್ನು ಕೊಡುತ್ತದೆ. ಹುಲಿಗಳು ಹಗಲಿನಲ್ಲಿ ಸಂಚರಿಸುವುದು ಕಡಿಮೆ. ಅವು ನಿಶಾಚರ ಪ್ರಾಣಿಗಳು. ಏಕೆಂದರೆ ಅವುಗಳಿಗೆ ಸೆಕೆ ಸ್ವಲ್ಪವೂ ತಡೆಯುವುದಿಲ್ಲ.

ಹುಲಿಗಳು ಸ್ವಾಭಾವಿಕವಾಗಿ ನರಭಕ್ಷಕವಾಗಿರುವುದಿಲ್ಲ. ಹುಲಿಗಳು ಮುದಿಯಾಗಿ, ಬೇಟೆಯಾಡಲು ಶಕ್ತಿಯಿಲ್ಲದಂತಾದಾಗ ಮಾತ್ರ ನರಭಕ್ಷಕಗಳಾಗುತ್ತವೆ.

ಆದರಂತೆ ಒಂದು ಸಲ ಆಕಸ್ಮಾತ್ತಾಗಿ ನರಮಾಂಸದ ರುಚಿ ಹತ್ತಿತೆಂದರೆ ಸಾಕು, ಮುಂದೆ ಅವು ನರಭಕ್ಷಕಗಳಾಗುತ್ತವಂತೆ.

ಆದರೆ ಭಾರತದಲ್ಲಿ ಹುಲಿಯ ಹಾವಳಿಯಿಂದ ಅನೇಕ ಹಳ್ಳಿಗಳು ಜನಶೂನ್ಯವಾದ ಉದಾಹರಣೆಗಳಿವೆ. ನಮ್ಮ ದೇಶದಲ್ಲಿ ಪ್ರತಿ ವರುಷ ಒಂದು ಸಾವಿರದಷ್ಟು ಜನರಾದರೂ ಹುಲಿಗೆ ಆಹಾರವಾಗುತ್ತಾರೆ. ಒಂದು ಲಕ್ಷ ದನಕರುಗಳಾದರೂ ಹುಲಿಯ ಬಾಯಿಗೆ ಬೀಳುತ್ತವೆ.

ಅಭ್ಯಾಸ

೧. (ಅ) ಕಠಿನಪದಗಳ ಅರ್ಥ :—

ವ್ಯಾಘ್ರ = ಹುಲಿ : ಮೃಗರಾಜ = ಪ್ರಾಣಿಗಳ ಅರಸ ; ಕಾಡು = ಅರಣ್ಯ ; ಅಳುಕು = ಅಧೈರ್ಯ : ಲಕ್ಷ್ಯ = ಪರಿವೆ : ಸಂಚರಿಸು = ಅಡ್ಡಾಡು : ಕಾದಾಟ = ಕಾಳಗ; ಜಗಳ ; ಬಲಿಷ್ಠ = ಗಟ್ಟಿಯಾದ : ಸದ್ದು = ಸಪ್ಪಳ ; ವಕ್ರ = ಡೊಂಕಾದ, ಸರಳವಲ್ಲದ : ಜಾಡು = ಸುಳುವಿನ ದಾರಿ ; ನಿಶಾಚರ = ರಾತ್ರಿಯಲ್ಲಿ ಸಂಚರಿಸುವ ; ನರಭಕ್ಷಕ = ಮನುಷ್ಯರನ್ನು ತಿನ್ನುವ.

(ಆ) ನುಡಿಗಟ್ಟುಗಳು :—

ರಸದೂಟ = ಸ್ವಾರಸ್ಯವಾಗಿರುವುದು, ರುಚಿಯೂಟ ; ರುಚಿಹತ್ತು = ಸವಿಯೆನಿಸು.

೨. ವ್ಯಾಕರಣ ವಿಶೇಷ :—ವ್ಯಾಘ್ರ. ಇದರ ತದ್ಭವ ಬಗ್ಗ.

ಕೆಳಗಿನ ಶಬ್ದಗಳಲ್ಲಿ ನಾಮಪದ. ಕ್ರಿಯಾಪದ. ವಿಶೇಷಣಗಳನ್ನು ಗುರುತಿಸಿರಿ :—
ಬಲಿಷ್ಠ. ಗಂಭೀರ. ಕಾಡು, ಸಿಂಹ, ಜಿಗಿಯಿತು, ಕಾದಾಡಿತು.

ಕೆಳಗಿನ ನುಡಿಗಟ್ಟುಗಳನ್ನು ವಾಕ್ಯದಲ್ಲಿ ಉಪಯೋಗಿಸಿರಿ :—ರಸದೂಟ, ರುಚಿಹತ್ತು.

೩. ನಮ್ಮ ರಾಷ್ಟ್ರೀಯ ಪಕ್ಷಿಯಾದ ನವಿಲಿನ ಚಿತ್ರ ಬರೆಯಿರಿ.

೪. ಈ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :—

(i) ಯಾವ ಗುಣಗಳಿಗಾಗಿ ನಾವು ಹುಲಿಯನ್ನು ಮೃಗರಾಜ ಎಂದು ಕರೆಯಬೇಕು ?
(ii) ಹುಲಿಯು ಸಿಂಹಕ್ಕಿಂತ ಬಲಿಷ್ಠ ಹೇಗೆ ?
(iii) ಹುಲಿಯು ಹೇಗೆ ಬೇಟೆಯಾಡುತ್ತದೆ ?
(iv) ಭಾರತದಲ್ಲಿ ಹುಲಿಗಳು ಹೆಚ್ಚಾಗಿ ಎಲ್ಲಿ ವಾಸಿಸುತ್ತವೆ ?
(v) ಹುಲಿಗಳು ಯಾವಾಗ ನರಭಕ್ಷಕಗಳಾಗುತ್ತವೆ. ?

೧೩. ಅಬ್ರಹಾಂ ಲಿಂಕನ್

ಅಮೇರಿಕೆಯ ನಾಲ್ಕು ಜನ ಶ್ರೇಷ್ಠ ಅಧ್ಯಕ್ಷರಲ್ಲಿ ಅಬ್ರಹಾಂ ಲಿಂಕನ್ ಒಬ್ಬನು. ಅಂತಃಕಲಹದಿಂದ ದೇಶವೇ ಒಡೆದು ಹೋಗುವ ದುರ್ಧರ ಪ್ರಸಂಗದಲ್ಲಿ 'ನನ್ನ ಪರಮೋಚ್ಚ ಗುರಿ ರಾಷ್ಟ್ರದ ಐಕ್ಯ' ಎಂದು ಸಾರಿ ದೇಶದ ಅಖಂಡತೆಯನ್ನು ಉಳಿಸಿದ ಮಹಾನುಭಾವ ಅಬ್ರಹಾಂ ಲಿಂಕನ್.

"ಇತರರಿಗೆ ಸ್ವಾತಂತ್ರ್ಯ ನೀಡದವನಿಗೆ ವೈಯಕ್ತಿಕ ಸ್ವಾತಂತ್ರ್ಯದ ಹಕ್ಕಿಲ್ಲ. ಗುಲಾಮಗಿರಿಯು ಎಲ್ಲ ಕಡೆಯಲ್ಲಿಯೂ ಸಂಪೂರ್ಣವಾಗಿ ನಿರ್ನಾಮವಾಗಲೇ ಬೇಕು" ಎಂದು ನೂರು ವರುಷಗಳ ಹಿಂದೆಯೆ ಘೋಷಿಸಿ ಗುಲಾಮರ ಬಂಧ ವಿಮೋಚನೆಗಾಗಿ ಹೋರಾಡಿದ ಧೀರ ಮಾನವ. ಅಬ್ರಹಾಂ ಲಿಂಕನ್.

ಅಬ್ರಹಾಂ ಲಿಂಕನ್ನನ ಜನನ ಬಡ ಕುಟುಂಬವೊಂದರಲ್ಲಿ ಕ್ರಿ. ಶ. ೧೮೦೯ ಫೆಬ್ರುವರಿ ದಿನಾಂಕ ೧೨ ರಂದು ಆಯಿತು. ಹುಟ್ಟಿದ ಊರು ಕೆಂಟಕಿ. ತಂದೆಯ ಹೆಸರು ಥಾಮಸ್. ತಾಯಿಯ ಹೆಸರು ನ್ಯಾನ್ಸಿ. ಲಿಂಕನ್ನನಿಗೆ ಬಾಲ್ಯದಲ್ಲಿ ಸರಿಯಾದ ಶಿಕ್ಷಣ ದೊರೆಯಲಿಲ್ಲ. ಅವನು ಶಾಲೆಗೆ ಹೋಗಿ ಕಲಿತದ್ದು ಕೇವಲ ಒಂದು ವರುಷ. ಲಿಂಕನ್ನನು ಒಂಬತ್ತು ವರುಷದವನಿದ್ದಾಗ ಅವನ ತಾಯಿಯು ತೀರಿಕೊಂಡಳು. ಆದರೆ ಮಲತಾಯಿಯು ಲಿಂಕನನನ್ನು ಸರಿಯಾಗಿ ನೋಡಿಕೊಂಡಳು. ಅವಳು 'ಲಿಂಕನ್. ಯಾವ ತಾಯಿಯಾದರೂ ಹೆಮ್ಮೆ ಪಡುವಂಥ ಮಗ' ಎಂದು ಅಭಿಮಾನದಿಂದ ಹೇಳಿಕೊಳ್ಳುತ್ತಿದ್ದಳಂತೆ.

ಶಾಲೆಗೆ ಹೋಗಿ ಕಲಿಯುವ ಅವಕಾಶ ದೊರೆಯದಿದ್ದರೂ ಲಿಂಕನ್ನನು ತನ್ನ ಸ್ವಂತ ಪರಿಶ್ರಮದಿಂದ. ಕಷ್ಟಪಟ್ಟು ಕಲಿತು ವಕೀಲನಾದನು. ವಕೀಲ ವೃತ್ತಿಯನ್ನು ಕೈಕೊಳ್ಳುವ ಪೂರ್ವದಲ್ಲಿ ಲಿಂಕನ್ನನು ಮರಕಡಿಯುವ. ತೆಪ್ಪ ದೋಣಿಗಳನ್ನು ನಡೆಸುವ ಕೆಲಸ ಮಾಡಿದ. ಕೆಲವು ಕಾಲ ಹಳ್ಳಿಯ ಪೋಸ್ಟ್ ಮಾಸ್ಟರ್ ನೌಕರಿ ಮಾಡಿದ.

ಲಿಂಕನ್ನನು ಆ ಕಾಲದಲ್ಲಿ ನಡೆಯುತ್ತಿದ್ದ ರಾಜಕೀಯ ಚರ್ಚೆಗಳಲ್ಲಿ ಭಾಗ ವಹಿಸುತ್ತಿದ್ದನು. ಇವನ ವಾದಸರಣಿ ಮತ್ತು ಪ್ರಾಮಾಣಿಕತೆಯನ್ನು ಮೆಚ್ಚಿಕೊಂಡ ಜನ ಲಿಂಕನ್ನನನ್ನು ನ್ಯಾಯವಿಧಾಯಕ ಸಭೆಗೆ ಆರಿಸಿದರು. ಮುಂದೆ ೧೮೪೭ರಲ್ಲಿ ಸಂಯುಕ್ತ ಸಂಸ್ಥಾನದ ಕಾಂಗ್ರೆಸ್ಸಿನ ಸದಸ್ಯನಾದ.

ಲಿಂಕನ್ನನು ಕಾಂಗ್ರೆಸ್ಸಿನಲ್ಲಿ ಗುಲಾಮಗಿರಿಯ ಪದ್ಧತಿಯನ್ನು ರದ್ದುಗೊಳಿಸುವ ಮಸೂದೆಯನ್ನು ಮಂಡಿಸಿದನು. ಅನೇಕ ದಿನಗಳವರೆಗೆ ಬಿರುಸಿನ ಚರ್ಚೆ ನಡೆಯಿತು. ಆದರೆ ಆ ಮಸೂದೆ ಬಿದ್ದುಹೋಯಿತು. ಆಗಿನ ಅಮೇರಿಕೆಯ ಕಾಂಗ್ರೆಸ್ಸು ಗುಲಾಮಗಿರಿಯನ್ನು ಸಮರ್ಥಿಸುವ ಮಸೂದೆಯನ್ನು ಅಂಗೀಕರಿಸಿತು. ಇದರಿಂದ ದೇಶವು ಇಬ್ಭಾಗವಾಯಿತು.

೧೮೬೦ ರಲ್ಲಿ ರಿಪಬ್ಲಿಕನ್ ಪಕ್ಷವು ಅಬ್ರಹಾಂ ಲಿಂಕನ್ನನನ್ನು ಅಮೇರಿಕೆಯ ಅಧ್ಯಕ್ಷಸ್ಥಾನಕ್ಕೆ ತನ್ನ ಉಮೇದುವಾರನನ್ನಾಗಿ ಆರಿಸಿತು. ರಾಷ್ಟ್ರದ ಐಕ್ಯತೆಗಾಗಿ ಮತ್ತು ಗುಲಾಮಗಿರಿಯ ನಿರ್ಮೂಲನಕ್ಕಾಗಿ ತನ್ನನ್ನು ಆರಿಸಬೇಕೆಂದು ಲಿಂಕನ್ನನು ಜನತೆಗೆ ಕೇಳಿಕೊಂಡನು. ಅತ್ಯಂತ ತುರುಸಿನಿಂದ ನಡೆದ ಆ ಐತಿಹಾಸಿಕ ಚುನಾವಣೆಯಲ್ಲಿ ಲಿಂಕನ್ನನು ತನ್ನ ಎದುರಾಳಿಗಿಂತ ಐದು ಲಕ್ಷ ಹೆಚ್ಚು ಮತಗಳನ್ನು ಗಳಿಸಿ ಅಧ್ಯಕ್ಷನಾಗಿ ಆರಿಸಿಬಂದನು.

ಲಿಂಕನ್ನನು ಅಧ್ಯಕ್ಷನಾದ ಕೂಡಲೆ, ದೇಶದಲ್ಲಿ ಅಂತರ್ಯುದ್ಧ ಪ್ರಾರಂಭವಾಯಿತು. ದಕ್ಷಿಣದ ಏಳು ಸಂಸ್ಥಾನಗಳು ಒಕ್ಕೂಟದಿಂದ ಬೇರೆಯಾದವು. ನಾಲ್ಕು ವರುಷಗಳ ಕಾಲ ದಕ್ಷಿಣದವರಿಗೂ, ಉತ್ತರದವರಿಗೂ ಘೋರಯುದ್ಧ ನಡೆಯಿತು. ಎರಡು ಕಡೆಗೂ ಅಪಾರ ಸಾವುನೋವುಗಳುಂಟಾದವು.

ಇದೇ ಕಾಲಕ್ಕೆ ಲಿಂಕನ್ನನು ರಾಷ್ಟ್ರದ ಜನತೆಯನ್ನುದ್ದೇಶಿಸಿ "ಗೆಟ್ಸ್‌ಬರ್ಗ್" ಎಂಬಲ್ಲಿ ಅಮೋಘವಾದ ಭಾಷಣ ಮಾಡಿದನು.

"ನಮ್ಮ ಹಿರಿಯರು ಹುಟ್ಟಿನಿಂದ ಸರ್ವರೂ ಸಮಾನರು ಎಂಬ ಮಹತ್ ಕಲ್ಪನೆಗೆ ಮುಡಿಪಾಗಿಟ್ಟು ನೂತನ ರಾಷ್ಟ್ರವೊಂದನ್ನು ಈ ಖಂಡದಲ್ಲಿ ಸೃಷ್ಟಿಸಿದರು. ದೈವಕೃಪೆಯಿಂದ ಈ ರಾಷ್ಟ್ರದಲ್ಲಿ ಸ್ವಾತಂತ್ರ್ಯವು ಪುನರ್ಜನ್ಮ ತಳೆಯಬೇಕು. ಜನರ, ಜನರಿಂದ, ಜನರಿಗಾಗಿ ಇರುವ ಈ ಸರಕಾರ ಭೂಮಿಯಿಂದ ಅಳಿದು ಹೋಗದಂತೆ ಮಾಡಲು ದೃಢಸಂಕಲ್ಪ ಕೈಕೊಳ್ಳುವ ಕರ್ತವ್ಯ ನಮ್ಮದಾಗಿದೆ." ಇದು ಲಿಂಕನ್ನನ ಗೆಟ್ಸ್‌ಬರ್ಗ್ ಭಾಷಣವೆಂದು ಇತಿಹಾಸದಲ್ಲಿ ಪ್ರಸಿದ್ಧಿಯನ್ನು ಪಡೆದಿದೆ.

ಲಿಂಕನ್ ಎರಡನೆಯ ಬಾರಿ ಕ್ರಿ. ಶ. ೧೮೬೪ ರಲ್ಲಿ ಅಮೇರಿಕೆಯ ಅಧ್ಯಕ್ಷನಾಗಿ ಆರಿಸಿ ಬಂದನು. ಮುಂದೆ ಒಂದು ವರುಷದಲ್ಲಿಯೆ ಆಂತರಿಕ ಯುದ್ಧವು ಕೊನೆಗೊಂಡಿತು. ಅಬ್ರಹಾಂ ಲಿಂಕನ್ನನಿಗೆ ಜಯವಾಯಿತು.

ಆ ದಿನ ಅಮೇರಿಕೆಯ ತುಂಬೆಲ್ಲ ವಿಜಯೋತ್ಸವ ನಡೆದಿತ್ತು. ಲಿಂಕನ್ನನು ಆಯಾಸ ಪರಿಹಾರ ಮಾಡಿಕೊಳ್ಳಲು ನಾಟಕ ನೋಡಲು ಹೋದನು. ಆ ನಾಟಕ ಶಾಲೆಯಲ್ಲಿಯೆ ರಾತ್ರಿ ಹತ್ತು ಗಂಟೆಗೆ ಅಜ್ಞಾತ ವ್ಯಕ್ತಿಯೊಬ್ಬನು ಲಿಂಕನ್ನನನ್ನು ಗುಂಡಿಕ್ಕಿ ಕೊಂದನು.

ಲಿಂಕನ್ನನು ಮಡಿದನು. ಆದರೆ ಅವನ ವಿಚಾರಗಳು ಸಾಯಲಿಲ್ಲ. ಲಿಂಕನ್ ಅಮರನಾದನು.

ಅಭ್ಯಾಸ

೧. ಕಠಿನ ಪದಗಳ ಅರ್ಥ :—

ಪರಮೋಚ್ಚ = ಶ್ರೇಷ್ಠ ; ಐಕ್ಯ = ಒಕ್ಕಟ್ಟು ; ಅಖಂಡತೆ = ಭಿನ್ನವಲ್ಲದಿರುವಿಕೆ ; ದುರ್ಧರ = ಕಠಿನ ; ನಿರ್ನಾಮ = ನಾಶ ; ಧೀರ = ಶೂರ, ಧೈರ್ಯವುಳ್ಳವ ; ಮಂಡಿಸು = ಸಭೆಯ ಮುಂದೆ ಇಡು ; ಅಂಗೀಕರಿಸು = ಒಪ್ಪು, ಸಮ್ಮತಿಸು ; ತುರುಸು = ಜಿದ್ದು ; ಅಮೋಘ = ಶ್ರೇಷ್ಠ ; ಅಜ್ಞಾತ = ಅಪರಿಚಿತ.

೨. ಸಂಧಿಗಳು :—

ಪರಮ + ಉಚ್ಚ = ಪರಮೋಚ್ಚ (ಗುಣಸಂಧಿ). ವಿಜಯ + ಉತ್ಸವ = ವಿಜಯೋತ್ಸವ (ಗುಣಸಂಧಿ). ಗುಂಡು + ಇಕ್ಕಿ = ಗುಂಡಿಕ್ಕಿ (ಸ್ವರಲೋಪ ಸಂಧಿ). ಹಕ್ಕು + ಇಲ್ಲ = ಹಕ್ಕಿಲ್ಲ (ಸ್ವರಲೋಪ ಸಂಧಿ).

೩. ಕೆಳಗಿನ ಶಬ್ದಗಳಲ್ಲಿ ನಾಮಪದ, ವಿಶೇಷಣ, ಕ್ರಿಯಾಪದಗಳು ಆವುವು ಎಂಬುದನ್ನು ಗುರುತಿಸಿ :—

ನದಿ, ಶಂಖ, ಬಲವಂತ, ಹಾಡಿದನು. ಕಾಡು, ತಂಪಾದ, ಗೆದ್ದನು, ಬಂದನು.

೪. ಕೆಳಗೆ ಕೊಟ್ಟ ಶಬ್ದಗಳನ್ನು ನಿಮ್ಮ ವಾಕ್ಯಗಳಲ್ಲಿ ಉಪಯೋಗಿಸಿ :—

ಪರಮೋಚ್ಚ, ಅಮೋಘ, ಅಜ್ಞಾತ. ಧೀರ. ದುರ್ಧರ.

೫. ಈ ಪ್ರಶ್ನೆಗಳಿಗೆ ಉತ್ತರಿಸಿ :—

(೧) ಅಬ್ರಹಾಂ ಲಿಂಕನ್ನನ ಜನನ ಎಂದು ಆಯಿತು ?
(೨) ಲಿಂಕನ್ನನ ಮಲತಾಯಿ ಅವನ ಬಗ್ಗೆ ಏನೆಂದು ಅಭಿಮಾನಪಡುತ್ತಿದ್ದಳು ?
(೩) ಲಿಂಕನ್ನನು ವಕೀಲನಾಗುವ ಮುನ್ನ ಯಾವ ಯಾವ ಕೆಲಸಗಳನ್ನು ಮಾಡಿದನು ?
(೪) ಲಿಂಕನ್ನನು ಏತಕ್ಕಾಗಿ ತನ್ನನ್ನು ರಾಷ್ಟ್ರಪತಿಯನ್ನಾಗಿ ಆರಿಸಬೇಕೆಂದು ಹೇಳಿದನು ?
(೫) ಲಿಂಕನ್ನನು ಸತ್ತುದು ಹೇಗೆ ?

---

೧೪. ಚಕ್ರವ್ಯೂಹ

[ಮಹಾಭಾರತ ಯುದ್ಧದ ಹದಿಮೂರನೆಯ ದಿನ ಕೃಷ್ಣಾರ್ಜುನರು ಸಂಶಪ್ತಕರನ್ನು ಅಟ್ಟಿಸಿಕೊಂಡು ಬಹುದೂರ ಹೋದರು. ಇದೇ ಸಂಧಿಯನ್ನು ಸಾಧಿಸಿ ಕುರುಸೈನ್ಯದ ನಾಯಕರಾದ ದ್ರೋಣಾಚಾರ್ಯರು ಅಭೇದ್ಯವಾದ ಚಕ್ರವ್ಯೂಹವನ್ನು ರಚಿಸಿ ಪಾಂಡವರನ್ನು ಆಹ್ವಾನಿಸಿದರು. ಭೀಮ ಧೃಷ್ಟದ್ಯುಮ್ನರೇ ಮೊದಲಾದ ವೀರಾಧಿವೀರರು ಚಕ್ರವ್ಯೂಹವನ್ನು ಭೇದಿಸಲು ಹೋಗಿ ಪರಾಭವಗೊಂಡು ಹಿಂದಿರುಗಿದರು. ಪಾಂಡವರ ಪಾಳ್ಯವಲ್ಲಿ ಮಂಕು ಕವಿದಿದೆ. ಧರ್ಮರಾಜನು ದಿಕ್ಕು ತೋಚದೆ ತಲೆಗೆ ಕೈ ಹಚ್ಚಿಕೊಂಡು ಕುಳಿತುಕೊಂಡಿದ್ದಾನೆ. ಆಗ ಅಭಿಮನ್ಯು ಅಲ್ಲಿಗೆ ಬರುತ್ತಾನೆ.]

ದೃಶ್ಯ ೧

ಅಭಿಮನ್ಯು :—ದೊಡ್ಡಪ್ಪ, ತಾವು ಇಂದು ಇಷ್ಟೇಕೆ ಚಿಂತಾಕ್ರಾಂತರಾಗಿ ಕುಳಿತಿರುವಿರಿ ? ಆದದ್ದಾದರೂ ಏನು ?

ಧರ್ಮರಾಜ :—ಮಗು ಅಭಿಮನ್ಯು, ಇಂದು ನಡೆಯಲಿರುವ ಕುರುಕ್ಷೇತ್ರ ಯುದ್ಧ ಮಹಾಭಯಂಕರವಾದುದು. ಕುರುಸೈನ್ಯದ ಮಹಾಸೇನಾನಿ ದ್ರೋಣಾಚಾರ್ಯರು ಅಭೇದ್ಯವಾದ ಚಕ್ರವ್ಯೂಹವನ್ನು ರಚಿಸಿ ನಮ್ಮನ್ನು ಆಹ್ವಾನಿಸಿದ್ದಾರೆ. ಅತ್ತ ಕೃಷ್ಣಾರ್ಜುನರು ಸಂಶಪ್ತಕರೊಡನೆ ಯುದ್ಧ ಮಾಡಲು ಹೋಗಿದ್ದಾರೆ.

ಅಭಿಮನ್ಯು :—ಆದರೇನಂತೆ, ಅದಕ್ಕೇಕಿಷ್ಟು ಭಯಪಡಬೇಕು, ದೊಡ್ಡಪ್ಪ.

ಧರ್ಮರಾಜ :—ಆಚಾರ್ಯ ದ್ರೋಣರು ಇಂದಿನ ಯುದ್ಧದಲ್ಲಿ ಒಬ್ಬ ಪಾಂಡವನನ್ನಾದರೂ ಬಲಿ ತೆಗೆದುಕೊಳ್ಳುತ್ತೇನೆಂದು ಶಪಥ ಮಾಡಿದ್ದಾರೆ.

ಅಭಿಮನ್ಯು :—ದೊಡ್ಡಪ್ಪ ದ್ರೋಣರ ಈ ಆಹ್ವಾನವನ್ನು ನಾವು ಸ್ವೀಕರಿಸಲೇಬೇಕು. ಅವರ ಪೊಳ್ಳು ಬೆದರಿಕೆಗೆ ನಾವು ಅಂಜಬೇಕಾಗಿಲ್ಲ.

ಧರ್ಮರಾಜ :—ಚಕ್ರವ್ಯೂಹವನ್ನು ಹೊಕ್ಕು ಯುದ್ಧ ಮಾಡಿ ಸುರಕ್ಷಿತವಾಗಿ ಹೊರಗೆ ಬರಬಲ್ಲವರು ಶ್ರೀಕೃಷ್ಣ, ಪ್ರದ್ಯುಮ್ನ ಮತ್ತು ಅರ್ಜುನ—ಈ ಮೂವರು ಮಾತ್ರ. ಇಂದು ಕೃಷ್ಣಾರ್ಜುನರು ನಮ್ಮ ಜೊತೆಯಲ್ಲಿಲ್ಲ.

ಅಭಿಮನ್ಯು :—ದೊಡ್ಡಪ್ಪ, ನಾನು ದ್ರೋಣರ ವ್ಯೂಹವನ್ನು ಗೆಲ್ಲುತ್ತೇನೆ. ನೀವು ಚಿಂತಿಸಬೇಡಿ. ನನಗೆ ಯುದ್ಧರಂಗಕ್ಕೆ ಹೋಗಲು ಅಪ್ಪಣೆ ಕೊಡಿ.

ಧರ್ಮರಾಜ :—ಮಗು, ನೀನು ಅಸಮಬಲ, ಪರಾಕ್ರಮಶಾಲಿ ಎಂಬುದು ನನಗೆ ಗೊತ್ತು. ನಿನ್ನ ವಯಸ್ಸಿಗೆ ಮೀರಿದ ತೋಳ್ಬಲ ನಿನ್ನಲ್ಲಿದೆ. ಆದರೆ ಕೌರವಸೈನ್ಯದಲ್ಲಿ ನುರಿತ ಯುದ್ಧವೀರರಿದ್ದಾರೆ. ಅತಿರಥ ಮಹಾರಥರಿದ್ದಾರೆ. ಅವರನ್ನು ನೀನು ಎದುರಿಸಬಲ್ಲೆಯಾ ? ಈ ಸಾಹಸ ಬೇಡ ಮಗು.

ಅಭಿಮನ್ಯು :—ಅಪ್ಪಾಜಿ, ಯುದ್ಧದಲ್ಲಿ ಎಂತಹ ವೀರಾಧಿವೀರರೇ ಎದುರಾಗಲಿ ಅದರ ಪರಿವೆ ನನಗಿಲ್ಲ. ಅವರನ್ನು ನಾನು ಖಂಡಿತ ಗೆಲ್ಲುತ್ತೇನೆ.

ಧರ್ಮರಾಜ :—ಮಗು. ನೀನು ಇನ್ನೂ ಹಾಲುಗಲ್ಲದ ಹಸುಳೆ. ಇಂದಿನ ಈ ಭಯಂಕರ ಕಾಳಗಕ್ಕೆ ನಿನ್ನನ್ನು ಹೇಗೆ ಕಳಿಸಲಿ ?

ಅಭಿಮನ್ಯು :—ಅಪ್ಪಾಜಿ. ನಾನು ಬಾಲಕ ನಿಜ. ಆದರೆ ನನ್ನ ಬಾಣಗಳಿಗೆ ಬಾಲಕತನವಿಲ್ಲ. ಸಿಂಹದ ಹೊಟ್ಟೆಯಿಂದ ಸಿಂಹದ ಮರಿಯೆ ಹುಟ್ಟುವದು. ಈ ಮರಿಸಿಂಹವು ಆ ಕೌರವ ಮದ್ದಾನೆಗಳನ್ನು ಎದುರಿಸಿ ಚದುರಿಸುವ ಪರಿಯನ್ನು ಕಾಣುವಿರಿ. ನೀವು ನನಗೆ ಯುದ್ಧರಂಗಕ್ಕೆ ಹೋಗಲು ಅಪ್ಪಣೆ ಕೊಡಿ. ದ್ರೋಣರೊಡ್ಡಿದ ವ್ಯೂಹವನ್ನು ಚದುರಿಸಿ. ವೈರಿಗಳಿಗೆ ಮಣ್ಣುಮುಕ್ಕಿಸುವೆನು.

ಧರ್ಮರಾಜ:—(ಉಪಾಯಗಾಣದೆ) ಮಗು ವಿಜಯೀ ಭವ: ಮೂಜಗವು ಬೆರಳು ಕಚ್ಚುವಂತೆ ವೀರಶ್ರೀಯನ್ನು ಮೆರೆ. (ಎಂದು ಹೇಳಿ ಬೀಳ್ಕೊಡುವನು.)

(ತೆರೆ ಬೀಳುವುದು)

ದೃಶ್ಯ ೨

ಅಭಿಮನ್ಯು :—ಸಾರಥಿ ಬೇಗ ನಡೆ. ತಾಯಿಯವರ ಆಶೀರ್ವಾದವನ್ನು ಪಡೆದು ಬರುವೆ.

ಸಾರಥಿ :—ಅಭಿಮನ್ಯು ಸ್ವಲ್ಪ ಯೋಚಿಸು. ದುಡುಕಬೇಡ. ನೀನು ಹೊರುತ್ತಿರುವ ಈ ಹೊಣೆ ಬಹು ದೊಡ್ಡದು. ನೀನಿನ್ನೂ ಬಾಲಕ. ನಿನಗೆ ಯುದ್ಧದ ಅನುಭವವಿಲ್ಲ. ದ್ರೋಣರ ಎದುರು ನಿಂತು ಯುದ್ಧ ಮಾಡುವವರನ್ನು ನಾ ಕಾಣೆ.

ಅಭಿಮನ್ಯು :—(ಮಂದಸ್ಮಿತನಾಗಿ) 'ಸಾರಥಿ, ಗಾಳಿ ಬೆವರುತ್ತದೆಯೆ, ದೊಡ್ಡ ಉರಿ ಮಂಜಿಗೆ ಹೆದರುತ್ತದೆಯೆ ?' ಈ ಕೌರವಸೈನ್ಯಕ್ಕೆ ನಾನು ಹೆದರಬೇಕೆ ? ಕೇಳು ನನ್ನ ಪರಾಕ್ರಮವನ್ನು :—

"ಬವರವಾದರೆ ಹರನ ವದನಕೆ
ಬೆವರ ತಹೆನವಗಡಿಸಿದರೆ ವಾ
ಸವನ ಸದೆವೆನು ಹೊಕ್ಕಡಹುದೆನಿಸುವೆನು ಭಾರ್ಗವನ
ಜವನ ಜವಗೆಡಿಸುವೆನು ಸಾಕಿ
ನ್ನಿವರವರಲೇನರ್ಜುನನು ಮಾ
ಧವನು ಮುನಿದಡೆ ಗೆಲುವೆನಂಜದೆ ರಥವ ಹರಿಸು"

ಸಾರಥಿ, ಮುಂದೆ ನಡೆ.

[ಸಾರಥಿಯೊಡನೆ ಅಭಿಮನ್ಯು ತಾಯಿ ಇದ್ದಲ್ಲಿ ಬರುತ್ತಾನೆ. ಅಲ್ಲಿ ಅಭಿಮನ್ಯುವಿನ ಹೆಂಡತಿ ಉತ್ತರೆಯೂ ಇರುತ್ತಾಳೆ.]

ಅಭಿಮನ್ಯು :—ಅಮ್ಮಾ, ರಣರಂಗಕ್ಕೆ ಹೊರಡಲು ಸಿದ್ಧನಾಗಿ ಬಂದಿದ್ದೇನೆ. ದ್ರೋಣರ ಚಕ್ರವ್ಯೂಹವನ್ನು ಭೇದಿಸಲು ದೊಡ್ಡಪ್ಪನು ನನ್ನನ್ನು ನೇಮಿಸಿದ್ದಾರೆ. ಆಶೀರ್ವದಿಸಮ್ಮ.

ಸುಭದ್ರೆ :—(ಚಕ್ರವ್ಯೂಹ ಶಬ್ದ ಕೇಳಿ ಭಯಭೀತಳಾಗುತ್ತಾಳೆ. ಅದನ್ನು ಹೊರಗೆ ತೋರಗೊಡದೆ) ಮಗು, ನೀನು ವೀರಬಾಲಕನೆಂಬುದನ್ನು ನಾನು

ಬಲ್ಲೆ. ನಿನ್ನ ತಂದೆ ಮೂರು ಲೋಕದ ಗಂಡನೆಂದು ಕರೆಸಿಕೊಂಡಿದ್ದಾರೆ. ಅವರಿಗೆ ಕೀರ್ತಿ ಬರುವಂತೆ ವೀರಶ್ರೀಯನ್ನು ಮೆರೆ. ವಿಜಯಶಾಲಿಯಾಗಿ ಬಾ. ಮಗು. (ಎಂದು ಹರಸಿ ಬೀಳ್ಕೊಡುತ್ತಾಳೆ).

ಉತ್ತರೆ :—ನಿಲ್ಲಿ. ನಿಲ್ಲಿ. ನಿಮ್ಮ ಹಣೆಗೆ ವೀರತಿಲಕವನ್ನಿಡುವೆನು. (ಅಭಿಮನ್ಯುವಿನ ಹಣೆಗೆ ತಿಲಕವನ್ನಿಡುತ್ತಾಳೆ). ವಿಜಯದುಂದುಭಿಯೊಡನೆ ಮರಳಿ ಬರುವ ತಮ್ಮನ್ನು ಸ್ವಾಗತಿಸಲು ದಾರಿಕಾಯುತ್ತ ಇಲ್ಲಿಯೆ ನಿಂತಿರುವೆ. ಹೋಗಿ ಬನ್ನಿ, . . . ನಾಥ. (ಉತ್ತರೆಯ ಕಣ್ಣಂಚಿನಲ್ಲಿ ನೀರೂರುತ್ತದೆ.)

[ಅಭಿಮನ್ಯು ಒಂದು ಕ್ಷಣ ಅವಳತ್ತ ನೋಡಿ ಸರಸರನೆ ಹೊರಟುಹೋಗುತ್ತಾನೆ.]

(ತೆರೆ ಬೀಳುವುದು)

ಅಭ್ಯಾಸ

೧. (ಅ) ಕಠಿನ ಶಬ್ದಗಳ ಅರ್ಥ :—

ಅಭೇದ್ಯ = ಭೇದಿಸಲು ಅಸಾಧ್ಯವಾದ ; ಆಹ್ವಾನಿಸು = ಕರೆ ; ಪರಾಭವ = ಸೋಲು ; ಮಂಕು = ಮಬ್ಬು ; ಸಂಶಪ್ತಕರು = ಶಪಥ ಮಾಡಿ ಯುದ್ಧ ಮಾಡುವವರು; ಅಸಮ = ಸಮವಿಲ್ಲದ್ದು, ಶ್ರೇಷ್ಠ ; ತೋಳ್ಬಲ = ಬಾಹುಬಲ ; ಪರಿ = ರೀತಿ ; ಜಂಘಾಬಲ = ಕಾಲಿನ ಬಲ, ಮುಂಡಿಯ ಬಲ ; ವಿಜಯೀ ಭವ = ವಿಜಯಶಾಲಿಯಾಗು ; ದುಡುಕು = ಅವಸರ ಮಾಡು ; ಬವರ = ಯುದ್ಧ ; ವದನ = ಮುಖ ; ವಾಸವ = ಇಂದ್ರ ; ಭಾರ್ಗವ = ಪರಶು ರಾಮ ; ಜವ = ಯಮ ; ದುಂದುಭಿ = ನಗಾರಿ.

(ಆ) ನುಡಿಗಟ್ಟುಗಳು :—

ಸಂಧಿಸಾಧಿಸು = ಅವಕಾಶವನ್ನು ಉಪಯೋಗ ಮಾಡಿಕೊ.

ರಕ್ತ ಹೆಪ್ಪುಗಟ್ಟು = ಭಯದಿಂದ ದೇಹವು ಕೆಲಸ ಮಾಡದಂತಾಗು.

ಬೆರಳು ಕಚ್ಚು = ಆಶ್ಚರ್ಯವನ್ನು ವ್ಯಕ್ತಪಡಿಸು.

೨. ಈ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :—

(i) ಮಹಾಭಾರತ ಯುದ್ಧದ ಹದಿಮೂರನೆಯ ದಿನ ಕೃಷ್ಣಾರ್ಜುನರು ಎಲ್ಲಿ ಹೋಗಿದ್ದರು ?

(ii) ಪಾಂಡವರ ಪಾಳ್ಯದಲ್ಲಿ ಕಳವಳವೇಕೆ ಉಂಟಾಗಿತ್ತು ?

(iii) ಅಂದು ದ್ರೋಣಾಚಾರ್ಯರು ಏನೆಂದು ಶಪಥ ಮಾಡಿದ್ದರು ?

(iv) ಧರ್ಮರಾಜನು ಅಭಿಮನ್ಯುವನ್ನು ಚಕ್ರವ್ಯೂಹವನ್ನು ಭೇದಿಸಲು ಕಳುಹಿಸುವುದಕ್ಕೆ ಏಕೆ ಒಪ್ಪಿದನು ?

(v) ಸಾರಥಿಗೆ ಅಭಿಮನ್ಯು ಕೊಟ್ಟ ಉತ್ತರವೇನು ?

(vi) ತಾಯಿ ಸುಭದ್ರೆ ಅಭಿಮನ್ಯುವಿಗೆ ಏನೆಂದು ಹರಸಿದಳು ?

೩. ಕೆಳಗಿನ ವಾಕ್ಯಗಳಲ್ಲಿ ಕರ್ತೃ, ಕರ್ಮ, ಕ್ರಿಯಾಪದಗಳನ್ನು ಗುರುತಿಸಿರಿ :—

(೧) ಕೃಷ್ಣಾರ್ಜುನರು ಸಂಶಪ್ತಕರನ್ನು ಅಟ್ಟಿಸಿಕೊಂಡು ಬಹುದೂರಕ್ಕೆ ಹೋದರು.

(೨) ದ್ರೋಣಾಚಾರ್ಯರು ಪಾಂಡವರನ್ನು ಯುದ್ಧಕ್ಕೆ ಆಹ್ವಾನಿಸಿದರು.

(೩) ನಾನು ದ್ರೋಣರ ಚಕ್ರವ್ಯೂಹವನ್ನು ಭೇದಿಸುತ್ತೇನೆ.

(೪) ಚಕ್ರವ್ಯೂಹದೊಳಗಿಂದ ಹೊರಬರುವ ಪರಿಯನ್ನು ವಿವರಿಸಿಲ್ಲ.

(೫) ಸುಭದ್ರೆಯು ಚಕ್ರವ್ಯೂಹವೆಂಬ ಶಬ್ದ ಕೇಳಿದಳು. ಭಯಭೀತಳಾದಳು.

೪. ಈ ದೃಶ್ಯಗಳನ್ನು ನಿಮ್ಮ ಶಾಲೆಯ ವಾರ್ಷಿಕೋತ್ಸವದಲ್ಲಿ ಪ್ರದರ್ಶಿಸಿ.

---

೧೫. ಬಾಹುಬಲಿ

ಜೈನಧರ್ಮದ ಆದಿತೀರ್ಥಂಕರ ವೃಷಭದೇವನ ಕಿರಿಯ ಮಗನೆ ಬಾಹುಬಲಿ. ಈತನ ಮಲತಾಯಿಯ ಮಗ ಭರತ. ಇವನಿಗಿಂತ ಹಿರಿಯ; ಇವನ ಮಲಅಣ್ಣ.

ತಂದೆ ವೃಷಭದೇವ ಚಕ್ರವರ್ತಿಯಾಗಿ ಅನೇಕ ವರ್ಷ ರಾಜ್ಯಭಾರ ನಡೆಸಿದ ನಂತರ, ಸತ್ಯಜ್ಞಾನದ ಸಾಧನೆಗಾಗಿ ರಾಜ್ಯತ್ಯಾಗ ಮಾಡಲು ನಿರ್ಧರಿಸಿದ. ಅದಕ್ಕೆ ಮುಂಚೆ ಆತ ಹಿರಿಯ ಮಗ ಭರತನನ್ನು ಅಯೋಧ್ಯೆಗೆ ಹಾಗೂ ಕಿರಿಯ ಮಗ ಬಾಹುಬಲಿಯನ್ನು ಪೌದನಪುರಕ್ಕೆ ಅಧಿಪತಿಗಳನ್ನಾಗಿ ಮಾಡಿದ.

ಅಣ್ಣನಾದ ಭರತ ಚಕ್ರವರ್ತಿಯಾಗಿ ಆಳತೊಡಗಿದ ಕೆಲಕಾಲದಲ್ಲಿಯೇ ಆತನ ಶಸ್ತ್ರಾಗಾರದಲ್ಲಿ ಚಕ್ರರತ್ನವೊಂದು ಕಾಣಿಸಿಕೊಂಡಿತು. ಅದರಿಂದಾಗಿ ಆತ ದಿಗ್ವಿಜಯಕ್ಕೆ ಹೊರಟ. ಚಕ್ರರತ್ನವನ್ನು ಮುಂದಿಟ್ಟುಕೊಂಡು ಭರತಖಂಡದ ದೇಶದೇಶಗಳ ಮೇಲೆ ದಾಳಿ ಮಾಡಿದ. ಪ್ರತಿಭಟಿಸಿದವರನ್ನು ಬಗ್ಗುಬಡಿದು ಬಲಾತ್ಕಾರದಿಂದ ಕಪ್ಪ-ಕಾಣಿಕೆ ಪಡೆದ. ಇದರಿಂದಾಗಿ ಭರತನ ಗರ್ವ ಮೇರೆ ಮೀರಿತು.

ಭರತ ದಿಗ್ವಿಜಯವನ್ನು ಮುಗಿಸಿಕೊಂಡು ರಾಜಧಾನಿಗೆ ಮರಳಿದ. ಆದರೆ, ದಿಕ್ಕುದಿಕ್ಕುಗಳ ದೊರೆಗಳನ್ನು ಗೆದ್ದ ಚಕ್ರರತ್ನ ಪುರಪ್ರವೇಶ ಮಾಡದೆ ಮಹಾದ್ವಾರದಲ್ಲೇ ತಡೆದು ನಿಂತಿತು. ಅದನ್ನು ಕಂಡು ಭರತನಿಗೆ ಎಲ್ಲಿಲ್ಲದ ಆಶ್ಚರ್ಯ, ಆಘಾತವುಂಟಾಯಿತು.

"ಹೀಗೇಕೆ ?" ಎಂದು ಆತ ತನ್ನ ಮಂತ್ರಿಗಳನ್ನು ವಿಚಾರಿಸಿದ.

"ಭರತೇಶ್ವರ, ಯುವರಾಜನಾದ ಬಾಹುಬಲಿ ಇನ್ನೂ ಅಜೇಯನಾಗಿದ್ದಾನೆ. ಅದಕ್ಕೇ ಹೀಗೆ" ಎಂದು ಮಂತ್ರಿಗಳು ಉತ್ತರಿಸಿದರು.

ತತ್‌ಕ್ಷಣವೆ ಭರತ ದೂತರ ಮುಖಾಂತರ ಬಾಹುಬಲಿಗೆ ಹೇಳಿ ಕಳಿಸಿದ :

"ನೀನು, ನನ್ನ ಸಾರ್ವಭೌಮತ್ವವನ್ನು ಮನ್ನಿಸಿ, ನನ್ನನ್ನು ಕಾಣಲು ಬಾ."

ಅಣ್ಣನ ಆದೇಶ ಕೇಳಿ ಬಾಹುಬಲಿ ಅಪ್ರತಿಭನಾದ. ಆದರೆ ಆತ ಅವಿನಯಕ್ಕೆ ಎಡೆಗೊಡಲಿಲ್ಲ ; ಸ್ವಾಭಿಮಾನವನ್ನು ಬಿಡಲಿಲ್ಲ. ಅಣ್ಣನಿಗೆ ತನ್ನ ಮಾರುತ್ತರ ಮುಟ್ಟಿಸಿದ :

"ಸದ್ಗುಣಗಳನ್ನು ನಾನು ಸದಾ ಗೌರವಿಸುತ್ತೇನೆ. ಸುಶೀಲರೆದುರು ವಿನಮ್ರನಾಗಿ ತಲೆಯನ್ನೂ ಬಾಗಿಸುತ್ತೇನೆ. ಆದರೆ ಸಾರ್ವಭೌಮನೆಂದುಕೊಳ್ಳುವ ಯಾರೆದುರೂ—ಅದೇಕೆ, ಹಾಗೆಂದುಕೊಳ್ಳುವ ಹಿರಿಯಣ್ಣನ ಎದುರೂ—ನನ್ನ ತಲೆ ಬಾಗದು ! ಇದಕ್ಕೆ ಭರತ ಒಪ್ಪಿದರೆ ಸೈ ; ಸಂತೋಷವಾಗಿ ಬರುತ್ತೇನೆ. ಇಲ್ಲವಾದಲ್ಲಿ, ಯುದ್ಧಕ್ಕೂ ಸಿದ್ಧ."

ಹೀಗೆ ಅಣ್ಣ-ತಮ್ಮಂದಿರಲ್ಲಿ ಭಿನ್ನಾಭಿಪ್ರಾಯದ ಕಿಡಿ ಹೊತ್ತಿಕೊಂಡಿತು. ಯುದ್ಧ ಅನಿವಾರ್ಯವಾಯಿತು. ಶೀಘ್ರವೇ ಇಬ್ಬರೂ ಸಮರಕ್ಕೆ ಸನ್ನದ್ಧರಾಗಿ, ಸೈನ್ಯಸಮೇತ ಎದುರು-ಬದುರಾಗಿ ನಿಂತರು. "ಎರಡೂ ಪಕ್ಷದ ಅಸಂಖ್ಯಾತ ಸೈನಿಕರ ಸಾವು-ನೋವುಗಳಿಗೆ ಎಡೆಗೊಡುವ ಸಮೂಹಯುದ್ಧ ಸಲ್ಲನು". ಹೀಗೆಂದು ಎರಡು ಪಕ್ಷದ ಮಂತ್ರಿಗಳೂ ಹಿರಿಯರೂ ಅಭಿಪ್ರಾಯಪಟ್ಟರು. ಅದಕ್ಕೆ ಬದಲಾಗಿ ಅವರಿಬ್ಬರಲ್ಲಿಯೇ ದ್ವಂದ್ವಯುದ್ಧ ನಡೆಯುವುದು ಸೂಕ್ತವೆಂದು ತೀರ್ಮಾನಿಸಲಾಯಿತು.

ಅಣ್ಣ ತಮ್ಮಂದಿರು ಎರಡೂ ಪಕ್ಷದ ಮಂತ್ರಿಗಳ, ಸೇನಾಧಿಪತಿಗಳ, ಚತುರಂಗ ಬಲದ ಎದುರು ಯುದ್ಧಕ್ಕೆ ತೊಡಗಿದರು. ಅವರಲ್ಲಿ ಅನುಕ್ರಮವಾಗಿ ದೃಷ್ಟಿಯುದ್ಧ, ಜಲಯುದ್ಧ ಹಾಗೂ ಮಲ್ಲಯುದ್ಧ ನಡೆಯಿ[illegible] ಎಲ್ಲದರಲ್ಲೂ ಅಹಂಕಾರಿಯಾಗಿದ್ದ ಅಣ್ಣನಿಗೇ ಸೋಲಾಯಿತು. ಮಾ[illegible]



ಕೊನೆಯದಾದ ಮಲ್ಲಯುದ್ಧದಲ್ಲಿ ತಮ್ಮನಾದ ಬಾಹುಬಲಿ ಅಣ್ಣನಾದ ಭರತನನ್ನು ಅಪ್ಪಳಿಸಲೆಂದು ಮೇಲಕ್ಕೆತ್ತಿದರೂ, ಅಣ್ಣನೆಂಬ ಗೌರವದಿಂದ ಹಾಗೆ ಮಾಡದೆ ಮೆಲ್ಲಗೆ ಕೆಳಗಿಳಿಸಿದ. ಅಪಜಯದ ಅವಮಾನದಿಂದ ಅಣ್ಣ ಕೋಪದಿಂದ ಬೆಂಕಿಯಾದ. ಅವಿವೇಕಿಯಾಗಿ ಅಸಾಮಾನ್ಯ ಚಕ್ರರತ್ನವನ್ನು ತಮ್ಮನ ಮೇಲೆ ಬಿಟ್ಟ. ಆದರೆ ತಮ್ಮನ ಸುದೈವ. ಅದು ಆತನನ್ನು ಘಾತಿಸಲಿಲ್ಲ ; ಅದಕ್ಕೆ ಪ್ರತಿಯಾಗಿ, ಆತನಿಗೆ ಪ್ರದಕ್ಷಿಣೆ ಹಾಕಿ ಆತನ ಪಕ್ಕದಲ್ಲಿ ನಿಂತಿತು.

ಭರತ ನಾಚಿ ತಲೆ ತಗ್ಗಿಸಿದ.

ಅಣ್ಣನನ್ನು ಆ ಸ್ಥಿತಿಯಲ್ಲಿ ಕಂಡು ಬಾಹುಬಲಿಗೆ ಬಲು ಕೆಡುಕೆನಿಸಿತು. “ ಹಿರಿಯನಾದ ಅಣ್ಣನಲ್ಲಿ ಬಹು ದೊಡ್ಡ ಅವಿನಯವೆಸಗಿದೆನಲ್ಲಾ! ” ಎಂದು ತೀವ್ರ ಪಶ್ಚಾತ್ತಾಪವಾಯಿತು. ಅದೇ ಮುಂದೆ ವೈರಾಗ್ಯಕ್ಕೆ ದಾರಿ ಮಾಡಿ ಕೊಟ್ಟಿತು. ಅಂತೆಯೇ ಆತ ‘ ಅಣ್ಣತಮ್ಮಂದಿರನ್ನೇ ಹೊಡೆದಾಡಲು ಹಚ್ಚುವ ಈ ರಾಜ್ಯವೇ ನನಗೆ ಬೇಡ ’ ಎಂದುಕೊಂಡು, ತನ್ನ ರಾಜ್ಯವನ್ನೆಲ್ಲ ಅಣ್ಣನಿಗೆ ಒಪ್ಪಿಸಿದ.

“ ನನ್ನ ಸಲ್ಲದ ನಡವಳಿಕೆಯನ್ನು ಕ್ಷಮಿಸಣ್ಣ ” ಎಂದು ಬೇಡಿಕೊಂಡು ಬಾಹುಬಲಿ ತಪಸ್ಸಿಗೆ ಹೊರಟು ನಿಂತ.

ಬಾಹುಬಲಿಯ ಈ ಪಶ್ಚಾತ್ತಾಪ, ವೈರಾಗ್ಯ ಹಾಗೂ ತ್ಯಾಗಗಳನ್ನು ಕಣ್ಣಾರೆ ಕಂಡು ಭರತನಿಗೆ ಜ್ಞಾನೋದಯವಾಯಿತು. ‘ ನಾನಾದರೂ ಏಕೆ ತಾನೆ ಹೀಗೆ

ದುಡುಕಿದೆನೋ ! ಎಳೆವಯಸ್ಸಿನ ತಮ್ಮ ಬಾಹುಬಲಿ ವೈರಾಗ್ಯತಾಳಲು ಕಾರಣ ನಾದೆನೋ ! ' ಎಂದು ಪರಿತಪಿಸಿದ.

" ಬೇಡಪ್ಪ, ನೀನು ತಪಸ್ಸಿಗೆ ಹೋಗಬೇಡ " ಎಂದು ಪ್ರಾರ್ಥಿಸಿ, ಕಂಬನಿ ಸುರಿದು ತಮ್ಮನನ್ನು ತಡೆಯಲು ಯತ್ನಿಸಿದ.

ಬಾಹುಬಲಿ ಮಾತ್ರ ತನ್ನ ನಿರ್ಧಾರವನ್ನು ಸಡಿಲಿಸಲಿಲ್ಲ. ಅಣ್ಣನನ್ನು ಸಮಾಧಾನಗೊಳಿಸಿ, ತಂದೆಯ ಬಳಿಗೆ ಹೋದ. ಅಲ್ಲಿ ದೀಕ್ಷೆಗೊಂಡು ತಪಸ್ಸಿಗೆ ನಿಂತ.

ತಪೋಮಗ್ನನಾದ ಆತನ ಮೈಮೇಲೆ ಬಳ್ಳಿ ಹಬ್ಬಿದುವು. ಹಾವು ತಳ್ಕೆ ಹಾಕಿದುವು. ಆದರೆ ಆತನಿಗೆ ಆದಾವುದರ ಅರಿವೇ ಇರಲಿಲ್ಲ. ಹೀಗೆ ಆತ ಅನೇಕ ವರ್ಷ ತಪಸ್ಸು ಮಾಡಿದ. ಆದರೂ ಆತನಿಗೆ ' ಕೇವಲಜ್ಞಾನ ' ಪ್ರಾಪ್ತ ವಾಗಲಿಲ್ಲ. " ತಾನು ಭರತನ ರಾಜ್ಯದಲ್ಲಿ ನಿಂತಿರುವ ಹಂಗಿಗೆ ಒಳಗಾದೆನಲ್ಲ ! " ಎಂಬ ಭಾವನೆ ಮನದಲ್ಲಿ ಉಳಿದುದೇ ಅದಕ್ಕೆ ಕಾರಣವಾಗಿದ್ದಿತು. ಅದನ್ನರಿತು ಅಣ್ಣ ಭರತ ಆತನಲ್ಲಿಗೆ ಬಂದು, ಕಾಲಿಗೆರಗಿ, ಪೂಜಿಸಿ, ನಿವೇದಿಸಿದ :

" ಈ ನೆಲ ನಿನ್ನದೆ. ನೀನು ಕೊಟ್ಟದ್ದರಿಂದ ಮಾತ್ರವೆ ಇದು ನನಗೆ ಬಂತು. ಆದ್ದರಿಂದ ಬೇರೆ ಏನನ್ನೂ ನೆನೆಯದೆ ಆತ್ಮಧ್ಯಾನದಲ್ಲಿ ಮನಸ್ಸನ್ನು ಇಡು."

ಅಣ್ಣನ ಬೇಡಿಕೆಯನ್ನು ಕೇಳಿ ಬಾಹುಬಲಿಯ ಮನಸ್ಸು ತಿಳಿಯಾಯಿತು. ಮುಂದೆ ಅಲ್ಪಕಾಲದಲ್ಲಿಯೇ ಆತನಿಗೆ ' ಕೇವಲಜ್ಞಾನ 'ವೂ ಪ್ರಾಪ್ತವಾಯಿತು.

ಹೀಗೆ ಬಾಹುಬಲಿ ' ಕೇವಲಜ್ಞಾನಿ' ಯಾಗಿ ಜೈನಧರ್ಮದ ಮಹಾಮಹಿಮ ನೆನಿಸಿದ. ಆತನ ಬೃಹದಾಕಾರದ ವಿಗ್ರಹಗಳು ನಮ್ಮ ರಾಜ್ಯದ ಶ್ರವಣಬೆಳಗೊಳ, ಕಾರ್ಕಳ, ವೇಣೂರು ಹಾಗೂ ಶ್ರವಣಗಿರಿಗಳಲ್ಲಿವೆ. ಇತ್ತೀಚೆಗೆ ಧರ್ಮಸ್ಥಳದಲ್ಲೂ ಅಂಥ ಒಂದು ಮೂರ್ತಿಯ ಪ್ರತಿಷ್ಠಾಪನೆಗೆ ಏರ್ಪಾಟು ಮಾಡಲಾಗಿದೆ.

ಇವುಗಳಲ್ಲೆಲ್ಲ ಹಾಸನ ಜಿಲ್ಲೆಯ ಶ್ರವಣಬೆಳಗೊಳದಲ್ಲಿಯ ಮೂರ್ತಿ ಅತ್ಯಂತ ಭವ್ಯವಾಗಿದೆ. ಇದು ನೆಲದಿಂದ ನಾನೂರೆಪ್ಪತ್ತು ಅಡಿಯಷ್ಟು ಎತ್ತರದ

ಗುಮ್ಮಟದಂಥ ಬಂಡೆಗಲ್ಲೊಂದರ ಮೇಲೆ ನಿಂತಿದೆ. 'ಗೊಮ್ಮಟ' ಎಂದು ಹೆಸರು ಪಡೆದಿದ್ದ ಚಾವುಂಡರಾಯನೆಂಬ ಗಂಗಸೇನಾಪತಿಯು ಈ ವಿಗ್ರಹವನ್ನು ಕೆತ್ತಿಸಿದನು. ಇದರಿಂದಾಗಿಯೇ ಇದು ಗೊಮ್ಮಟ ಅಥವಾ ಗೋಮಟೇಶ್ವರ ಮೂರ್ತಿಯೆಂದು ಪ್ರಖ್ಯಾತವಾಗಿದೆ. ನಗ್ನವಾಗಿ. ನೇರವಾಗಿ ನಿಂತಿರುವ ಈ ಮೂರ್ತಿ ಐವತ್ತೇಳು ಅಡಿ ಎತ್ತರವಾಗಿದೆ. ನೆತ್ತಿಯ ತುಂಬ ಹರಡಿರುವ ಗುಂಗುರುಗೂದಲು. ವಿಶಾಲವಾದ ಮುಖ. ದಯಾಪೂರ್ಣ ಮೆಲುನಗೆ. ಪ್ರಶಾಂತ ಮುಖಭಾವ—ಇವುಗಳ ಕೆತ್ತನೆಯಿಂದಾಗಿ ಈ ಮೂರ್ತಿ ಅತ್ಯಂತ ಸುಂದರವಾಗಿದೆ : ಸುಮನೋಹರವಾಗಿದೆ : ಜಗತ್ಪ್ರಸಿದ್ಧವಾಗಿದೆ.

ಅಭ್ಯಾಸ

೧. **ವಿಶೇಷ ಟಿಪ್ಪಣಿ :—**

ಅಖಂಡ ಶಿಲೆಯಲ್ಲಿ ಕೆತ್ತಿದ ಬೃಹದಾಕಾರದ ಮೂರ್ತಿಗಳು ಪ್ರಪಂಚದಲ್ಲಿ ಅಪರೂಪ. ಈಜಿಪ್ಟ್ ದೇಶದಲ್ಲಿರುವ 'ಸ್ಫಿಂಕ್ಸ್' ಎಂಬ ಮೂರ್ತಿ ಭವ್ಯವಾಗಿದೆ. ಅದು ಸ್ತ್ರೀಯ ಮುಖ ಹಾಗೂ ರೆಕ್ಕೆಯುಳ್ಳ ಸಿಂಹದ ದೇಹವುಳ್ಳದ್ದಾಗಿದೆ. ಆದರೆ ಶ್ರವಣಬೆಳಗೊಳದ ಗೊಮ್ಮಟೇಶ್ವರ ಮೂರ್ತಿ ಅದಕ್ಕಿಂತಲೂ ಉನ್ನತವಾಗಿದೆ.

೨. (ಅ) ಕಠಿನ ಪದಗಳ ಅರ್ಥ :—

ತೀರ್ಥಂಕರ = ಜೈನಧರ್ಮದ ಪ್ರವರ್ತಕ, 'ಕೈವಲ್ಯಜ್ಞಾನಿ'ಯಾಗಿ ತತ್ತ್ವಸ್ವರೂಪವನ್ನು ಸಮಸ್ತ ಜೀವಿಗಳಿಗೂ ಉಪದೇಶಿಸಿದವ ; ಅಧಿಪತಿ = ಒಡೆಯ ; ಶಸ್ತ್ರಾಗಾರ = ಶಸ್ತ್ರಗಳನ್ನಿಡುವ ಮನೆ : ಚಕ್ರರತ್ನ = ಚಕ್ರವರ್ತಿಯಾಗುವ ಪುಣ್ಯವಂತ ರಾಜನ ಶಸ್ತ್ರಶಾಲೆಯಲ್ಲಿ ಹುಟ್ಟುವ ಆಯುಧ ವಿಶೇಷ (ಚಕ್ರವರ್ತಿಗೆ ಇಂಥ ೧೪ ರತ್ನಗಳು ಇರುತ್ತವೆ) ; ದಿಗ್ವಿಜಯ = ಎಲ್ಲ ದಿಕ್ಕುಗಳಲ್ಲಿರುವ ದೇಶಗಳನ್ನು ಗೆಲ್ಲುವಿಕೆ, ವಿಶ್ವವಿಜಯ ; ಕಪ್ಪಕಾಣಿಕೆ = ಸಾಮಂತ ರಾಜರು ಚಕ್ರವರ್ತಿಗಳಿಗೆ ಕೊಡುವ ತೆರಿಗೆ : ದ್ವಾರ = ಬಾಗಿಲು ; ಅಜೇಯ = ಜಯಿಸಲಾಗದ, ಯಾರಿಗೂ ಸೋಲದ: ಸಾರ್ವಭೌಮತ್ವ = ಚಕ್ರವರ್ತಿತ್ವ, ರಾಜಾಧಿರಾಜತ್ವ, ಸರ್ವಭೂಮಿಯ ಒಡೆತನ ಪಡೆದವ : ಆದೇಶ = ಅಪ್ಪಣೆ ; ಅಪ್ರತಿಭನಾಗು = ಮುಂಗಾಣದಂತಾಗು ; ಸನ್ನದ್ಧ = ಸಿದ್ಧ ; ದ್ವಂದ್ವಯುದ್ಧ = ಇಬ್ಬರಲ್ಲಿಯೇ ನಡೆಯುವ ಯುದ್ಧ ; ಸೂಕ್ತ = ಯೋಗ್ಯ : ದೃಷ್ಟಿಯುದ್ಧ = ರೆಪ್ಪೆಬಡಿಯದೆಯೇ ನಟ್ಟ ನೋಟದಿಂದ ನೋಡುವುದು (ಯಾರು ಮೊದಲು ರೆಪ್ಪೆಬಡಿಯುವರೋ ಅವರೇ ಸೋತಂತೆ) : ಜಲಯುದ್ಧ = ಎದೆಯಷ್ಟು ಆಳದ ನೀರಿನಲ್ಲಿ ನಿಂತು ಒಬ್ಬೊಬ್ಬರಿಗೆ ಅಂಗೈಯಿಂದ ನೀರೆರೆಚುವುದು (ಅದರಲ್ಲಿ ಮುಖ ತಿರಗಿಸಿದವರು ಸೋತಂತೆ) : ಮಲ್ಲಯುದ್ಧ = ಬಾಹುಯುದ್ಧ ; ಜಟ್ಟೀಕಾಳಗ, ಕುಸ್ತಿ ; ಘಾತಿಸು = ಹೊಡೆ, ಹಾನಿಮಾಡು ; ಎಸಗು = ಮಾಡು : ಸಲ್ಲದ = ತಕ್ಕುದಲ್ಲದ. ಅಯೋಗ್ಯ ; ನಡವಳಿಕೆ = ನಡತೆ; ಪಶ್ಚಾತ್ತಾಪ = ಮಾಡಿದ ತಪ್ಪಿಗೆ ದುಃಖ ಪಡುವುದು : ವೈರಾಗ್ಯ = ಸಂಸಾರ ಸುಖದಲ್ಲಿ ಪ್ರೀತಿಯಿಲ್ಲದಿರುವಿಕೆ. [illegible] ನಿವೃತ್ತಿ : ತಳ್ಕೆ = ಆಲಿಂಗನ, ಅಪ್ಪುಗೆ : ಕೇವಲಜ್ಞಾನ = ದೇವರ ವಿಷಯವಾದ [illegible]ಜ್ಞಾನ ; ನಿವೇದಿಸು = ತಿಳಿಸು ; ಬೃಹದಾಕಾರ = ದೊಡ್ಡ ಆಕಾರ : ಪ್ರತಿಷ್ಠಾಪನೆ = ಸ್ಥಾಪನೆ, ನೆಲೆಗೊಳಿಸುವಿಕೆ.

(ಆ) ನುಡಿಗಟ್ಟು :—

ಬಗ್ಗುಬಡಿ—ಮೇಲೇಳದಂತೆ ಕೆಡಹು, ಸೋಲಿಸು.

೩. ವ್ಯಾಕರಣ ವಿಶೇಷ :—

(ಅ) ಕೆಳಗಿನ ವಾಕ್ಯಗಳಲ್ಲಿಯ ಕರ್ತೃ, ಕರ್ಮ, ಕ್ರಿಯಾಪದಗಳನ್ನು ಗುರುತಿಸಿ : —

(i) ಚಾವುಂಡರಾಯನೆಂಬ ಗಂಗಸೇನಾಪತಿಯು ಈ ವಿಗ್ರಹವನ್ನು ಕೆತ್ತಿಸಿದನು.

(ii) ಅವಿವೇಕಿ ಅಸಾಮಾನ್ಯ ಚಕ್ರರತ್ನವನ್ನು ತಮ್ಮನ ಮೇಲೆ ಬಿಟ್ಟನು.

(ಆ) ಸಂಧಿಬಿಡಿಸಿ, ಹೆಸರು ಹೇಳಿ :— ಶಸ್ತ್ರಾಗಾರ, ಭರತೇಶ್ವರ, ಪಟ್ಟಾಭಿಷೇಕ(?) ಸೂರ್ಯೋದಯ, ಬೃಹದಾಕಾರ.

೪. ಪ್ರಶ್ನೆಗಳು :—

(ಅ) ಭರತ ಯಾರು ? ಆತ ದಿಗ್ವಿಜಯಕ್ಕೆ ಹೋದುದೇಕೆ ?

(ಆ) ಚಕ್ರರತ್ನ ಪುರಪ್ರವೇಶ ಮಾಡದಿರಲು ಕಾರಣವೇನು ?

(ಇ) ಬಾಹುಬಲಿ ಅಣ್ಣನ ಆದೇಶವನ್ನು ಏಕೆ ಪ್ರತಿಭಟಿಸಿದ ?

(ಈ) ಅಣ್ಣತಮ್ಮಂದಿರಲ್ಲಿ ಯುದ್ಧ ನಡೆದ ಬಗೆ ಯಾವುದು ? ಪರಿಣಾಮವೇನಾಯಿತು ?

(ಉ) ಬಾಹುಬಲಿ ತಪಸ್ಸಿಗೆ ಹೊರಟುಹೋದುದು ಏಕೆ ?

(ಊ) ಬಾಹುಬಲಿ ತಪಸ್ಸು ಮಾಡಿದ ಬಗೆ ಯಾವುದು ? ಆತನಿಗೆ 'ಕೇವಲಜ್ಞಾನ' ಯಾವಾಗ ಪ್ರಾಪ್ತವಾಯಿತು ?

(ಎ) ನಮ್ಮ ರಾಜ್ಯದಲ್ಲಿ ಬಾಹುಬಲಿಯ ವಿಗ್ರಹಗಳು ಎಲ್ಲೆಲ್ಲಿ ಇವೆ ?

(ಏ) ಶ್ರವಣಬೆಳಗೊಳದ ಗೊಮ್ಮಟಮೂರ್ತಿಯ ವಿಶೇಷವೇನು ?

(ಐ) ಕನ್ನಡನಾಡಿನ ಮೂರ್ತಿಶಿಲ್ಪವನ್ನು ಕುರಿತು ವಿವರಗಳನ್ನು ಸಂಗ್ರಹಿಸಿರಿ. (ಉದಾ. : ಹಂಪೆಯ ಉಗ್ರನರಸಿಂಹ, ಕಡಲೆಕಾಳು ಗಣಪತಿ ವಿಗ್ರಹಗಳು ; ಬೇಲೂರಿನ ಶಿಲಾಬಾಲಿಕೆಯರ ವಿಗ್ರಹಗಳು, ಇತ್ಯಾದಿ).

---

೧೬. ಬಂಡಿಹಬ್ಬ

ನಮ್ಮ ರಾಜ್ಯದ ಉತ್ತರ ಕನ್ನಡಜಿಲ್ಲೆ, ಕಾರವಾರಜಿಲ್ಲೆ ಎಂದೂ ಹೆಸರಾಗಿದೆ. 'ಬಂಡಿಹಬ್ಬ' ಇಲ್ಲಿಯ ವಿಶೇಷ ಉತ್ಸವವಾಗಿದೆ. ಇದನ್ನು ಸಾಮಾನ್ಯವಾಗಿ ಅಮ್ಮನವರ ದೇವಾಲಯಗಳಲ್ಲಿ ಜರುಗಿಸಲಾಗುತ್ತದೆ. ಅಮ್ಮನವರೆಂದರೆ ರಾಕ್ಷಸರನ್ನು ಸಂಹಾರ ಮಾಡಿದ ಶಕ್ತಿದೇವತೆ.

ಹಿಂದೆ ಈ ಉತ್ಸವದ ಅಂಗವಾಗಿ ದೇವರ ಮೂರ್ತಿಯನ್ನು ನಾಲ್ಕು ಗಾಲಿಯ ಬಂಡಿಯಲ್ಲಿಟ್ಟು ಬಂಡಿ ಎಳೆಯುತ್ತಿದ್ದರು. ಆದರೆ ಇಂದು ಸಾಮಾನ್ಯವಾಗಿ ಬಂಡಿಹಬ್ಬದಲ್ಲಿ ಬಂಡಿಯನ್ನೇ ಉಪಯೋಗಿಸುವುದಿಲ್ಲ. ಇಂಥ ಬಂಡಿಗಳೇ

ಕಾಲಕ್ರಮದಲ್ಲಿ ಹೆಚ್ಚು ಸುಂದರವಾಗಿ ಅಲಂಕೃತವಾದತೇರುಗಳಾಗಿ ಮಾರ್ಪಟ್ಟಿರಬೇಕೆಂದು ವಿದ್ವಾಂಸರು ಊಹಿಸುತ್ತಾರೆ. 'ಹೆಗಡೆ' ಎಂಬ ಊರಿನಲ್ಲಿ ಅಮ್ಮನವರ ದೇವಾಲಯದ ಉತ್ಸವದಲ್ಲಿ ಈಗ ತೇರೆಳೆಯುವ ಜಾತ್ರೆಯಾಗುತ್ತಿದ್ದಯಾದರೂ, ಮುಂಚೆ ಅಲ್ಲಿ ಬಂಡಿಹಬ್ಬದಂಥ ಉತ್ಸವವನ್ನೆ ಆಚರಿಸುತ್ತಿದ್ದರೆಂದು ಬಲ್ಲವರು ಹೇಳುತ್ತಾರೆ.

ಅಂಕೋಲೆಯಲ್ಲಿ ಜರುಗುವ ಬಂಡಿಹಬ್ಬ ಅತ್ಯಂತ ಮಹತ್ವದ್ದಾಗಿದೆ. ಇಲ್ಲಿಯ ನಾಡವರು, ನಾಮಧಾರಿಗಳು, ಆಗೇರರು ಮುಂತಾದ ಸ್ಥಳೀಯ ಜನರುಗಳಿಗೆಲ್ಲ ಇದು ಬಹು ದೊಡ್ಡ ಹಬ್ಬವಾಗಿದೆ. ಇವರೆಲ್ಲರಿಗೆ ಒಕ್ಕಲುತನವೇ ಮುಖ್ಯ ವೃತ್ತಿಯಾಗಿದೆ. ಆದರಿಂದಾಗಿ ಅದರ ಪ್ರಭಾವ ಬಂಡಿಹಬ್ಬದ ಮೇಲೂ ಬಿದ್ದಿದೆ.

ಸಾಗುವಳಿಯ ಹಂಗಾಮಿಗಿಂತ ತುಸು ಮುಂಚೆ, ಅಂದರೆ ಮೇ ತಿಂಗಳಲ್ಲಿ ಈ ಹಬ್ಬ ಜರುಗುತ್ತದೆ. ಇದನ್ನು ಸಾಮಾನ್ಯವಾಗಿ ಹನ್ನೆರಡು ದಿನಗಳವರೆಗೆ ಭಯ ಭಕ್ತಿಯಿಂದ ಆಚರಿಸಲಾಗುತ್ತದೆ.

'ಕಲಶ' ಎಂಬುವುದು ಈ ಬಂಡಿಹಬ್ಬದ ವಿಶೇಷ ಅಂಗವಾಗಿದೆ. ಈ ಕಲಶದ ವಿನ್ಯಾಸ ಅತ್ಯಂತ ಆಕರ್ಷಕವಾಗಿದೆ. ಅಮ್ಮನವರ ಉತ್ಸವ ಮೂರ್ತಿಯನ್ನು ಬೆಳ್ಳಿಯಿಂದ ಕಿರೀಟಸಹಿತವಾಗಿ ರಚಿಸಿ, ಅದನ್ನು ಕಲಶದ ಮೇಲೆಯೇ



ಹೊಂದಿಸಲಾಗುತ್ತದೆ. ಈ ಕಲಶ ಬೆಳ್ಳಿ, ತಾಮ್ರ, ಹಿತ್ತಾಳೆ ಅಥವಾ ಕಂಚಿನದಾಗಿದ್ದು, ಗಿಂಡಿಯ ಆಕಾರದ್ದಿರುತ್ತದೆ. ಇದಕ್ಕೆ ಹಿನ್ನೆಲೆಯಾಗಿ ಅರ್ಧವರ್ತುಲಾಕಾರದಲ್ಲಿ ಬಿದಿರು ಕಡ್ಡಿಗಳ ಕಮಾನು ಕಟ್ಟಲಾಗುತ್ತದೆ. ಗಿಂಡಿಯ ಕೇಂದ್ರಬಿಂದುವಿನಿಂದ ಉದಯ ಸೂರ್ಯನ ಕಿರಣಗಳಂತೆ ಹೊರಟ ನೇರ ಕಂಬಿಗಳನ್ನು ಕಮಾನಿನ ಕಂಬಿಗೆ ಜೋಡಿಸಲಾಗುತ್ತದೆ. ಲಂಬಾಕಾರದ ಮಧ್ಯದ ಕಂಬಿಯ ತುತ್ತತುದಿಯಲ್ಲಿ ಬೆಳ್ಳಿ ಇಲ್ಲವೆ ಬಂಗಾರದ ಬಾವುಟ ಮತ್ತು ಎಲೆಗಳನ್ನು ಒಂದಾದ ಮೇಲೊಂದರಂತೆ ಸಿಂಗರಿಸಲಾಗುತ್ತದೆ. ಈ ಕಮಾನಿನ ಪರಿಧಿಗೆ ಸಮಾನಾಂತರವಾಗಿ ಒಳಗಡೆಗೆಲ್ಲ ಸಂಪಿಗೆ, ಅಬ್ಬಲಿಗೆ ಮೊದಲಾದ ಬಗೆಬಗೆಯ ಹೂಗಳ ಮಾಲೆಗಳನ್ನು ಹೆಣೆಯಲಾಗುತ್ತದೆ. ಹಿನ್ನೆಲೆಯ ಈ ಅಲಂಕರಣ 'ಕಲಶಕ್ಕೆ' ಪ್ರಭಾವಳಿಯ ಮೆರುಗನ್ನು ತಂದು ಕೊಡುತ್ತದೆ.

ಪ್ರತಿದಿನ ಸಂಜೆ ಈ ಅಲಂಕೃತ ಕಲಶದ ಮೆರವಣಿಗೆ. ಕಲಶ ದೇವಸ್ಥಾನದಿಂದ ಹೊರಡುತ್ತದೆ. ಗುನಗನು ಅದನ್ನು ತಲೆಯ ಮೇಲೆ ಹೊತ್ತುಕೊಳ್ಳುತ್ತಾನೆ. ಮುಂದೆ ಮೆರವಣಿಗೆಯಲ್ಲಿ ಆತ ದೇವತೆಯ ದೇವಸ್ಥಾನಕ್ಕೆ ಹೋಗಿ, 'ಹಗರಣ'ದ ಕಟ್ಟೆಯಲ್ಲಿ ಕಲಶವನ್ನಿಳಿಸುವನು. ಅಷ್ಟರಲ್ಲಿ ರಾತ್ರಿಯಾಗಿರುತ್ತದೆ. ಅಲ್ಲಿ ಹಗರಣ, ಪೂಜಾ ವಿಧಿ-ವಿಧಾನಗಳೆಲ್ಲ ನಡೆಯುವವು. ಅವು ಮುಗಿದ ಮೇಲೆ ಪುನಃ ಆತ ಕಲಶವನ್ನು 'ಕಲಶದ ಮನೆ'ಗೆ ಮೆರವಣಿಗೆಯಲ್ಲಿ ಹೊತ್ತು ತರುತ್ತಾನೆ.

ಹಬ್ಬದ ಈ ಅವಧಿಯಲ್ಲಿ ಅನೇಕ ವಿಧಿ-ವಿಧಾನಗಳ ಒಂದು ಕಾರ್ಯಕ್ರಮವನ್ನೇ ಹಮ್ಮಿಕೊಳ್ಳಲಾಗುವದು. ಇದು ಸಮಾಜದ ಜನಗಳಿಗೆ, ವಿಶೇಷವಾಗಿ ಒಕ್ಕಲಿಗರಿಗೆ ಮನರಂಜನೆಯ ಜತೆಗೆ ಮಾರ್ಗದರ್ಶನವನ್ನೂ ನೀಡುವುದು, ಪ್ರತಿದಿನ ರಾತ್ರಿ ಕಲಶದ ಸಮ್ಮುಖದಲ್ಲೆ ಈ ಕಾರ್ಯಕ್ರಮವೆಲ್ಲ ಜರುಗುವುದು, ಇದೇ ಹಗರಣ. ಈ ಹಗರಣ ನಡೆಯುವ ಕಟ್ಟೆಯೇ ಹಗರಣದ ಕಟ್ಟೆ.

ಸುಮಾರು ಮೊದಲ ಆರೆಂಟು ರಾತ್ರಿಗಳಲ್ಲಿ ಗದ್ದೆಯಲ್ಲಿ ನೇಗಿಲು ಹೂಡುವ ರೀತಿ, ಬೀಜ ಬಿತ್ತುವ ಕ್ರಮ, ಹಕ್ಕಿ ಕಾಯುವ ಬಗೆ, ಬೆಳೆ ಕೊಯ್ಯುವ ವಿಧಾನ, ವಿವಾಹಿತರು ಮನೆವಾಳ್ತೆ ಸಾಗಿಸಿಕೊಂಡು ಹೋಗುವ ಪದ್ಧತಿ—ಇವೇ ಮೊದಲಾದುವನ್ನು ಅನುಕ್ರಮವಾಗಿ ಪ್ರದರ್ಶಿಸಲಾಗುವುದು. ಕೊನೆಯಲ್ಲಿ ಸಮಾಜದ ಪ್ರತಿಯೊಬ್ಬರೂ ತನ್ನ ಹಾಗೂ ನಾಡಿನ ರಕ್ಷಣೆಗೆ ಸಿದ್ಧವಾಗಿರಲು ಸಹಾಯಕವಾದ ಗ್ರಾಮರಕ್ಷಕರ ತರಬೇತಿ ಕಾರ್ಯಕ್ರಮವನ್ನು ನಡೆಸಲಾಗುವುದು. ತಂಡದ ಪ್ರತಿಯೊಬ್ಬನ ಕೈಯಲ್ಲಿ ಸುಮಾರು ಗಜದಷ್ಟು ಉದ್ದದ ಸೀಸದ ಕಟ್ಟಿಗೆಯ

ಕೋಲು ಇದ್ದಿರುತ್ತದೆ : ಇದಕ್ಕೆ ಅಲ್ಲಲ್ಲಿ ಬೆಳ್ಳಿಯ ಕಟ್ಟುಗಳಿರುತ್ತವೆ. ಇದರಿಂದಾಗಿಯೇ ಇವರನ್ನು 'ಕಟಗೀದಾರ'ರೆಂದು ಕರೆಯಲಾಗುತ್ತದೆ.

ಅನಂತರದ ಒಂದೆರಡು ರಾತ್ರಿ ಪ್ರಧಾನ ದೇವತೆಯು ಬಳಗಕ್ಕೆ ಸೇರಿದ ಇತರ ದೇವತೆಗಳನ್ನು ಬಂಡಿಹಬ್ಬಕ್ಕೆ ಆಮಂತ್ರಿಸುವ ವಿಧಿ ನಡೆಯುವುದು. ಇದಕ್ಕೆ 'ದೇವರನ್ನು ಕರೆಯುವುದು' 'ಮಾಸ್ತಿ ಕರೆಯುವುದು' ಎಂದು ಹೆಸರು. ಹನ್ನೊಂದನೆಯ ರಾತ್ರಿ 'ಜಾಗರಣೆಯ ರಾತ್ರಿ'. ಅಂದು ರಾತ್ರಿಯಿಡೀ ಹಗರಣ ಮತ್ತು ಪೂಜಾ ವಿಧಿ-ವಿಧಾನ ನಡೆಯುವುವು. ಹನ್ನೆರಡನೆಯ ದಿನ ಈ ಉತ್ಸವದ ಅಂತಿಮ ಘಟ್ಟದ ಆಚರಣೆ. ಅಂದು ಸಾವಿರಗಟ್ಟಲೆಯ ಜನ ದೂರದೂರಿಂದ ಬಂದು ಸೇರುವರು.

ಕೆಲವೆಡೆ 'ಕೆಂಡ ಹಾಯುವದು' ಈ ಬಂಡಿಹಬ್ಬದ ಒಂದು ವಿಶೇಷಾಂಗ ವಾಗಿದೆ. ಒಂದು ಅಂಕಣದಷ್ಟು ಜಾಗದಲ್ಲಿ ನಿಗಿನಿಗಿ ಕೆಂಡ ಹರಡಲಾಗುವುದು. ಒಬ್ಬೊಬ್ಬರೂ ತೆಂಗಿನ ಮಡಲುಗಳಿಂದ ಗಾಳಿ ಬೀಸಿ ಊದಿ ಹಾರಿಸುವರು; ಕೆಂಡ ಧಗಧಗಿಸುವಂತೆ ಮಾಡುವರು. ದೇವರ ಪೂಜಾರಿಗಳು ಪಲ್ಲಕ್ಕಿ ಹೊತ್ತುಕೊಂಡು ಕೆಂಡ ಹಾಯುವರು. ಇತರರೂ ಆಗ ಅವರಂತೆಯೇ ಕೆಂಡದ ಮೇಲೆ ನಡೆಯುವರು.

ಈ ಬಂಡಿಹಬ್ಬವಾದ ಮಾರನೆಯ ದಿನ ಇನ್ನೊಂದು ಹಬ್ಬವನ್ನು ಆಚರಿಸ ಲಾಗುವುದು. ಇದಕ್ಕೆ 'ಕಿರಿ ಬಂಡಿಹಬ್ಬ' ವನ್ನುವರು. ಅಂದು ದೇವಾಲಯದ ಗಡಿಯಲ್ಲಿರುವ ಬೀರ ದೇವರಿಗೆ ಅಂದರೆ ವೀರಗಲ್ಲುಗಳಿಗೆ ಕುರಿ-ಕೋಳಿಗಳನ್ನು ಬಲಿ ಕೊಡಲಾಗುವುದು. ಇದರಿಂದಾಗಿ ಈ ಹಬ್ಬಕ್ಕೆ "ಕೋಳಿ-ಕುರಿ" ಎಂದೂ ಹೆಸರಾಗಿದೆ. ಈ 'ಬಲಿ' ಕೊಡುವ ವಿಧಿ ಅರ್ಥಪೂರ್ಣವಾಗಿದೆ. ದೇವಾಲಯದ ಆಸ್ತಿಯ ರಕ್ಷಣೆಗಾಗಿ ಪ್ರಾಣತೆತ್ತವರಿಗೆ ಗೌರವ ಸಲ್ಲಿಸುವ ಪರಂಪರೆಯೇ ಇದಾಗಿದೆ.

ಒಟ್ಟಿನಲ್ಲಿ ಈ ಬಂಡಿಹಬ್ಬ ಉತ್ತರ ಕನ್ನಡ ಜಿಲ್ಲೆಯ ಒಂದು ವಿಶಿಷ್ಟ ಹಬ್ಬ ವಾಗಿದೆ. ಇದು ಜನಮನದಲ್ಲಿ ದೈವಭಕ್ತಿಯನ್ನು ಕುದುರಿಸುತ್ತದೆ : ಸಮಾಜದ ಹಿತಚಿಂತನೆಯನ್ನು ಬಿಂಬಿಸುತ್ತದೆ. ವೀರರನ್ನು ಗೌರವಿಸುವ ಸ್ತುತ್ಯ ಪರಂಪರೆಗೆ ಪ್ರೇರಣೆಯನ್ನು ಒದಗಿಸುತ್ತದೆ. ಈ ದೃಷ್ಟಿಯಿಂದ ಇದನ್ನು 'ಉತ್ತರ ಕನ್ನಡದ ನಾಡಹಬ್ಬ' ವೆಂದು ಕರೆಯಬಹುದು.

ಅಭ್ಯಾಸ

೧. (ಅ) ಕಠಿನ ಪದಗಳ ಅರ್ಥ :—

ವಿದ್ವಾಂಸ = ಪಂಡಿತ : ಜನಪದ = ಸಾಮಾನ್ಯ ಜನ ; ವೃತ್ತಿ = ಉದ್ಯೋಗ ; ವಿನ್ಯಾಸ = ರಚನೆ, ತಯಾರಿಸುವಿಕೆ : ಆಕರ್ಷಕ = ಮನಸೆಳೆಯುವ ; ಕಂಚು = ತಾಮ್ರ ಮತ್ತು ತವರಗಳನ್ನು ಕೂಡಿಸಿ ಮಾಡಿದ ಲೋಹ : ಪರಿಧಿ = ವರ್ತುಳದ ಸುತ್ತಳತೆ ; ಅಲಂಕರಣ = ಸಿಂಗಾರ : ಪ್ರಭಾವಳಿ = ದೇವ ಮೂರ್ತಿಗಳ ಹಿಂದೆ ಕಮಾನಿನಂತೆ ನಿಲ್ಲಿಸುವ ಅಲಂಕಾರ, ತೇಜೋವಲಯ, ಬೆಳಕಿನ ವರ್ತುಳ ; ಗುನಗ = (ಸ್ಥಳಿಕ) ಪೂಜಾರಿ ; ಹಮ್ಮಿಕೊಳ್ಳು = ಯೋಚಿಸು ; ಸಮ್ಮುಖ = ಮುಖದ ಎದುರು, ಕಣ್ಣೆದುರು ; ಮನೆವಾಳ್ತೆ = ಸಂಸಾರ, ಮನೆಯ ಬದುಕು ; ಪ್ರದರ್ಶಿಸು = ತೋರಿಸು, ಕಾಣುವಂತೆ ಮಾಡು ; ಮಡಲು = ತೆಂಗಿನ ಗರಿ ; ವೀರಗಲ್ಲು = ಆತ್ಮ ಬಲಿದಾನ ಮಾಡಿದ ವೀರಪುರುಷರ ನೆನಪಿಗಾಗಿ ನಿಲ್ಲಿಸಿದ ಕಲ್ಲು ; ಕುದುರಿಸು = ಹುಟ್ಟಿಸು, ಮೂಡಿಸು ; ಬಿಂಬಿಸು = ಮನವರಿಕೆ ಮಾಡಿಕೊಡು : ಸ್ತುತ್ಯ = ಹೊಗಳಲು ಯೋಗ್ಯವಾದ : ನಾಮಧಾರಿಗಳು, ನಾಡವರು, ಅಗೇರರು ಮುಂತಾದವರು ನಮ್ಮ ನಾಡಿನ ಆ ಭಾಗದಲ್ಲಿರುವ ಬೇರೆ ಬೇರೆ ಗುಂಪಿನ ಜನರು.

(ಆ) ನುಡಿಗಟ್ಟು :— ಹೆಸರಾಗು = ಪ್ರಸಿದ್ಧವಾಗು ; ಹೆಸರು (ಕೀರ್ತಿ) ಗಳಿಸು.

೨. ವ್ಯಾಕರಣ ವಿಶೇಷ :—

(ಅ) ಕೆಳಗಿನ ವಾಕ್ಯಗಳಲ್ಲಿಯ ನಾಮಪದಗಳನ್ನು ಗುರುತಿಸಿ :—

(i) ಇಂಥ ಬಂಡಿಗಳೇ ಕಾಲಕ್ರಮದಲ್ಲಿ ಹೆಚ್ಚು ಸುಂದರವಾಗಿ ಅಲಂಕೃತವಾದ ತೇರುಗಳಾಗಿ ಮಾರ್ಪಟ್ಟಿರಬೇಕೆಂದು ವಿದ್ವಾಂಸರು ಊಹಿಸುತ್ತಾರೆ.

(ii) ಅಂಕೋಲೆಯಲ್ಲಿ ಜರುಗುವ ಬಂಡಿಹಬ್ಬ ಅತ್ಯಂತ ಮಹತ್ವದ್ದಾಗಿದೆ.

(iii) ಲಂಬಾಕಾರದ ಮಧ್ಯದ ಕಂಬಿಯ ತುತ್ತತುದಿಯಲ್ಲಿ ಬೆಳ್ಳಿ ಇಲ್ಲವೆ ಬಂಗಾರದ ಪ್ರಟ್ಟ ಕೊಡೆಯನ್ನು ಅಲಂಕರಿಸಲಾಗುತ್ತದೆ.

(ಆ) ಸಂಧಿಗಳನ್ನು ಬಿಡಿಸಿ ಗುರುತಿಸಿರಿ :—ವರ್ತುಲಾಕಾರ, ಲಂಬಾಕಾರ, ವಿಶೇಷಾಂಗ.

೩. ಪ್ರಶ್ನೆಗಳು :—

(ಅ) ಬಂಡಿಹಬ್ಬವನ್ನು ಎಲ್ಲಿ ಜರುಗಿಸುವರು ? ಅದಕ್ಕೆ ಆ ಹೆಸರು ಹೇಗೆ ಬಂದಿತು?

(ಆ) 'ಕಲಶ'ದ ಸ್ವರೂಪವನ್ನು ವರ್ಣಿಸಿರಿ.

(ಇ) 'ಹಗರಣ'ವೆಂದರೆ ಏನು ?

(ಈ) 'ಕಿರಿಬಂಡಿಹಬ್ಬ'ವನ್ನು ಹೇಗೆ ಆಚರಿಸುವರು ? ಏಕೆ ?

(ಉ) 'ಬಂಡಿಹಬ್ಬ'ವನ್ನು 'ಉತ್ತರ ಕನ್ನಡದ ನಾಡಹಬ್ಬ' ಎಂದು ಏಕೆ ಕರೆಯಬಹುದಾಗಿದೆ ?

(ಊ) ನಿಮ್ಮ ಜಿಲ್ಲೆಯ ಅಥವಾ ಪ್ರದೇಶದ ಒಂದು ವಿಶೇಷ ಹಬ್ಬದ ವಿವರಗಳನ್ನು ಸಂಗ್ರಹಿಸಿ. ಆ ಬಗ್ಗೆ ಒಂದು ಲೇಖನ ಬರೆಯಿರಿ.

೧೭. ಕಾಳೀ ನದೀ ಯೋಜನೆ

ಕಾಳೀ ನದಿ ಉತ್ತರ ಕನ್ನಡ ಜಿಲ್ಲೆಯ ಪಶ್ಚಿಮ ಘಟ್ಟಗಳಲ್ಲಿ ಮೂರು ಸಾವಿರ ಅಡಿ ಎತ್ತರದಲ್ಲಿ ಹುಟ್ಟುತ್ತದೆ. ಘಟ್ಟದ ಇಳಿಜಾರಿನಲ್ಲಿ ಹರಿದು, ಧುಮುಕಿ ಕಾರವಾರದ ಹತ್ತಿರ ಇದು ಅರಬ್ಬೀ ಕಡಲನ್ನು ಸೇರುತ್ತದೆ. ಇದು ಹುಟ್ಟಿ ಹರಿಯುವ ಬಹು ಭಾಗ ಪರ್ವತ ಪ್ರದೇಶವಾಗಿದೆ. ಇದರಿಂದಾಗಿ ಇದರ ನೀರು ವ್ಯವಸಾಯಕ್ಕಿಂತ ವಿದ್ಯುದುತ್ಪಾದನೆಗೇ ಹೆಚ್ಚು ಉಪಯುಕ್ತವಾಗಿದೆ. ಈ ದೃಷ್ಟಿ ಯಿಂದಲೆ ಈಗ ಈ ಜಲ ವಿದ್ಯುತ್ ಯೋಜನೆಯನ್ನು ಹಮ್ಮಲಾಗಿದೆ.

ಕಾಳೀ ನದಿ ಯೋಜನೆಯು ಕಾಳೀ ನದಿ ಮತ್ತು ಇದರ ಉಪನದಿಗಳ ನೀರ ನ್ನೆಲ್ಲ ತನ್ನ ಉಪಯೋಗಕ್ಕೆ ಬಳಸಿಕೊಳ್ಳಲಿದೆ. ಇದರ ಅಂಗವಾಗಿ ಒಟ್ಟು ಹತ್ತು ಜಲಾಶಯಗಳು ನಿರ್ಮಾಣಗೊಳ್ಳಲಿವೆ. ಮೊದಲನೆಯ ಹಂತದಲ್ಲಿ ನಾಲ್ಕು ಹಾಗೂ ಎರಡನೆಯ ಹಂತದಲ್ಲಿ ಆರು. ಇವುಗಳಲ್ಲಿ ಸೂಪದ ಬಳಿಯ 'ಜಲಾಶಯ' ಅತೀವ ಮಹತ್ವದ್ದೂ ದೊಡ್ಡದೂ ಆಗಲಿದೆ. ಇದಕ್ಕಾಗಿ ನಿರ್ಮಾಣಗೊಳ್ಳಲಿರುವ ಅಣೆಕಟ್ಟಿನ ಶಂಕುಸ್ಥಾಪನೆಯನ್ನು ನಮ್ಮ ಪ್ರಧಾನಿ ಯಾಗಿದ್ದ ಶ್ರೀಮತಿ ಇಂದಿರಾ ಗಾಂಧಿಯವರು ಈಗಾಗಲೇ ನೆರವೇರಿಸಿದ್ದಾರೆ. ಸಿಮೆಂಟ್ ಕಾಂಕ್ರೀಟಿನ ಈ ಅಣೆಕಟ್ಟು ೩೨೦ ಅಡಿ ಎತ್ತರದ್ದಾಗಲಿದೆ. ಇದರಿಂದಾಗಿ ೬೬,೫೦೦ ಎಕರೆಯಷ್ಟು ನೆಲ ಜಲಮಯವಾಗಲಿದೆ.

ಎರಡೂವರೆ ಮೈಲುದ್ದದ ಎರಡು ಸುರಂಗಮಾರ್ಗಗಳಿಂದ ಮೊದಲ ಹಂತದ ನಾಲ್ಕು ಜಲಾಶಯಗಳನ್ನು ಜೋಡಿಸಲಾಗುವುದು. ಬೊಮ್ಮನ ಹಳ್ಳಿಯ ಬಳಿಯ ಜಲಾಶಯವು 'ಸಮತೋಲನದ ಜಲಾಶಯ'ವಾಗಲಿದೆ ; ಇದು ನೀರಿನ ಮಟ್ಟವನ್ನು ಕಾಪಾಡಲಿಕ್ಕೆ ಪ್ರಯೋಜನಕಾರಿಯಾಗಿದೆ. ಇಲ್ಲಿಂದಲೇ ನೀರು ವಿದ್ಯುದುತ್ಪಾದಕಗಳತ್ತ ಹರಿದು ಹೋಗುವಂತೆ ಮಾಡಲಾಗುವುದು. ಇಲ್ಲಿಯ 'ನೀರು ಸಾಗಾಣಿಕೆ' ಏರ್ಪಾಟೆಲ್ಲವೂ ಭೂಮಿಯ ಒಳಭಾಗದಲ್ಲಿಯೇ ನಿರ್ಮಾಣಗೊಳ್ಳಲಿದೆ.

ಈ ಯೋಜನೆಯ ಎರಡನೆಯ ಹಂತದಲ್ಲಿ ಆರು ಅಣೆಕಟ್ಟು ಹಾಗೂ ಒಂಬತ್ತು ವಿದ್ಯುತ್‌ವಾಹಕ ಜಾಲಗಳು ನಿರ್ಮಾಣಗೊಳ್ಳಲಿವೆ.

ಈ ಬೃಹತ್ ಯೋಜನೆ ನಮ್ಮ ರಾಜ್ಯದ ವಿದ್ಯುದುತ್ಪಾದನೆಯ ವಿಸ್ತರಣ ದಲ್ಲಿ ಮಹತ್ವದ ಪಾತ್ರ ವಹಿಸಲಿದೆ. ಏಕೆಂದರೆ, ರಾಜ್ಯದ ನಾಲ್ಕರಲ್ಲಿ ಒಂದು

ಪಾಲು ವಿದ್ಯುದುತ್ಪಾದನೆ ಇದರಿಂದ ಸಾಧ್ಯವಾಗಬಹುದಾಗಿದೆ. ಇದು ನಮ್ಮ ರಾಜ್ಯಕ್ಕೆ ಮಾತ್ರವಲ್ಲ. ನೆರೆಯ ಗೋವೆ ಮಹಾರಾಷ್ಟ್ರಗಳಿಗೂ ಉಪಯೋಗಕ್ಕೆ ಒದಗುವ ಯೋಜನೆಯಾಗಿದೆ.

ಆರ್ಥಿಕ ಬೆಳವಣಿಗೆಯ ದೃಷ್ಟಿಯಿಂದ ವಿದ್ಯುದುತ್ಪಾದನೆ ಹಾಗೂ ವಿದ್ಯುತ್ತಿನ ಬಳಕೆ ಅತ್ಯಂತ ಮಹತ್ವದ್ದಾಗಿದೆ. ಇದು ಈಗಾಗಲೇ ನಮ್ಮ ರಾಷ್ಟ್ರಜೀವನದ ಪ್ರತಿಯೊಂದು ವಿಭಾಗದಲ್ಲಿಯೂ ಹೆಚ್ಚು ಹೆಚ್ಚು ಉಪಯುಕ್ತವಾಗುತ್ತಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ನಮ್ಮ ದೇಶದಲ್ಲಿ ವಿದ್ಯುತ್ತಿನ ಸರಾಸರಿ ಬಳಕೆ ಕೇವಲ ಹದಿಮೂರು ಯೂನಿಟ್ ಆಗಿತ್ತು. ಇಂದು ಅದು ತೊಂಬತ್ತು ಯೂನಿಟ್ಟಿಗೆ ಏರಿದೆ. ಆದರಲ್ಲೂ ನಮ್ಮ ರಾಜ್ಯದ ಸರಾಸರಿ ನೂರಾ ಒಂದು ಯೂನಿಟ್ ಆಗಿದೆ. ಇಷ್ಟಿದ್ದರೂ ಈ ಪ್ರಗತಿ ಎಷ್ಟಕ್ಕೂ ಸಾಲದು. ಪ್ರಪಂಚದ ಮುಂದುವರಿದ ರಾಷ್ಟ್ರಗಳೊಡನೆ ತುಲನೆ ಮಾಡಿದಲ್ಲಿ. ನಾವಿನ್ನೂ ಈ ದೃಷ್ಟಿಯಿಂದ ಬಹಳ ಹಿಂದುಳಿದಿದ್ದೇವೆ.

ಇಷ್ಟು ಮಾತ್ರ ನಿಜ. ಆಧುನಿಕ ಜಗತ್ತಿನಲ್ಲಿ ವಿದ್ಯುತ್ತಿನ ಉತ್ಪಾದನೆ ಮತ್ತು ಬಳಕೆ ಒಂದು ರಾಷ್ಟ್ರದ ಪುರೋಗಮನದ ಮಾನದಂಡ. ಹೀಗಿರುವಾಗ ಈ ಕಾಳೀ ನದೀ ಯೋಜನೆ ನಮ್ಮ ರಾಷ್ಟ್ರವು ಪ್ರಗತಿಯ ದಿಸೆಯಲ್ಲಿ ಇಟ್ಟ ಒಂದು ದೊಡ್ಡ ಹೆಜ್ಜೆಯಾಗಿದೆ. ಏಕೆಂದರೆ ಇದು ನಮ್ಮ ರಾಷ್ಟ್ರದ ಒಟ್ಟು ಅಭಿವೃದ್ಧಿಗೆ ಸಾಧಕವಾಗಿದೆ.

ಅಭ್ಯಾಸ

೧. ಪರಿಚಯ :—

ನಮ್ಮ ದೇಶದ ಸಂಪತ್ತನ್ನು ಹೆಚ್ಚಿಸಲು ನಮ್ಮ ಸರಕಾರ ನಾಡಿನ ತುಂಬ ವಿವಿಧ ನದಿಗಳಿಗೆ ಸಂಬಂಧಿಸಿದ ಅನೇಕ ಯೋಜನೆಗಳನ್ನು ಹಮ್ಮಿಕೊಂಡಿದೆ. ಇವುಗಳಲ್ಲಿ ಕೆಲವು ಕೃಷಿಯ ಅಭಿವೃದ್ಧಿಗೆ ನೆರವಾಗುವ ನೀರಾವರಿ ಯೋಜನೆಗಳಾಗಿವೆ. ಇನ್ನು ಕೆಲವು ಔದ್ಯಮಿಕ ಪ್ರಗತಿಗೆ ಸಹಾಯಕವಾಗುವ ವಿದ್ಯುದುತ್ಪಾದನಾ ಯೋಜನೆಗಳಾಗಿವೆ. ಇಂಥವುಗಳಲ್ಲಿ ತೀರ ಇತ್ತೀಚಿಗೆ ಹಮ್ಮಲಾದ ಬಹು ದೊಡ್ಡ ಯೋಜನೆ ಕಾಳೀ ನದೀ ಯೋಜನೆ.

೨. ಕಠಿನ ಪದಗಳ ಅರ್ಥ :—

ಯೋಜನೆ = (ಕರ್ತವ್ಯಗಳ) ರೂಪರೇಖೆಗಳ ಸಿದ್ಧತೆ : ಧುಮುಕು = ಹಾರು, ನೆಗೆ, ಜಿಗಿ ; ವ್ಯವಸಾಯ = ಒಕ್ಕಲತನ ; ವಿದ್ಯುದುತ್ಪಾದನೆ = ವಿದ್ಯುತ್ತನ್ನು ಹುಟ್ಟಿಸುವಿಕೆ : ಜಲಾಶಯ = ಕೊಳ, ಸರೋವರ ; ಅಣೆಕಟ್ಟು = ನೀರನ್ನು ಸಂಗ್ರಹಿಸುವದಕ್ಕಾಗಿ ಪ್ರವಾಹಕ್ಕೆ ಹಾಕುವ ದೊಡ್ಡ ಒಡ್ಡು; ಶಂಕುಸ್ಥಾಪನೆ = ಅಡಿಗಲ್ಲು ಹಾಕುವಿಕೆ : ವಿದ್ಯುದುತ್ಪಾದಕ = ವಿದ್ಯುತ್ತನ್ನು ಹುಟ್ಟಿಸುವ ; ಸಮಗ್ರ = ಎಲ್ಲ, ಸರ್ವ : ವ್ಯೂಹ = ವ್ಯವಸ್ಥೆ, ರಚನೆ :

ವಾಹಕ = ಸಾಗಿಸುವಂಥದು : ಜಾಲ = ಬಲೆ. ಸಮೂಹ : ಬೃಹತ್ = ದೊಡ್ಡ : ವಿಸ್ತರಣ = ವಿಸ್ತರಿಸುವಿಕೆ, ಬಡಾವಣೆ ; ಪುರೋಗಮನ = ಪ್ರಗತಿ, ಮುನ್ನಡೆ ; ಮಾನದಂಡ = ಅಳತೆಗೋಲು : ಅಭಿವೃದ್ಧಿ = ಬೆಳವಣಿಗೆ : ಸಾಧಕ = ಸಾಧಿಸಲು ಸಹಾಯಕ.

೩. ವ್ಯಾಕರಣ ವಿಶೇಷ :—

(ಅ) ಕೆಳಗಿನ ನಾಮಪದಗಳು ಯಾವ ಪ್ರಕಾರದವು ಹೇಳಿರಿ :—
ಕಾರವಾರ, ನದಿ, ಇಂದಿರಾ, ಗೋವೆ, ಸ್ವಾತಂತ್ರ್ಯ.

(ಆ) ಸಂಧಿಗಳನ್ನು ಬಿಡಿಸಿ, ಗುರುತಿಸಿರಿ :—
ಮೈಲುದ್ದ, ಸಾಧಕವಾಗು.

೪. ಪ್ರಶ್ನೆಗಳು :—

(ಅ) ಕಾಳೀ ನದೀ ಯೋಜನೆಯನ್ನು ಏಕೆ ಹಮ್ಮಲಾಗಿದೆ ?

(ಆ) ಈ ಯೋಜನೆಯು ಯಾರುಯಾರಿಗೆ ಪ್ರಯೋಜನಕಾರಿಯಾಗಿದೆ ?

(ಇ) ರಾಷ್ಟ್ರದ ಪ್ರಗತಿ ಯಾವುದರ ಮೇಲೆ ಅವಲಂಬಿಸಿದೆ ? ನಾವು ಎಷ್ಟು ಮುಂದುವರಿದಿದ್ದೇವೆ ?

೫. ವಿಶೇಷ ಓದು :—

ನಮ್ಮ ದೇಶದ ಇತರ ನದೀ ಯೋಜನೆಗಳ ವಿವರಗಳನ್ನು ಸಂಗ್ರಹಿಸಿ.
(ಉದಾ. : ಕೃಷ್ಣರಾಜಸಾಗರ, ತುಂಗಭದ್ರಾ, ಲಕ್ಕವಳ್ಳಿ (ಭದ್ರಾ). ಲಿಂಗನಮಕ್ಕಿ, ವಾಣೀವಿಲಾಸಸಾಗರ, ಹಿಡಕಲ್ ಅಣೆಕಟ್ಟು ಇತ್ಯಾದಿ.)

---

೧೮. ಚಿನ್ನದ ಅಡಿಗೆ

" ಸೀಗೆ ಬಾಗೆಯ ಬೇರು ಕಾಗೆ ಮೋರೆಯ ಗಡ್ಡ
ನಾಗರವು ಸತುವಿನೊಡಗೂಡೆ ಹೇಮ ತಾ
ನಾಗಲೇಬೇಕು "

ಎಂದು ಸರ್ವಜ್ಞನು ಹೇಳಿದ್ದಾನೆ. ಹಲವಾರು ತಿನ್ನುವ ಪದಾರ್ಥಗಳನ್ನು ಸೇರಿಸಿ, ಬೇಯಿಸಿ, ರುಚಿಯಾದ ಅಡಿಗೆಯನ್ನು ಮಾಡುವಂತೆ, ಕೆಲವು ಲೋಹ ವಸ್ತುಗಳನ್ನು ಹೊಂದಿಸಿ, ಪುಟಹಾಕಿ ಪರಿಶುದ್ಧ ಚಿನ್ನವನ್ನು ಪಡೆಯಬಹುದೆಂದು ಈಗಲೂ ಕೆಲವರು ನಂಬಿದ್ದಾರೆ. ನಮ್ಮ ದೇಶದಲ್ಲಿ ಪಾದರಸದಿಂದ ಚಿನ್ನವನ್ನು ತಯಾರಿಸುವವರು ಇದ್ದಾರೆಂದು ನಾವು ಕೇಳಿದ್ದೇವೆ. ಆದರೆ ಅವರ ವಿಧಾನವು ಮಾತ್ರ ನಮಗಾರಿಗೂ ತಿಳಿಯದು, ಅದು ರಹಸ್ಯವಾಗಿ, ಗೂಢವಾಗಿರುತ್ತದೆ.

ಕೀಳುದರ್ಜೆಯ ಲೋಹಗಳನ್ನು ಅನೇಕ ವಿಧಾನಗಳ ಮೂಲಕ ಪರಿಶೋಧಿಸಿ ಭವ್ಯವಾದ ಬಂಗಾರವನ್ನು ಪಡೆಯುವುದೇ ರಸವಿದ್ಯೆ ಅಥವಾ ರಸತಂತ್ರ. ರಸತಂತ್ರಜ್ಞನು ಪಾದರಸದಿಂದ ಚಿನ್ನವನ್ನು ಮಾಡಬಲ್ಲ ಮಹಾ ಪುರುಷನೆಂದೂ, ಸಿದ್ಧಯೋಗಿ ಎಂದೂ ಅನೇಕ ಕತೆಗಳು ಬೆಳೆದಿವೆ. ಈಗಲೂ ಅಂತಹವರನ್ನು ಜನರು ಆದರಿಸುತ್ತಾರೆ. ಆದರೆ ರಸತಂತ್ರಜ್ಞನದು ಕೇವಲ ಕಪಟ ವ್ಯವಹಾರವೆಂದು ನಾವು ತಿಳಿಯಬೇಕು. ಅವನ ವಿಧಾನಗಳು ಎಂದೂ ಫಲಕಾರಿಯಾಗುವುದಿಲ್ಲ. ರಸವಿದ್ಯೆ ಚೀನಾದೇಶದಲ್ಲಿ ಮೊತ್ತಮೊದಲು ಹುಟ್ಟಿತೆಂದು ಈಗ ತಿಳಿದುಬಂದಿದೆ. ಅನಂತರ ಈ ವಿದ್ಯೆ ಈಜಿಪ್ಟ್ ದೇಶದ ಅಲೆಕ್ಸಾಂಡ್ರಿಯಾ ಪಟ್ಟಣದಲ್ಲಿ ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಒಂದು ಕುಶಲ ಕಲೆಯಂತೆ ಆರಂಭವಾಯಿತು. ಇಂಡಿಯಾ ದೇಶದಲ್ಲೂ ಈ ವಿದ್ಯೆಗೆ ಸಾಕಷ್ಟು ಪ್ರೋತ್ಸಾಹ ದೊರೆಯಿತು. ಕಾಲಕ್ರಮೇಣ ಈ ತಂತ್ರವು ಒಂದು ರೀತಿಯ ವಿಜ್ಞಾನಶಾಸ್ತ್ರವಾಗಿ ರೂಪುಗೊಂಡು ಯೂರೋಪಿನ ದೇಶಗಳಲ್ಲೆಲ್ಲ ಹರಡಿತು. ರಾಜರ ಆಶ್ರಯದಿಂದಲೂ, ಜನರ ಪ್ರೋತ್ಸಾಹದಿಂದಲೂ ಇದು ಒಂದು ಪಂಥವಾಗಿ ಪರಿಣಮಿಸಿತು. ಸಾಮಾನ್ಯ ಲೋಹಗಳನ್ನು ದೈವಿಕ ಶಕ್ತಿಯುಳ್ಳ ಚಿನ್ನವನ್ನಾಗಿ ಪರಿವರ್ತಿಸಲು ಸಾಧ್ಯವಾದರೆ ಜೀವನವು ಮಿಥ್ಯವಲ್ಲದೆ ಶಾಶ್ವತವಾಗುವುದೆಂದು ಜನರು ನಂಬಿದ್ದರು. ಈ ಮಾರ್ಪಾಡಿನಿಂದ ಲೌಕಿಕ ವ್ಯವಹಾರಗಳು ಅಲೌಕಿಕ ಅದ್ಭುತಗಳಾಗುವುವೆಂದೂ ಅವರು ಭಾವಿಸಿದ್ದರು. ಈ ನಂಬಿಕೆ ಭಾವನೆಗಳೊಂದಿಗೆ ರಸವಿದ್ಯೆ ಹಾಸುಹೊಕ್ಕಾಗಿ ಹೆಣೆದುಕೊಂಡು ಸುಮಾರು ಸಾವಿರದ ಎಂಟನೂರು ವರ್ಷಗಳ ಕಾಲ ಜನರ ಮನಸ್ಸನ್ನು ಸೆಳೆದಿದ್ದಿತು.

ಸೀಸ, ತವರ, ಪಾದರಸ ಮೊದಲಾದ ಲೋಹಗಳು ಚಿನ್ನಕ್ಕೆ ರೋಗ ಬಡಿದು ಉತ್ಪತ್ತಿಯಾಗಿರುವುವೆಂದು ಆಗಿನ ಜನರು ಭಾವಿಸಿದ್ದರು. ಈ 'ರೋಗ' ನಿವಾರಣೆಗೆ ಸರಿಯಾದ "ಔಷಧ"ವನ್ನು ಕಂಡುಹಿಡಿಯಬೇಕೆಂದು ರಸತಂತ್ರಜ್ಞರು ನಿರ್ಧರಿಸಿದರು. ಅದಕ್ಕೆ "ಸ್ಪರ್ಶಮಣಿ" ಎಂದು ನಾಮಕರಣ ಮಾಡಿದರು. ಸಾಮಾನ್ಯ ಲೋಹಗಳ ಮೇಲೆ ಈ ಮಣಿಯನ್ನು ತಿಕ್ಕಿದಲ್ಲಿ, ಇದರ ಪ್ರಭಾವದಿಂದ ಅವು ಸದಾ ಹೊಳೆಯುವ ಚಿನ್ನವಾಗಿ ಪರಿಣಮಿಸಬೇಕೆಂದು ಅವರ ಕಲ್ಪನೆ.

ದೇಹ, ಆತ್ಮ, ಚೇತನ ಈ ಮೂರೂ ಸೇರಿ ಆದ ಮೂರ್ತಿ ಮನುಷ್ಯ. ಹಾಗೆಯೇ ಕೆಲವು ಮೂಲ ವಸ್ತುಗಳು, ಹಲವು ಅಂಶಗಳು ಮತ್ತು ಚೇತನಗಳು ಲೋಹದಲ್ಲಿ ಅಡಕವಾಗಿರಬೇಕೆಂದು ಅಭಿಪ್ರಾಯ. ಎಲ್ಲ ಲೋಹಗಳಲ್ಲೂ

ಚೇತನವಿದೆ. ಆದರೆ ಚಿನ್ನವು ಮಾತ್ರ ಅಪ್ಪಟವಾದ, ಪರಿಶುದ್ಧವಾದ ಚೈತನ್ಯ ಸ್ವರೂಪ ಎಂದು ಅವರ ವಾದಸರಣಿ. ಆದುದರಿಂದ "ಸ್ಪರ್ಶಮಣಿ"ಯ ಸಹಾಯದಿಂದ ಕೀಳು ತರಗತಿಯ ಲೋಹಗಳಿಗೆ ಕಾವು ಕೊಟ್ಟು ಹೆಚ್ಚು ಚೇತನವನ್ನೊದಗಿಸಿ, ಅವುಗಳ ಕಳೆ ಏರಿಸಿ, ಅವುಗಳನ್ನು ಕಾಂತಿಯುತವಾದ ಚಿನ್ನವನ್ನಾಗಿ ಪರಿವರ್ತಿಸಬಹುದೆಂದು ಅವರ ನಿಶ್ಚಿತಾಭಿಪ್ರಾಯ. ಎಲ್ಲ ಲೋಹಗಳಿಗಿಂತ ಹೆಚ್ಚು ಹೊಳೆಯುವ ಪಾದರಸವನ್ನು ಪ್ರಯಾಸವಿಲ್ಲದೆ ಚಿನ್ನವನ್ನಾಗಿ ಮಾರ್ಪಡಿಸಬಹುದೆಂದು ಅವರು ದೃಢವಾಗಿ ನಂಬಿದ್ದರು.

ಈ ನಂಬಿಕೆಗಳೆಲ್ಲವನ್ನೂ ಕಾರ್ಯರೂಪಕ್ಕೆ ತರಲು, ಚೇತನಕಾರಿ "ಸ್ಪರ್ಶಮುಖಿ"ಯನ್ನು ತಯಾರಿಸಲು ರಸತಂತ್ರಜ್ಞನು ಹಗಲೂ ಇರುಳೂ ಒಂದಲ್ಲ ಒಂದು ಪ್ರಯೋಗವನ್ನು ಮಾಡುವನು. ಚರ್ಮದ ಹೊದಿಕೆಗಳನ್ನು ಮೇಲೆಳೆದುಕೊಂಡು, ಹಲವಾರು ಲೋಹಗಳನ್ನು ಕರಗಿಸಿ ಮೂಸೆಯಿಂದ ಮೂಸೆಗೆ ಸುರಿಯುವುದು ; ಅದೇನನ್ನೋ ನೋಡುತ್ತ ತನಗೊಬ್ಬನಿಗೇ ಅರ್ಥವಾಗುವಂತೆ ರಹಸ್ಯ ಸಂಕೇತಗಳನ್ನು ಬರೆದಿಡುವುದು ; ಒಂದು ಕಡೆ ಕರಗಿಸಲು ಸಿದ್ಧವಾಗಿರುವ ಮೂಸೆ, ಇನ್ನೊಂದು ಕಡೆ ವಿಚಿತ್ರಾಕಾರದ ಮಣ್ಣಿನ ಪಾತ್ರೆಗಳು, ಮತ್ತೊಂದು ಕಡೆ ಭಯಂಕರವಾಗಿ ಉರಿಯುತ್ತಿರುವ ಕುಲುಮೆ ; ಕುಲುಮೆಗೆ ಸಂಬಂಧಿಸಿದಂತೆ ತಿದಿಯ ಮೇಲೆ ಏನೇನೋ ಬರವಣಿಗೆಗಳು ; ಮೇಲ್ಛಾವಣಿಯಿಂದ ಇಳಿದು ಬಿದ್ದಿರುವ ಇಲ್ಲಣ, ಬೂದಿ, ಧೂಳು ಇವೇ ರಸತಂತ್ರಜ್ಞನ ಪ್ರಯೋಗ ಮಂದಿರದ ಸ್ವರೂಪ.

ರಸತಂತ್ರಜ್ಞನ ಪ್ರಯೋಗ ವಿಧಾನಗಳು ಹನ್ನೆರಡು ಬಗೆಯಾಗಿದ್ದುವು. ಉರಿಸುವುದು (ದಹನ), ಕರಗಿಸುವುದು, ಸಂಯೋಜಿಸುವುದು ಅಥವಾ ಕೂಡಿಸುವುದು, ಪ್ರತ್ಯೇಕಿಸುವುದು ಇವೇ ಮೊದಲಾದ ವಿಧಾನಗಳ ಮೂಲಕ ಅವನು "ಚಿನ್ನದ ಅಡಿಗೆ"ಯನ್ನು ಮಾಡುವನು. ಆ ಕೆಲಸದಲ್ಲಿಯೇ ಅವನಿಗೆ ಸಂತೃಪ್ತಿ. ರಸತಂತ್ರಜ್ಞನ ತತ್ವಗಳಲ್ಲಿ ಹುರುಳಿಲ್ಲದಿದ್ದರೂ ಅವನು ಕಾರ್ಯ ತತ್ಪರನೆಂದು ನಾವು ಅವನಿಗೆ ಗೌರವವನ್ನು ಸಲ್ಲಿಸಬೇಕು. ಯೂರೋಪ್ ದೇಶ ಗಳ ಅನೇಕ ರಾಜರು ಈ "ಚಿನ್ನದ ಅಡಿಗೆ"ಯವರಿಗೆ ಆಶ್ರಯ ಕೊಟ್ಟರು. ತಮ್ಮ ಅರಮನೆಗಳ ನೆರೆಯಲ್ಲಿಯೇ ಅವರಿಗೆ ಸಣ್ಣ ಸಣ್ಣ ಮನೆಗಳನ್ನು ಕಟ್ಟಿಸಿ ಕೊಟ್ಟು, ಪುರಸ್ಕರಿಸಿದರು. ಅಷ್ಟೇ ಅಲ್ಲದೆ, ಮಂತ್ರಿಗಳೂ, ಸೇನಾಧಿಕಾರಿಗಳೂ ರಸವಿದ್ಯೆಯನ್ನು ಕಲಿಯಬೇಕೆಂದು ರಾಜಾಜ್ಞೆಯು ಇದ್ದಿತು. ಚಿನ್ನವೇ ರಾಜರ ಐಶ್ವರ್ಯದ ಕುರುಹಲ್ಲವೇ ?

ರಸತಂತ್ರಜ್ಞರಲ್ಲಿ ಕಪಟಿಗಳೇ ಬಹುಮಂದಿ. ಯಕ್ಷಿಣಿ ಮಾಡುವಂತೆ ಕೈ ಚಳಕದಿಂದ ಚಿನ್ನದ ಪುಡಿಯನ್ನು ಪಾದರಸದೊಳಗೆ ಸೇರಿಸಿ, ಚಿನ್ನವನ್ನು "ಉತ್ಪತ್ತಿ" ಮಾಡಿದ್ದೇವೆಂದು ಹೆಮ್ಮೆಯಿಂದ ತೋರಿಸುತ್ತಿದ್ದರು.

ಕ್ರಿ. ಶ. ೧೭೦೫ ರಲ್ಲಿ ಸ್ವೀಡನ್ ದೇಶದ ಸೇನಾಧಿಕಾರಿಯೊಬ್ಬನು ಅಶಿಸ್ತಿನಿಂದ ನಡೆದುಕೊಂಡನು. ಈ ಅಪರಾಧಕ್ಕಾಗಿ ರಾಜನು ಅವನನ್ನು ಗಲ್ಲಿಗೇರಿಸುವಂತೆ ಅಪ್ಪಣೆ ಮಾಡಿದನು. ಆ ಸೇನಾಧಿಕಾರಿಯೂ ಒಬ್ಬ ರಸತಂತ್ರಜ್ಞ. ತನ್ನನ್ನು ಕೊಲ್ಲದೆ ತಾನು ಸುಖವಾಗಿ ಜೀವದಿಂದಿರಲು ಅವಕಾಶವಿತ್ತಲ್ಲಿ, ರಾಜನಿಗಾಗಿ ಪ್ರತಿವರ್ಷವೂ ಹತ್ತು ಲಕ್ಷ ವರಹ ಚಿನ್ನವನ್ನು ಹೆಚ್ಚು ವೆಚ್ಚವಿಲ್ಲದೆ ತಯಾರಿಸು ವುದಾಗಿ ಬಿನ್ನವಿಸಿಕೊಂಡನು. ಚಿನ್ನದ ಹೆಸರನ್ನು ಕೇಳಿ ಸಂತೃಪ್ತನಾದ ದೊರೆ ಸೇನಾಧಿಕಾರಿಯನ್ನು ಕ್ಷಮಿಸಲೇಬೇಕಾಯಿತು. ಒಂದು ದಿನ ಆ ಸೇನಾಧಿಕಾರಿ ತವರ, ಸೀಸ ಮೊದಲಾದುವುಗಳನ್ನು ತೆಗೆದುಕೊಂಡು ರಾಜನೆದುರಲ್ಲೇ, ಯಾವುದೋ ಒಂದು ದ್ರಾವಕವನ್ನು ಹಾಕಿ ಕರಗಿಸಿದನು. ಸ್ವಲ್ಪ ಹೊತ್ತಿ ನಲ್ಲಿಯೇ ಹೊಂಬಣ್ಣದ, ಹೊಳಪಿನ "ಚಿನ್ನ" ಕಾಣಿಸಿತಂತೆ. ಆ ಚಿನ್ನವನ್ನು ದೊರೆಯು ನಾಣ್ಯಗಳನ್ನಾಗಿ ಛಾಪಾ ಹಾಕಿಸಿದನಂತೆ. ಇದು ಚಿತ್ತಭ್ರಮಣೆಯ ಪರಿಣಾಮವೆಂದರೆ ತಪ್ಪಾಗಲಾರದು. ಪಾಪ, ಹೊಳೆಯುವುದೆಲ್ಲ ಚಿನ್ನವೆಂದು ಆ ದೊರೆಯು ಭಾವಿಸಿದ್ದಿರಬಹುದು. ನಮ್ಮ ದೇಶದಲ್ಲೂ ಇಂತಹ ಕತೆಗಳನ್ನು ಕೇಳಿದ್ದೇವೆ. ಇವೆಲ್ಲವೂ ಅಸಂಗತವಾದ, ಸತ್ಯಕ್ಕೆ ದೂರವಾದ ಪವಾಡಗಳೆಂದು ನಾವು ತಿಳಿಯಬೇಕು.

ಹದಿನೆಂಟನೆಯ ಶತಮಾನದಲ್ಲಿ ಎಂದರೆ ಸುಮಾರು ನೂರ ಐವತ್ತು ವರ್ಷಗಳ ಹಿಂದೆ ಈ ರಸವಿದ್ಯೆ ಕೊನೆ ಮುಟ್ಟಿತು. ವಿಜ್ಞಾನವು ಬೆಳೆದಂತೆಲ್ಲಾ ಇದು ಕಪಟವಿದ್ಯೆ ಎಂದು ಜನರು ಮನಗಂಡರು. ಬಾಯಿಮಾತು, ಕೈಚಳಕ ಇವೇ ರಸತಂತ್ರಜ್ಞರ ಆಯುಧಗಳೆಂದು ಜನರು ಹೀಯಾಳಿಸಲು ಪ್ರಾರಂಭಿಸಿದರು. ಚಿನ್ನಕ್ಕೆ ಯಾವ ದೈವಿಕ ಶಕ್ತಿಯೂ ಇಲ್ಲ : ಇತರ ಲೋಹಗಳಂತೆ ಅದೂ ಒಂದು ಎಂದು ಭಾವಿಸಿದ ಜನ '' ಚಿನ್ನದ ಅಡಿಗೆ ''ಯವರಿಗೆ ಆಶ್ರಯ ಕೊಡಲಿಲ್ಲ.

ಇಂಗ್ಲೆಂಡ್ ದೇಶದಲ್ಲಿ ಜೇಮ್ಸ್ ಪ್ರೈಸ್ ಎಂಬೊಬ್ಬ ರಸಾಯನ ಶಾಸ್ತ್ರಜ್ಞನಿದ್ದನು. ತಾನು ಒಂದು ವಿಧವಾದ ''ಸ್ಪರ್ಶಮುಖಿ'' ಭಸ್ಮವನ್ನು ಕಂಡು ಹಿಡಿದಿರುವೆನೆಂದೂ. ಅದು ಎಂತಹ ಕೀಳು ಲೋಹವನ್ನೂ ಚಿನ್ನಕ್ಕೆ ಪರಿವರ್ತನೆ ಮಾಡುವುದೆಂದೂ ಅವನು ಪ್ರಚಾರ ಮಾಡಿದನು. ಕೆಲವು ಗಣ್ಯ ವ್ಯಕ್ತಿಗಳೆದುರು ಇಪ್ಪತ್ತು ದಿನಗಳ ಕಾಲ ಅವನು ಪ್ರಯೋಗಗಳನ್ನು ಮಾಡಿ ತವರದಿಂದ '' ಚಿನ್ನ'' ವನ್ನೂ ತಯಾರಿಸಿದನಂತೆ. ಇಂಗ್ಲೆಂಡಿನ ಜಾರ್ಜ್ ದೊರೆಯೂ, ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯವೂ ಅವನಿಗೆ ಗೌರವಗಳನ್ನು ಕೊಟ್ಟು ಸನ್ಮಾನಿಸಿದರು. ಜೇಮ್ಸ್ ಪ್ರೈಸ್ ಇಂಗ್ಲೆಂಡಿನ ರಾಯಲ್ ಸೊಸೈಟಿ ಎಂಬ ವೈಜ್ಞಾನಿಕ ಸಂಸ್ಥೆಯ ಸದಸ್ಯನಾಗಿದ್ದನು. ಅವನ ಪ್ರಯೋಗಗಳ ಸತ್ಯಾಸತ್ಯತೆಯನ್ನು ತಿಳಿಯಲು ರಾಯಲ್ ಸೊಸೈಟಿಯ ಸದಸ್ಯರು ಕಾತರರಾದರು. ತಮ್ಮೆದುರಿಗೇ ಅವನ ಪ್ರಯೋಗಗಳನ್ನು ನಡೆಸಬೇಕೆಂದು ಬಯಸಿದರು. ಒಂದು ದಿನ ಹಲವಾರು ಪ್ರಯೋಗಗಳು ನಡೆಯುವಂತೆ ಎಲ್ಲವೂ ಸಿದ್ಧವಾಗಿದ್ದುವು. ರಾಯಲ್

ಸೊಸೈಟಿಯ ಮೂವರು ವಿದ್ವಾಂಸರು ಮಾತ್ರ ಸಭೆಯಲ್ಲಿದ್ದರು. ಸುತ್ತಲೂ ನಿಶ್ಶಬ್ದ ವಾತಾವರಣ. ಆ ಮೂವರೂ ನೋಡುತ್ತಿದ್ದಂತೆಯೇ ಪ್ರೈಸನು ಒಂದು ಲೋಟದಲ್ಲಿ ವಿಷಮಿಶ್ರವಾದ ನೀರನ್ನು ತೆಗೆದುಕೊಂಡು. ಅವರಿಗೆ ತಲೆಬಾಗಿ, ನೀರನ್ನು ಕುಡಿದನು. ಸ್ವಲ್ಪ ಹೊತ್ತಿನಲ್ಲೇ ಅವನ ಮುಖ ಕಾಂತಿ ಹೀನವಾಯಿತು ; ದೇಹ ಕುಗ್ಗಿತು ; ಕೊನೆಗೆ ನಿರ್ಜೀವವಾಗಿ ಇದೇ ರಸವಿದ್ಯೆಯ ಅವಸಾನವೆನ್ನುವಂತೆ ದೊಪ್ಪೆಂದು ಬಿದ್ದಿತು.

ಹೀಗೆ ರಸವಿದ್ಯೆ ಅಥವಾ ಚಿನ್ನದ ಅಡಿಗೆ ಒಂದು ಹಾಸ್ಯಾಸ್ಪದ ಕಲ್ಪನೆಯಾಗಿ. ಸೇವಿಸಲಯೋಗ್ಯವಾಗಿ ಕಂಡುಬಂದಿತು. ಪ್ರಕೃತಿಯಲ್ಲಿ ದೊರೆಯುವ ಚಿನ್ನವನ್ನು ಪರಿಶೋಧಿಸದೆ. ಮನೆಯಲ್ಲಿ ಚಿನ್ನವನ್ನು ಮಾಡಬಹುದೆನ್ನುವುದು ಹಾಸ್ಯಾಸ್ಪದವಲ್ಲವೇ ?

ಟಿಪ್ಪಣಿ

ಲೇಖಕರು :—ಡಾ॥ ಬಿ.ವಿ. ಸುಬ್ಬರಾಯಪ್ಪನವರು ಈಗ ದೆಹಲಿಯಲ್ಲಿ ನ್ಯಾಷನಲ್ ಅಕಡೆಮಿ ಆಫ್ ಸೈನ್ಸಸ್ ಎಂಬಲ್ಲಿ ಕಾರ್ಯದರ್ಶಿಗಳಾಗಿದ್ದಾರೆ. ಕನ್ನಡದಲ್ಲಿ ವಿಜ್ಞಾನದ ವಿಷಯವಾಗಿ ಚೆನ್ನಾಗಿ ಬರೆಯಬಲ್ಲ ಕೆಲವೇ ಲೇಖಕರಲ್ಲಿ ಇವರೊಬ್ಬರು. ಇವರು ' ನೀರಿನ ಕತೆ ' ' ಬಂಗಾರದ ಕತೆ ' ಮುಂತಾದ ಸಣ್ಣ ಸಣ್ಣ ಪುಸ್ತಕಗಳನ್ನು ಬರೆದಿದ್ದಾರೆ. ' ಬಂಗಾರದ ಕತೆ ' ಎಂಬ ಪುಸ್ತಕದಿಂದ ಈ ಭಾಗವನ್ನು ಆರಿಸಲಾಗಿದೆ.

ಅಭ್ಯಾಸ

೧. ಕಠಿನ ಪದಗಳ ಅರ್ಥ :—

ರಸತಂತ್ರಜ್ಞ=ರಸವಿದ್ಯೆಯನ್ನು ಬಲ್ಲವನು : ಪರಿವರ್ತಿಸಬಹುದು=ಮಾರ್ಪಡಿಸಬಹುದು, ಬದಲಾಯಿಸಬಹುದು ; ರಸವಿದ್ಯೆ=ಕೀಳು ಲೋಹದಿಂದ ಬಂಗಾರವನ್ನು ತಯಾರಿಸುವ ವಿದ್ಯೆ ; ಭವ್ಯವಾದ=ಶ್ರೇಷ್ಠವಾದ. ಉತ್ತಮ ವರ್ಜೆಯ ; ಮೂಸೆ=ಲೋಹಗಳನ್ನು ಕರಗಿಸುವಾಗ ಉಪಯೋಗಿಸುವ ಚಿಕ್ಕ ಮಣ್ಣಿನ ಪಾತ್ರೆ : ವಿಧಾನ=ರೀತಿ ; ಕುಲುಮೆ=ಒಲೆ. ಅಗ್ಗಿಷ್ಟಿಕೆ : ವಾದಸರಣಿ=ಮಾತಿನ ಧಾಟಿ ; ಇಲ್ಲಣ=ಮೇಲ್ಛಾವಣಿಗಳ ಅಡಿಯಲ್ಲಿ ಕಟ್ಟಿಕೊಂಡಿರುವ ಧೂಳು. ಕಸ ; ಚಿತ್ತಭ್ರಮಣೆ=ಹುಚ್ಚು : ಕಪಟಿ=ಮೋಸಗಾರ : ಕುರುಹು=ಗುರುತು : ದ್ರಾವಕ=ಲೋಹಗಳನ್ನು ಕೂಡಿಸುವ ಒಂದು ಬಗೆಯ ದ್ರವ : ಪವಾಡ=ಅದ್ಭುತಕಾರ್ಯ : ಅವಸಾನ=ಕೊನೆ, ಸಾವು ; ಹಾಸ್ಯಾಸ್ಪದ=ಹಾಸ್ಯಕ್ಕೆ ಒಳಗಾಗುವ.

೨. ಈ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :—

(೧) 'ರಸವಿದ್ಯೆ' ಎಂದರೇನು ? ಅದು ಹುಟ್ಟಿ ಬೆಳೆದ ಕತೆಯನ್ನು ಸಂಕ್ಷೇಪವಾಗಿ ತಿಳಿಸಿ.

(೨) ಸೀಸ, ತವರ, ಪಾದರಸ ಮುಂತಾದ ಲೋಹಗಳ ವಿಚಾರದಲ್ಲಿ ಆಗಿನ ಜನರ ಮನಸ್ಸಿನಲ್ಲಿ ಮೂಡಿದ್ದ ಭಾವನೆಯೇನು ? ಇದಕ್ಕಾಗಿ ಅವರು ಸ್ಪರ್ಶಮಣಿಯ ಉಪಯೋಗವನ್ನು ಮಾಡಿಕೊಂಡ ಬಗೆಯನ್ನು ತಿಳಿಸಿ.

(೩) ರಸತಂತ್ರಜ್ಞನ ಪ್ರಯೋಗಮಂದಿರದ ಸ್ವರೂಪವನ್ನು ತಿಳಿಸಿ.

(೪) ' ರಸತಂತ್ರಜ್ಞನಿಗೆ ನಾವು ಗೌರವ ಕೊಡಬೇಕು ' ಇದನ್ನು ಚರ್ಚಿಸಿ.

(೫) ಶಿಕ್ಷೆಗೊಳಗಾಗಿದ್ದ ಸ್ವೀಡನ್ ದೇಶದ ಸೇನಾಧಿಕಾರಿ ರಾಜಾನುಗ್ರಹವನ್ನು ಪಡೆದ ಬಗೆಯನ್ನು ವಿವರಿಸಿ.

(೬) ' ರಸವಿದ್ಯೆ ' ಕೊನೆಗೊಂಡ ರೀತಿ, " ಜೇಮ್ಸ್ ಪ್ರೈಸನ ಅವಸಾನ " ಇವುಗಳ ವಿಚಾರವಾಗಿ ಹತ್ತು ವಾಕ್ಯಗಳನ್ನು ಬರೆಯಿರಿ.

೩. ಈ ಕೆಳಗಿನ ಪದಗಳನ್ನು ನಿಮ್ಮ ಸ್ವಂತ ಮಾತಿನಲ್ಲಿ ಬಳಸಿ :—

ಭವ್ಯವಾದ, ಪ್ರೋತ್ಸಾಹ, ಕಾರ್ಯತತ್ಪರ, ರಾಜಾಜ್ಞೆ, ಅಶಿಸ್ತಿನಿಂದ, ಬಿನ್ನವಿಸಿಕೊಳ್ಳು, ದ್ರಾವಕ, ಚಿತ್ತಭ್ರಮಣೆ, ಹಾಸ್ಯಾಸ್ಪದ.

೪. ಈ ಕೆಳಗಿನ ಸಂಸ್ಕೃತ ಶಬ್ದಗಳಿಗೆ ಕನ್ನಡ ಶಬ್ದಗಳನ್ನೂ, ಕನ್ನಡ ಶಬ್ದಗಳಿಗೆ ಸಂಸ್ಕೃತ ಶಬ್ದಗಳನ್ನೂ ಬರೆಯಿರಿ :—

ವಿದ್ಯೆ, ಕಾರ್ಯ, ಐಶ್ವರ್ಯ, ಸುಖ, ಲಕ್ಷೆ, ಕತೆ, ಮುಖ.

೫. ಈ ಕೆಳಗಿನ ಪದಗಳನ್ನು ಕೂಡಿಸಿ ಬರೆಯಿರಿ :—

ನಿಶ್ಚಿತ + ಅಭಿಪ್ರಾಯ, ಅತಿ + ಅದ್ಭುತ, ರಾಜ + ಆಜ್ಞೆ, ಸೇನಾ + ಅಧಿಕಾರಿ, ಗಲ್ಲಿಗೆ + ಏರಿಸು.

೬. ಇವುಗಳ ವಿರುದ್ಧ ಪದಗಳನ್ನು ತಿಳಿಸಿ :—

ಕೀಳು, ಮಿಥ್ಯ, ನಂಬಿಕೆ, ಇರುಳು, ರಹಸ್ಯ, ಪುರಸ್ಕರಿಸು, ಅಶಿಸ್ತು, ನಿರ್ಜೀವ.

೧೯. ಬಹುರೂಪಿಗಳು

ತಮ್ಮ ಕಲೆ–ಕುಶಲತೆಯನ್ನು ಪ್ರದರ್ಶಿಸಿ, ಮನರಂಜನೆ ಒದಗಿಸಿ ಹೊಟ್ಟೆ ಹೊರಕೊಳ್ಳುವ 'ಕರಡಿಯಾಟ', 'ಮಂಗನಾಟ', 'ದೊಂಬರಾಟ'ದಂಥ ಕೆಲವು ಕುಲಕಸಬು ಇಂದು ಕಣ್ಮರೆಯಾಗುತ್ತಿವೆ. ಇಂಥವುಗಳಲ್ಲಿ ಒಂದಾದರೂ. ಇವುಗಳಿಂದ ವಿಭಿನ್ನವೂ ವಿಶಿಷ್ಟವೂ ಆದ ಕಸಬು ಬಹುರೂಪಿಗಳದ್ದು.

'ಬಹುರೂಪಿ'ಗಳು ಹೆಸರಿಗೆ ತಕ್ಕ ಹಾಗೆ ಬಹುರೂಪ ಅಂದರೆ ಬಗೆ–ಬಗೆಯ ಸೋಗು ಹಾಕುವವರು. ಇವರನ್ನು ವೇಷಗಾರರೆಂದೂ, ಜಾತಿಗಾರರೆಂದೂ ಕರೆಯುವುದುಂಟು. ಇವರು ತಲೆತಲಾಂತರದಿಂದ ಈ ಕಲೆಗೆ ತಮ್ಮ ಬದುಕನ್ನು ಸಮರ್ಪಿಸುತ್ತ ಬಂದಿರುವರು. ನೀರಿನಲ್ಲಿ ಹುಟ್ಟಿದ ಮೀನು ಸಹಜವಾಗಿಯೆ ಈಜು ಕಲಿಯುವಂತೆ ಈ ಸಮಾಜದ, ಮನೆತನದ ಪ್ರತಿಯೊಬ್ಬನೂ ಸೋಗು ಹಾಕುವ ಕಲೆಯನ್ನು ಕ್ರಮೇಣ ಕರತಲಾಮಲಕ ಮಾಡಿಕೊಳ್ಳುವನು. ಇದರಿಂದಾಗಿ ಈ ಮನೆತನದ ಹೆಣ್ಣು–ಗಂಡು. ಹಿರಿ–ಕಿರಿಯರು ಎಲ್ಲರೂ ಸೇರಿಯೇ ಒಂದು 'ಕಲಾಮೇಳ'ವಾಗಿ ಪರಿಣಮಿಸುವರು. ಇಂದಿನ 'ನಾಟಕಕಂಪನಿ' ಅಥವಾ 'ಸಾಂಸ್ಕೃತಿಕ ಶಿಷ್ಟಮಂಡಲ'ದಂತೆ ಇವರು ಊರಿಂದೂರಿಗೆ ಸುತ್ತುತ್ತ ಹೋಗುವರು. ಆದರೆ ಇವರಿಗೆ ಅಂಥ ಯಾವ ಸಾಮಾನು–ಸರಂಜಾಮು ಬೇಕಿಲ್ಲ. ಸಿದ್ಧ ರಂಗಭೂಮಿಯ ಆವಶ್ಯಕತೆಯೂ ಇವರಿಗಿಲ್ಲ. ಯಾವುದೊಂದು ಮನೆಯೆದುರಿನ ಅಂಗಳ ಇಲ್ಲವೆ ಬೀದಿಯೊಳಗಿನ ಸ್ಥಳ ಇವರಿಗೆ ಬಯಲು ರಂಗಭೂಮಿಯಾಗಿ ಬಿಡುವುದು.

ಬಹುರೂಪಿಗಳ ಕುಟುಂಬ ಒಂದು ಊರಿಗೆ ಬಂದರೆ ಮುಗಿಯಿತು : ಅಲ್ಲಿಯ ಜನರ ರಸಿಕತೆ. ಆಶ್ರಯದಾತರಾಗುವ ಹೃದಯವಂತಿಕೆ ಮೊದಲಾದುವನ್ನು ನೋಡಿಕೊಂಡು ಸುಮಾರು ಒಂದು ತಿಂಗಳವರೆಗೆ ಇವರು ಅಲ್ಲಿ ನೆಲೆನಿಲ್ಲುವರು.

ಇವರು ಸಾಮಾನ್ಯವಾಗಿ ಸುಗ್ಗಿ ಮುಗಿದ ಮೇಲೆಯೇ ತಮ್ಮ ಸಂಚಾರ ಪ್ರಾರಂಭಿಸುವರು. ಊರ ಹೊರಗಿನ ಒಂದು ಮರದ ಕೆಳಗೆ ಹೊಡೆದ ಡೇರೆಯಲ್ಲಿಯೋ. ಧರ್ಮಶಾಲೆಯಲ್ಲಿಯೋ ಬೀಡು ಬಿಡುವರು. ಬೆಳಗಿನ ಊಟ–ಉಪಹಾರ ಮುಗಿಸಿಕೊಂಡು ತಾವು ಹಾಕಬಯಸುವ ವಿಶಿಷ್ಟ 'ವೇಷ'ದ ಬಣ್ಣಗಾರಿಕೆ ಹಾಗೂ ಉಡುಗೆ–ತೊಡುಗೆಗಳಲ್ಲಿ ಕೆಲಹೊತ್ತು ಕಳೆಯುವರು. ತಮ್ಮಲ್ಲಿರುವ ಸಾಮಾನ್ಯ

ವರ್ಣ-ವೇಷ-ಭೂಷಣಗಳ ನೆರವಿನಿಂದ ಬೇಕಾದ ಪ್ರಸಂಗ-ಪಾತ್ರ. ಕಥೆ-ಸನ್ನಿವೇಶಗಳಿಗೆ ತಕ್ಕಂಥ ಪ್ರದರ್ಶನದ ಸಿದ್ಧತೆ ಮಾಡಿಕೊಳ್ಳುವರು. ತ್ವರಿತವಾಗಿ ರೂಪ ಹಾಗೂ ವೇಷ ಬದಲಿಸುವುದರಲ್ಲಿ ಇವರದು ಎತ್ತಿದ ಕೈ. ಗುರುತಾಗದಂಥ ಸೋಗು ಹಾಕಿ. ಜನರನ್ನು ನಿಜವೆಂದೇ ನಂಬುವಂತೆ ಮಾಡಿ, ನಂತರ ತಮ್ಮ ನಿಜಸ್ವರೂಪ ಪ್ರಕಟಪಡಿಸಿ. ಜನರನ್ನು ಬೆರಗುಗೊಳಿಸಿ ಇನಾಮು ಕೇಳುವುದು ಇವರ ಒಂದು ವಿಶೇಷ.

ಇಳಿಹೊತ್ತಿನ ಸಮಯದಲ್ಲಿ ಬಿಡಾರದಿಂದ ಹೊರಟು ಇವರು ಮನೆಯಿಂದ ಮನೆಗೆ ಸುತ್ತತೊಡಗುವರು. ಆಯಾ ಊರಿನ ಯಾವ ಮನೆಯವರು ಎಷ್ಟು ಉದಾರರು. ರಸಿಕರು ಎನ್ನುವುದು ಇವರಿಗೆ ಚೆನ್ನಾಗಿ ಗೊತ್ತು. ಆದ್ದರಿಂದ ಆದಕ್ಕೆ ತಕ್ಕಂತೆ ಇವರು ಅಲ್ಲಲ್ಲಿ ತಮ್ಮ ಪ್ರದರ್ಶನವನ್ನು ಸಂಗ್ರಹವಾಗಿಯೋ. ಸಮಗ್ರವಾಗಿಯೋ ನಡೆಯಿಸುವರು. ಊರ ಗೌಡ 'ಶಾನುಭೋಗ' ಪಂಚ ಪ್ರಮುಖರ ಮನೆಗಳೆದುರು ವಿಶೇಷ ಮುತುವರ್ಜಿಯಿಂದ ಪ್ರದರ್ಶನ ನೀಡುವರು.

ಇವರು ಒಂದೊಂದು ದಿನ ಒಂದೊಂದು ವೇಷಕಟ್ಟುವರು. ಒಮ್ಮೆ ಬಸುರಿ ಹೆಂಗಸು : ಇನ್ನೊಮ್ಮೆ ಬಾಣಂತಿ ಹಾಗೂ ಆಕೆಯ ಅಳುಬುರುಕ ಕೂಸು—ಇಂಥ 'ಸೋಗು' ಹಾಕಿ. ಹಾಸ್ಯದ ಲಹರಿಯನ್ನೆ ಊರಲ್ಲೆಲ್ಲ ಹರಿಸುವರು. ಆಗಾಗ ಪಶು-ಪಕ್ಷಿಗಳ 'ಕೂಗು'ಗಳನ್ನು ಅನುಕರಿಸಿ ತೋರಿಸುವರು.

ಒಂದು ದಿನ ಸಿಂಧೂರ ಲಕ್ಷ್ಮಣನಂಥ ಕಡುಗಲಿಯ ಸಾಹಸಪ್ರಸಂಗಗಳನ್ನು ಅಭಿನಯಿಸುವರು. ಇನ್ನೊಂದು ದಿನ ಶಿವಭಕ್ತ ಬೇಡರ ಕಣ್ಣಪ್ಪನ ವೇಷ ಹಾಕಿ ಸುತ್ತುವರು. ಭಕ್ತಿಪರೀಕ್ಷೆಯ ಗಳಿಗೆಯಲ್ಲಿ ಆತ ತನ್ನ ಕಣ್ಣು ಕಿತ್ತು ದೇವರಿಗೆ ಅರ್ಪಿಸುವ ಪ್ರಸಂಗದ ಇವರ ಅಭಿನಯವಂತೂ ಮೈ ಮುಳ್ಳುತರುವಂಥದು. ಅಂಥ ಜೀವಂತಿಕೆಯನ್ನು ಸಾಕ್ಷಾತ್ಕರಿಸಿ ತೋರಿಸುವರು. ಮತ್ತೊಂದು ದಿವ ಶ್ರೀರಾಮಚಂದ್ರನ ವನವಾಸಗಮನದ ಚಿತ್ರವನ್ನು ಕಣ್ಣಿಗೆ ಕಟ್ಟುವಂತೆ ಮಾಡುವರು. ಇವರ ಹನುಮಂತನ ಲಂಕಾದಹನದ ಪ್ರದರ್ಶನವಂತೂ ಅದ್ಭುತ ರಮ್ಯ. ಪುಟ್ಟ ಬಾಲಕನೊಬ್ಬ ಕಪಿಚೇಷ್ಟೆಯ ನಟನೆಯ ಭರದಲ್ಲಿ ಬೀದಿಯಲ್ಲಿಯ ಬಂಡಿಯಿಂದ ಬಾಡಿಗೆ ಹಾರುವ, ಮನೆಯೊಂದರ ಕಟ್ಟೆಯಿಂದ ಮತ್ತೊಂದು ಕಟ್ಟೆಗೆ ಜಿಗಿಯುವ ದೃಶ್ಯವಂತೂ ಆಶ್ಚರ್ಯಕರ. ಹೀಗೆ ಇವರು ಯಾವ ಸೋಗು ಹಾಕಿದರೂ. ಅದಕ್ಕೆ ತಕ್ಕಂತಹ ವೇಷ, ಧ್ವನಿಯಲ್ಲಿಯ ಏರಿಳಿತ ಹಾಗೂ ಹಾವಭಾವದೊಡನೆ ಆ 'ಸೋಗು' ಯಥಾರ್ಥವೆನಿಸುವಂತೆ, ನಾಲ್ಕು ಜನ ಮೆಚ್ಚಿ 'ಹೌದ್ಹೌದು' ಎನ್ನುವಂತೆ ಅಭಿನಯಿಸುವರು.

ಕೊನೆಯ ದಿನವಾದರೊ ತಮ್ಮ ಕೌಶಲಕ್ಕೆ ಕಳಸವಿಡುವಂಥ ಪ್ರದರ್ಶನ ನೀಡುತ್ತ ಇವರು ಪ್ರತಿಯೊಂದು ಮನೆಯ ಬಾಗಿಲಿಗೂ ಹೋಗುವರು. ಆಗ



ಊರ ಬಡವಬಲ್ಲಿದರೆಲ್ಲರೂ ತಮ್ಮ ಶಕ್ತ್ಯನುಸಾರ ತಮ್ಮ ಕಾಣಿಕೆ ನೀಡುವರು. ಕೆಲವರು ದವಸ-ಧಾನ್ಯಗಳನ್ನಿತ್ತರೆ, ಇನ್ನು ಕೆಲವರು ವಸ್ತ್ರಾಭರಣಗಳನ್ನು ಕೊಡುವರು. ಇವರು ಮಾತ್ರ ಜನರು ಕೈಯೆತ್ತಿ ಕೊಟ್ಟ ಮೆಚ್ಚುಗೆಗಳನ್ನು ಸಂತೋಷದಿಂದ ಸ್ವೀಕರಿಸುವರು. ಧನ್ಯವಾದವನ್ನರ್ಪಿಸಿ, ಮುಂದಿನ ಊರಿಗೆ ಪ್ರಯಾಣ ಬೆಳೆಸುವರು.

ಇಂಥ ಕಲಾಪ್ರದರ್ಶಕ, ಸಂಸ್ಕೃತಿಪ್ರಸಾರಕ—'ಬಹುರೂಪಿ 'ಸಮಾಜ ಕರ್ನಾಟಕದಂತೆ ಮಹಾರಾಷ್ಟ್ರ, ಗುಜರಾಥ, ಪಂಜಾಬ ಮುಂತಾದ ಇತರ ಪ್ರದೇಶ ಗಳಲ್ಲಿಯೂ ಇದೆ. ಈ ಸಮಾಜದ ಕೆಲವರು ಇತ್ತೀಚೆಗೆ ತಮ್ಮ ಪರಂಪರಾಗತವಾದ ಈ ವೃತ್ತಿಯನ್ನು ಬಿಡುತ್ತಿದ್ದಾರೆ. ಒಕ್ಕಲುತನ, ಚಿತ್ರದ ಕೆಲಸಗಳಂಥ ಇತರ ಉದ್ಯೋಗಗಳಿಗೆ ಅಂಟಿಕೊಳ್ಳತೊಡಗಿದ್ದಾರೆ. ಇದರಿಂದಾಗಿ ಮನೋರಂಜನೆ ಯೊಡನೆ ಮನೋವಿಕಾಸಕ್ಕೂ ಎಡಗೊಡುವ ಈ ಅಪರೂಪದ ಪ್ರತಿಭೆ ಅಳಿಸಿ ಹೋಗುವಂಥ ಪರಿಸ್ಥಿತಿ ಉಂಟಾಗಿದೆ.

ಅಭ್ಯಾಸ

೧. (ಅ) ಕಠಿನ ಪದಗಳ ಅರ್ಥ :—

ಕಸಬು = ಉದ್ಯೋಗ ; ವಿಭಿನ್ನ = ಬೇರೆಯಾದ ; ಸಮರ್ಪಿಸು = ಒಪ್ಪಿಸು, ಕಾಣಿಕೆ ಕೊಡು ; ಕಲಾಮೇಳ = ಕಲಾವಿದರ ಕೂಟ (ಗುಂಪು) ; ಸರಂಜಾಮು = ಸಲಕರಣೆ ; ರಸಿಕತೆ = ಸೌಂದರ್ಯಪ್ರೀತಿ, ಸವಿಗಾರಿಕೆ ; ಆಶ್ರಯದಾತ = ಆಶ್ರಯ ಕೊಡುವವ ; ಹೃದಯವಂತಿಕೆ = ದೊಡ್ಡಮನಸ್ಸು, ಉದಾರತನ ; ಭೂಷಣ = ಅಲಂಕಾರ ; ತ್ವರಿತ = ತೀವ್ರ, ಬೇಗನೆ ; ಪ್ರಕಟಪಡಿಸು = ಬಹಿರಂಗಗೊಳಿಸು, ಬಯಲಿಗೆ ಹಾಕು ; ಇನಾಮು = ಬಹುಮಾನ ; ಬಿಡಾರ = ತಾತ್ಕಾಲಿಕ ವಾಸ, ವಸತಿ ; ಮುತುವರ್ಜಿ = ಕಾಳಜಿ, ಎಚ್ಚರ : ಕಡುಗಲಿ = ಬಹಳ ಶೂರ ; ಸಾಕ್ಷಾತ್ಕರಿಸು = ಪ್ರತ್ಯಕ್ಷಮಾಡು, ಕಣ್ಣಿಗೆ ಕಾಣುವಂತೆ ಮಾಡು ; ಅದ್ಭುತ = ಆಶ್ಚರ್ಯ, ಬೆರಗು ; ರಮ್ಯ = ಸುಂದರ ; ಯಥಾರ್ಥ = ಸಹಜ, ಸತ್ಯ ; ಅಪರೂಪದ = ಅತಿ ವಿರಳವಾದ, ಹೆಚ್ಚಾಗಿ ಬಳಕೆಯಲ್ಲಿಲ್ಲದ.

(ಆ) ನುಡಿಗಟ್ಟುಗಳ ಅರ್ಥ :—

ಹೊಟ್ಟೆಹೊರಕೊಳ್ಳು = ಹೊಟ್ಟೆಹೊರೆದು (ಪೊರೆದು) ಕೊಳ್ಳು, ಬಾಳುವೆ ಮಾಡು, ಉಪಜೀವಿಸು ; ಕರತಲಾಮಲಕ = ಅಂಗೈನಲ್ಲಿ, ಸುಲಭಸಾಧ್ಯ ; ನೆಲೆನಿಲ್ಲು = ಬೀಡು ಬಿಡು, ವಸತಿಮಾಡು ; ಎತ್ತಿದ ಕೈ = ಅತಿ ಚತುರ, ಬಲು ಜಾಣ ; ಮೈ ಮೇಲೆ ಮುಳ್ಳು ತರು = ರೋಮಾಂಚನಗೊಳಿಸು ; ಕಣ್ಣಿಗೆ ಕಟ್ಟು = ಪ್ರತ್ಯಕ್ಷವಾಗಿಸು ; ಕೈಯೆತ್ತಿ ಕೊಡು = ಮನಃಪೂರ್ವಕವಾಗಿ ಕೊಡು, ಔದಾರ್ಯದಿಂದ ಕೊಡು.

೨. ವಿಶೇಷ ಟಿಪ್ಪಣಿ :—

ಸಾಂಸ್ಕೃತಿಕ ಶಿಷ್ಟಮಂಡಲ—ಒಂದು ಪ್ರದೇಶದ, ರಾಜ್ಯದ ಅಥವಾ ರಾಷ್ಟ್ರದ ಜನಜೀವನ, ಹಬ್ಬ-ಹುಣ್ಣಿಮೆ, ಕಲೆ-ಸಂಸ್ಕೃತಿಗಳ ಪರಿಚಯ ಮಾಡಿಕೊಡುವ ಸಲುವಾಗಿ ಇನ್ನೊಂದು ಪ್ರದೇಶ, ರಾಜ್ಯ ಅಥವಾ ರಾಷ್ಟ್ರಕ್ಕೆ ಹೋಗುವ ಪರಿಣತರ ಅಥವಾ ಪ್ರತಿನಿಧಿಗಳ ಒಂದು ವಿಶೇಷ ಮೇಳ.

ಸಿಂಧೂರ ಲಕ್ಷ್ಮಣ, ಬೇಡರ ಕಣ್ಣಪ್ಪ ಮುಂತಾದವರು ನಾಡಿನಲ್ಲಿ ಆಗಿ ಹೋದ ವೀರರು ಮತ್ತು ಭಕ್ತರು.

೩. ವ್ಯಾಕರಣ ವಿಶೇಷ:—

(ಅ) ಕೆಳಗಿನ ವಾಕ್ಯಗಳಲ್ಲಿಯ ಗುಣವಾಚಕಗಳನ್ನು ಗುರುತಿಸಿರಿ :—

(i) ಇವುಗಳಿಂದ ವಿಭಿನ್ನವೂ, ವಿಶಿಷ್ಟವೂ ಆದ ಕಸಬು ಬಹುರೂಪಿಗಳದ್ದು.

(ii) ಒಮ್ಮೆ ಬಸುರಿ ಹೆಂಗಸು ; ಇನ್ನೊಮ್ಮೆ ಬಾಣಂತಿ ಹಾಗೂ ಆಕೆಯ ಅಳುಬುರುಕ ಕೂಸು—ಇಂಥ ಸೋಗು ಹಾಕಿ, ಹಾಸ್ಯದ ಲಹರಿಯನ್ನೆ ಊರಲ್ಲೆಲ್ಲ ಹರಿಸುವರು.

(ಆ) ಸಂಧಿಗಳನ್ನು ಬಿಡಿಸಿ, ಅವುಗಳ ಹೆಸರು ಹೇಳಿರಿ :—

ಕರತಲಾಮಲಕ, ಕಣ್ಮರೆಯಾಗು, ವಸ್ತ್ರಾಭರಣ, ಯಾವುದೊಂದು.

ಪ್ರಶ್ನೆಗಳು :—

(ಅ) ಕಣ್ಮರೆಯಾಗುತ್ತಿರುವ ಕುಲಕಸಬು ಯಾವುವು ? ಅವುಗಳ ವಿಶೇಷವೇನು ?

(ಆ) 'ಬಹುರೂಪಿ'ಗಳು ಯಾರು ? ಅವರಿಗೆ ಆ ಹೆಸರು ಏಕೆ ಬಂದಿದೆ ?

(ಇ) 'ಬಹುರೂಪಿ' ಮನೆತನವು 'ಸಾಂಸ್ಕೃತಿಕ ಶಿಷ್ಟಮಂಡಲ' ಹೇಗೆ ?

ವಿಶೇಷ ಓದು :—

ನಮ್ಮ ರಾಜ್ಯದಲ್ಲಿರುವ ಇಂಥ ಇತರ ಕುಲಕಸಬುದಾರರನ್ನು ಕುರಿತ ವಿವರಗಳನ್ನು ಸಂಗ್ರಹಿಸಿರಿ. ಉದಾ.—ಬುಡುಬುಡಿಕೆಯವರು, ಕಿಳ್ಳಿಕೇತರು ಅಥವಾ ತೊಗಲು ಗೊಂಬೆ ಆಟದವರು, ಇತ್ಯಾದಿ.)

---

೨೦. ಮಹರ್ಷಿ ಮತ್ತು ನಾಯಿ

ದಟ್ಟವಾಗಿ ಮರಗಳು ಬೆಳೆದಿದ್ದ ಒಂದು ದೊಡ್ಡ ಕಾಡಿನಲ್ಲಿ ಮಹರ್ಷಿಯೊಬ್ಬನು ತಪಸ್ಸು ಮಾಡುತ್ತಿದ್ದನು. ನಿರಾಹಾರನಾಗಿದ್ದು ಸಾತ್ವಿಕ ವೃತ್ತಿಯಿಂದ ಜೀವಿಸುತ್ತಿದ್ದ ಆತನ ಪ್ರಭಾವದಿಂದ ಸುತ್ತಮುತ್ತಲಿದ್ದ ಕಾಡಿನ ಕ್ರೂರ ಮೃಗಗಳೆಲ್ಲ ಸಾಧುವಾಗಿ ವರ್ತಿಸುತ್ತಿದ್ದವು. ಆತನ ಬಳಿಯಲ್ಲಿ ಸ್ವಾಭಾವಿಕವಾದ ಪರಸ್ಪರ ವೈರಭಾವವನ್ನು ಬಿಟ್ಟು ಪ್ರೇಮದಿಂದ ವರ್ತಿಸುತ್ತಿದ್ದವು; ಪ್ರತಿದಿನವೂ ಮಹರ್ಷಿಯ ಬಳಿಗೆ ಬಂದು ಅವನ ಸೇವೆ ಮಾಡುತ್ತಿದ್ದವು. ಅವುಗಳಲ್ಲಿ ಯಾವುದೋ ಊರಿನಿಂದ ಬಂದ ಒಂದು ನಾಡಿನ ಪ್ರಾಣಿ, ನಾಯಿಯೂ ಸೇರಿತ್ತು. ಅದಕ್ಕೆ ಮಹರ್ಷಿಯ ಮೇಲೆ ಅತಿಶಯವಾದ ಭಕ್ತಿಯೂ, ಪ್ರೀತಿಯೂ ಇತ್ತು. ಯಾವಾಗಲೂ ಅವನ ಸಮೀಪದಲ್ಲಿಯೇ ಅದು ಮಲಗುತ್ತಿತ್ತು. ಅವನು ಕೊಟ್ಟ ಫಲ–ಮೂಲಗಳನ್ನು ತಿಂದು ಕಾಡು ತೊರೆಗಳ ನೀರನ್ನು ಕುಡಿದು ಕಾಲ ಕಳೆಯುತ್ತಿತ್ತು.

ಹೀಗೆ ಬಹುಕಾಲ ಕಳೆಯಿತು. ಒಂದು ದಿನ ಅಲ್ಲಿಗೆ ಯಾವುದೋ ಕಾಡಿನಿಂದ ಅಪರಿಚಿತವಾದ ಕ್ರೂರ ಚಿರತೆಯೊಂದು ಬಂತು. ಮಾಂಸಾಹಾರಿಯಾದ ಅದಕ್ಕೆ ನಾಯಿಯನ್ನು ಕಂಡಾಗ ಬಾಯಿಯಲ್ಲಿ ನೀರೂರಿತು. ಹೇಗಾದರೂ ಇದನ್ನು ಕೊಂದು ತಿನ್ನಬೇಕೆಂದು ಅದು ಹೊಂಚು ಹಾಕತೊಡಗಿತು. ಈ ದುರುದ್ದೇಶ ನಾಯಿಗೆ ತಿಳಿಯಿತು. ಅದು ತನ್ನ ಪ್ರಾಣವನ್ನು ಉಳಿಸಿಕೊಳ್ಳುವುದು ಹೇಗೆಂಬ ಚಿಂತೆಯಿಂದ ಮಹರ್ಷಿಯ ಬಳಿಗೆ ಬಂದು "ಪೂಜ್ಯರೇ, ನಾಯಿಯನ್ನು ಕೊಂದು

ತಿನ್ನುವ. ಚಿರತೆಯೊಂದು ಎಲ್ಲಿಂದಲೋ ಬಂದಿದೆ. ಇದು ನನ್ನನ್ನು ಉಳಿಸುವಂತಿಲ್ಲ. ನೀವೇ ನನ್ನ ದೇವರು. ಎಲ್ಲವನ್ನೂ ತಿಳಿದ ನೀವು ಯಾವುದೇ ಉಪಾಯದಿಂದ ಲಾದರೂ ನನ್ನನ್ನು ರಕ್ಷಿಸಬೇಕು '' ಎಂದು ಅಂಗಲಾಚಿತು.

ಮಹರ್ಷಿಗೆ ನಾಯಿಯ ಮೇಲೆ ಕರುಣೆ ಬಂತು. ಪ್ರೀತಿಯಿಂದ ಅದರ ಮೈದಡವಿ, "ವತ್ಸ, ಹೆದರಬೇಡ. ನಿನ್ನನ್ನು ರಕ್ಷಿಸುವ ಉಪಾಯವನ್ನು ನಾನು ಬಲ್ಲೆ. ನನ್ನ ತಪಸ್ಸಿನ ಪ್ರಭಾವದಿಂದ ನೀನೂ ಕೂಡ ಬಲಿಷ್ಠವಾದ ಒಂದು ಚಿರತೆ ಯಾಗುವಂತೆ ಮಾಡಿ ಬಿಡುತ್ತೇನೆ. ಆಮೇಲೆ ಇದು ನಿನ್ನನ್ನೇನೂ ಮಾಡಲಾರದು '' ಎಂದು ಹೇಳಿ ಅದರ ಮೈಮೇಲೆ ಮಂತ್ರೋದಕವನ್ನು ಪ್ರೋಕ್ಷಿಸಿದನು. ಒಡನೆಯೇ ಆ ನಾಯಿಯು ಚಿರತೆಯಾಗಿ ಗರ್ಜಿಸತೊಡಗಿತು. ತನಗಿಂತಲೂ ಪ್ರಬಲವಾದ ಚಿರತೆಯನ್ನು ಕಂಡು, ಬಂದಿದ್ದ ಚಿರತೆಗೆ ಭಯ ವಾಯಿತು. ಅದು ಉಪಾಯಗಾಣದೆ ತನ್ನ ದಾರಿ ಹಿಡಿದು ಮತ್ತೆಲ್ಲಿಗೋ ಸಾಗಿಹೋಯಿತು.

ನಾಯಿಯು ಚಿರತೆಯಾಗಿ ಸ್ವಲ್ಪ ಕಾಲ ಕಳೆದಾಗ ಬೇರೊಂದು ಕಾಡಿನಿಂದ ಭಯಂಕರವಾದ ಒಂದು ಹುಲಿ ಬಂದು ಈ ಚಿರತೆಯನ್ನು ಕೊಂದು ತಿನ್ನಲು ಹೊಂಚುಹಾಕತೊಡಗಿತು. ಹುಲಿಯನ್ನು ಕಂಡು ಭಯಪಟ್ಟ ನಾಯಿಯು ಮತ್ತೊಮ್ಮೆ ಮಹರ್ಷಿಯ ಬಳಿಗೆ ಬಂದು ತನ್ನನ್ನು ಹುಲಿಯ ಬಾಯಿಯಿಂದ ಕಾಪಾಡಬೇಕೆಂದು ಪ್ರಾರ್ಥಿಸಿಕೊಂಡಿತು. ದಯಾಳುವಾದ ತಪಸ್ವಿಯು ಮಂತ್ರೋ

ದರವನ್ನು ಪ್ರೋಕ್ಷಿಸಿ ಬಂದ ಹುಲಿಗಿಂತ ಬಲಶಾಲಿಯಾದ ಹುಲಿಯನ್ನಾಗಿ ಅದನ್ನು ಮಾರ್ಪಡಿಸಿದನು. ಹುಲಿಯ ಮೈಯನ್ನಾಂತ ನಾಯಿಯು ಈಗ ಯಾವ ಭಯವೂ ಇಲ್ಲದೆ ಕಾಡಿನಲ್ಲಿ ಸಂಚರಿಸತೊಡಗಿತು ; ಮಾತ್ರವಲ್ಲ, ಅದರ ಸ್ವಭಾವವೂ ಸಂಪೂರ್ಣ ಬದಲಾಗಿ ಹೋಯಿತು. ಈಗ ಅದಕ್ಕೆ ಹಣ್ಣು-ಹಂಪಲುಗಳು ಮೆಚ್ಚುತ್ತಿರಲಿಲ್ಲ. ಅದು ಗೆಡ್ಡೆ-ಗೆಣಸುಗಳನ್ನು ಕಣ್ಣೆತ್ತಿಯೂ ನೋಡುತ್ತಿರಲಿಲ್ಲ. ಆಶ್ರಮದ ಕಟ್ಟಳೆಗೆ ವಿರುದ್ಧವಾಗಿ ಅಲ್ಲೊಂದು ಇಲ್ಲೊಂದು ಸಾಧು ಮೃಗವನ್ನು ಕೊಂದು ತಿನ್ನುತ್ತಿತ್ತು. ಯಾರೂ ಅದನ್ನು ತಡೆಯುವಂತಿರಲಿಲ್ಲ.

ಹೀಗಿರುತ್ತ ಒಂದು ದಿನ ಆಕಾಶದಲ್ಲಿ ಕಾರ್ಮೋಡ ಎದ್ದು ಬಂದಂತೆ ಒಂದು ಮದ್ದಾನೆ ಆ ಕಾಡನ್ನು ಪ್ರವೇಶಿಸಿತು. ಬೆಟ್ಟವೇ ಉರುಳಿ ಬರುವಂತೆ ಮುಂದೆ ನುಗ್ಗುತ್ತಿದ್ದ ಆ ಆನೆಯನ್ನು ಕಂಡು ಹುಲಿಗೆ ಭಯವಾಯಿತು. ಅದು ಮಹರ್ಷಿಯ ಬಳಿಗೆ ಓಡಿ ಬಂದು " ನನ್ನನ್ನು ಆನೆಯೊಂದು ತನ್ನ ಕೋರೆದಾಡೆಗಳಿಂದ ತಿವಿದು ಕೊಲ್ಲಲು ಬರುತ್ತಿದೆ. ದಯವಿಟ್ಟು ನನ್ನ ಪ್ರಾಣವನ್ನು ಉಳಿಸಿರಿ " ಎಂದು ಬೇಡಿಕೊಂಡಿತು. ಮಹರ್ಷಿಯು ಹುಲಿಯನ್ನು ಆನೆಯಾಗಿ ಮಾರ್ಪಡಿಸಿ ಕಳುಹಿಸಿದನು.

ಆನೆಯಾದ ಮೇಲೆ ಆ ನಾಯಿಯು ಕಾಡಿನ ದೊಡ್ಡ ದೊಡ್ಡ ಮರಗಳನ್ನು ಮುರಿದು ಉರುಳಿಸುತ್ತ ಸಂತೋಷದಿಂದ ಕಾಲ ಕಳೆಯುತ್ತಿತ್ತು. ಕೆಲವು ದಿನಗಳಾದ ಮೇಲೆ ಅಕಸ್ಮಾತ್ತಾಗಿ ಅಲ್ಲಿಗೆ, ಉದ್ದವಾದ ಕೇಸರಗಳುಳ್ಳ ಸಿಂಹವೊಂದು ಎಲ್ಲಿಂದಲೋ ಬಂದು ಗರ್ಜಿಸಿತು. ಸಿಂಹದ ಗರ್ಜನೆಯನ್ನು ಕೇಳಿದ ಮಾತ್ರಕ್ಕೆ ಆನೆಯ ಪ್ರಾಣವೇ ಹಾರಿ ಹೋದಂತಾಯಿತು. ಅದು ಓಡಿ ಬಂದು ಮಹರ್ಷಿಯ ಕಾಲ ಬುಡದಲ್ಲಿ ತಲೆಯಿಟ್ಟು ಕಾಪಾಡಬೇಕೆಂದು ಮೊರೆಯಿಟ್ಟಿತು. ಸಿಂಹದ ಭಯದಿಂದ ಪಾರು ಮಾಡಲು ಮಹರ್ಷಿಯು ಅದಕ್ಕೆ ಸಿಂಹದ ಶರೀರವನ್ನೇ ಉಂಟುಮಾಡಿದನು. ಸಿಂಹವಾದ ಮೇಲೆ ಅದರ ಗರ್ವವನ್ನು ಕೇಳಬೇಕೇ ? ಕಾಡಿನಲ್ಲಿ ವಾಸಿಸುತ್ತಿದ್ದ ಉಳಿದ ಎಲ್ಲ ಪ್ರಾಣಿಗಳನ್ನೂ ಅದು ಗರ್ಜಿಸಿ ಬೆದರಿಸುತ್ತಿತ್ತು. ಸಿಕ್ಕಿದವುಗಳನ್ನು ಕೊಂದು ತಿನ್ನುತ್ತಿತ್ತು. ಅದರ ಉಪಟಳದಿಂದ ಯಾವ ಪ್ರಾಣಿಯೂ ಅಲ್ಲಿ ವಾಸಿಸುವಂತಿರಲಿಲ್ಲ. ಒಂದೊಂದಾಗಿ ತಮ್ಮ ದಾರಿ ಹಿಡಿದು ಬೇರೆಲ್ಲಿಗೋ ಹೊರಟುಹೋದವು.

ತನಗೆ ಸಮಾನರು ಈ ಲೋಕದಲ್ಲಿ ಇನ್ನಾರಿದ್ದಾರೆ ಎಂದು ಗರ್ವದಿಂದ ಈ ಸಿಂಹವು ಮೆರೆಯುತ್ತಿದ್ದಾಗ ಒಂದು ದಿನ, ಇಡೀ ಪ್ರಾಣಿಗಳ ಸಮುದಾಯವನ್ನೇ ಕೊಂದು ಕೆಡಹುವ ಸಾಮರ್ಥ್ಯವುಳ್ಳ, ಒಂದು ಶರಭವು ಆ ಕಾಡಿಗೆ ಬಂತು. ಅದಕ್ಕಿದ್ದ ಎಂಟು ಕಾಲುಗಳನ್ನೂ, ಕೆಂಗಣ್ಣುಗಳನ್ನೂ ನೋಡಿ ಈ ಸಿಂಹದ

ಹೊಟ್ಟೆಯಲ್ಲಿ ತಳಿಕೂತಿತು. ಇದರ ಮುಂದೆ ತನ್ನ ಬಲವು ಕಾಸಿಗಿಂತಲೂ ಕಡೆಯೆಂದು ಅದಕ್ಕೆ ತಿಳಿಯಿತು. ಈ ಹೊಸ ಶತ್ರುವಿನಿಂದ ಪಾರಾಗಲು ಅದು ಮತ್ತೊಮ್ಮೆ ತಪಸ್ವಿಯ ಬಳಿಗೆ ಹೋಗಿ ಮೊರೆಯಿಟ್ಟಿತು. ಋಷಿಯು ಮೊದಲಿನಂತೆ ಪ್ರೀತಿಯಿಂದ ಅದನ್ನು ಶರಭವನ್ನಾಗಿ ಮಾಡಿದನು.

ಶರಭವಾದ ಮೇಲೆ ಅದಕ್ಕೆ ಯಾರ ಭಯವೂ ಇರಲಿಲ್ಲ. ಶರಭಕ್ಕಿಂತ ಬಲಶಾಲಿಯಾದ ಪ್ರಾಣಿ ಈ ಸೃಷ್ಟಿಯಲ್ಲಿ ಇನ್ನೊಂದಿಲ್ಲ. ಹೀಗಾಗಿ ಅದು ಎಲ್ಲರನ್ನೂ ಪೀಡಿಸತೊಡಗಿತು. ಇಡೀ ಕಾಡಿನಲ್ಲಿ ಎಲ್ಲಿ ಹುಡುಕಿದರೂ ಒಂದೇ ಒಂದು ಪ್ರಾಣಿಯೂ ಸಿಗದಂತೆ ಎಲ್ಲ ಮೃಗಗಳನ್ನೂ ಅದು ಕೊಂದು. ತಿಂದು ಮುಗಿಸಿತು.

ಹೀಗೆ ತನಗೆ ಶತ್ರುಗಳೇ ಇಲ್ಲವೆಂದು ನಿರ್ಭಯವಾಗಿ ಕಾಲ ಕಳೆಯುತ್ತಿದ್ದಾಗ ಒಂದು ದಿನ ಕುಳಿತಲ್ಲಿಗೇ ಅದರ ತಲೆಯಲ್ಲೊಂದು ಆಲೋಚನೆ ಹೊಳೆಯಿತು. '' ಈ ಮಹರ್ಷಿಯು ಪ್ರೋಕ್ಷಿಸುವ ನೀರಿಗೆ ಎಂತಹ ಶಕ್ತಿ ಇದೆ. ಲೋಕದಲ್ಲಿ ಯಾರಿಗೂ ದೊರೆಯದ ಶರಭದ ಶರೀರವು ನಾಯಿಯಾಗಿದ್ದ ನನಗೆ ದೊರೆತಿದೆ. ಇನ್ನು ನನ್ನನ್ನು ಎದುರಿಸುವವರಾಗಲೀ, ಕೊಲ್ಲುವವರಾಗಲೀ ಯಾರೂ ಇಲ್ಲ. ಆದರೆ ಒಂದು ಸಂಶಯ ಬರುತ್ತಾ ಇದೆ. ಕರುಣೆಯಿಂದ ನನ್ನನ್ನು ಶರಭ ಮಾಡಿದಂತೆ ಇನ್ನಾವುದಾದರೂ ಒಂದು ಪ್ರಾಣಿಯು ಬಂದು ಇವನನ್ನು ಪ್ರಾರ್ಥಿಸಿದರೆ. ಅದಕ್ಕೂ ನನ್ನಂತೆಯೇ ಇವನು ಶರಭದ ಶರೀರವನ್ನು ಕೊಟ್ಟಾನು. ಆಗ ನನಗೊಬ್ಬ ವಿರೋಧಿಯು ಹುಟ್ಟಿದಂತಾದೀತು. ಹಾಗಾಗಬಾರದು. ಇದಕ್ಕೇನು ಉಪಾಯ ? ಇನ್ನೇನು. ಈಗ ಈ ಮಹರ್ಷಿಯನ್ನೇ ಕೊಂದುಬಿಟ್ಟರೆ. ಮತ್ತೆ ಆ ಭಯಕ್ಕೇ ಎಡೆಯಿಲ್ಲದಂತಾಗುತ್ತದೆ. ಅದೇ ಸರಿ. ಇವನನ್ನು ಈಗಲೇ ತೀರಿಸಿ ಬಿಡುತ್ತೇನೆ '' ಎಂದು ಆಲೋಚಿಸಿ. ಮಹರ್ಷಿಯು ಕುಳಿತು ತಪಸ್ಸು ಮಾಡುತ್ತಿದ್ದಲ್ಲಿಗೆ ಮೆಲ್ಲನೆ ಹಿಂದಿನಿಂದ ಸದ್ದಿಲ್ಲದೆ ಅದು ಬಂತು. ಆದರೆ ತಪಸ್ವಿಯಾದ ಅವನಿಗೆ ಈ ಪ್ರಾಣಿಯ ದುರುದ್ದೇಶ ಮೊದಲೇ ತಿಳಿದಿತ್ತು. ತನ್ನ ಬಳಿಗೆ ಬರುವ ಶರಭವನ್ನು ದೂರದಿಂದಲೇ ಅವನು ತಿರುಗಿ ನೋಡಿ, ' ಎಲೇ ನೀಚಪಶು. ನಾಯಿಯಾಗಿದ್ದ ನಿನ್ನ ಪ್ರಾಣವನ್ನು ಉಳಿಸಬೇಕೆಂದು ನಾನು ಇಷ್ಟೆಲ್ಲ ನಿನಗೆ ಅನುಗ್ರಹವನ್ನು ಮಾಡಿದೆ. ಆದರೆ ಕೃತಘ್ನನಾದ ನೀನು ನಿನ್ನ ಜಾತಿಸ್ವಭಾವವನ್ನು ಬಿಡಲಾರದೆ ಹೋದೆ. ಹೋಗಲಿ, ನೀನು ಸ್ವಭಾವಕ್ಕೆ ತಕ್ಕಂತೆ ನಾಯಿಯಾಗಿ ಇರುವುದೇ ಲೇಸು. ಯಾರೇ ಆದರೂ. ಅಲ್ಪರಲ್ಲಿ ವಿಶ್ವಾಸವಿಡಬಾರದೆಂಬ ಸತ್ಯವು ಈಗ ನನಗೆ ತಿಳಿಯಿತು. ನೀಚರಿಗೆ ಅಧಿಕಾರವನ್ನೂ, ಶಕ್ತಿಯನ್ನೂ ದಯಪಾಲಿಸಿದರೆ ಅವರು ದುಷ್ಕೃತ್ಯವನ್ನೇ ಮಾಡುತ್ತಾರೆಂದು ನಿನ್ನಿಂದ

ಸ್ಪಷ್ಟವಾಯಿತು. ನಿನ್ನನ್ನು ನಾನು ಕೊಲ್ಲುವುದಿಲ್ಲ. ಹೋಗು. ಎಲ್ಲಿಯಾದರೂ ಸಾಯುವ ತನಕ ಬದುಕಿರು ' ಎಂದು ಹೇಳಿ. ಅದನ್ನು ಮೊದಲಿನಂತೆ ನಾಯಿಯನ್ನಾಗಿ ಮಾಡಿಬಿಟ್ಟನು.

ಟಿಪ್ಪಣಿ

೧. ಲೇಖಕರು :—ಶ್ರೀ ಕೃ.ಭ. ಪೆರ್ಲ ಅವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಪೆರ್ಲದಲ್ಲಿನ ಸತ್ಯನಾರಾಯಣ ಹೈಸ್ಕೂಲಿನಲ್ಲಿ ಅಧ್ಯಾಪಕರು. ಕನ್ನಡದಲ್ಲಿ ' ಕಿರಾತಾರ್ಜುನೀಯ ಕಥೆ ', ' ಮಹಾಭಾರತದ ಉಪಕಥೆಗಳು ' ಮುಂತಾಗಿ ಪುಸ್ತಕಗಳನ್ನು ರಚಿಸಿದ್ದಾರೆ. ಯಕ್ಷಗಾನ, ನಾಟಕಗಳಲ್ಲಿ ತುಂಬ ನುರಿತ ಇವರ ಕನ್ನಡ ಕೃತಿಗಳಲ್ಲಿ ನಾಟಕಶೈಲಿಯ ಗುಣವಿದೆ. ' ಮಹಾಭಾರತದ ಉಪಕಥೆಗಳು ' ಎನ್ನುವ ಗ್ರಂಥದಿಂದ ಈ ಕಥೆಯನ್ನು ಆರಿಸಿದೆ.

ಅಭ್ಯಾಸ

೨. ಕಠಿನ ಪದಗಳ ಅರ್ಥ :—

ನಿರಾಹಾರ = ಆಹಾರವಿಲ್ಲದಿರುವುದು. ಉಪವಾಸ ; ಕೇಸರ = ಸಿಂಹದ ಕುತ್ತಿಗೆಯ ಸುತ್ತಲೂ ಬೆಳೆದಿರುವ ಕೂದಲು : ಅಂಗಲಾಚಿತು = ಬೇಡಿಕೊಂಡಿತು : ಮೂಲ = ಬೇರು : ವತ್ಸ = ಮಗು : ಉಪಟಳ = ತೊಂದರೆ (ಹಿಂಸೆ) : ಮಂತ್ರೋದಕ = ಮಂತ್ರದ ನೀರು : ಸಂಶಯ = ಸಂದೇಹ. ಅನುಮಾನ ; ಮಾರ್ಪಡಿಸಿದನು = ವ್ಯತ್ಯಾಸ ಮಾಡಿದನು (ಬದಲಾಯಿಸಿದನು) : ಕೃತಘ್ನ = ಮಾಡಿದ ಉಪಕಾರವನ್ನು ಮರೆತು ಕೇಡು ಬಯಸುವವನು : ಕಟ್ಟಳೆ = ನಿಯಮ : ಸಾರಮೇಯ = ನಾಯಿ.

೩. ಇವುಗಳಿಗೆ ಉತ್ತರಗಳನ್ನು ಬರೆಯಿರಿ :—

(೧) ಮಹರ್ಷಿಯು ನಾಯಿಯನ್ನು ಚಿರತೆಯನ್ನಾಗಿ ಮಾರ್ಪಡಿಸಿದುದೇಕೆ ? ಹೇಗೆ ಮಾರ್ಪಡಿಸಿದನು ?

(೨) ನಾಯಿ ಯಾವ ಯಾವ ಪ್ರಾಣಿಯಾಗಿ ರೂಪಾಂತರ ಹೊಂದಿತು ? ರೂಪಾಂತರ ಹೊಂದಿದ ಮೇಲೆ ಅದು ಮಾಡಿದ ಕೆಲಸವೇನು ?

(೩) ಕೊನೆಯದಾಗಿ ಆ ನಾಯಿ ಮಾಡಿದ ಕೃತಘ್ನತೆಯ ಆಲೋಚನೆಯೇನು ? ಅದರ ಪರಿಣಾಮವೇನಾಯಿತು ?

೪. ಈ ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ :—

ಮಹರ್ಷಿ. ಮೈದಡವಿ, ಮಂತ್ರೋದಕ. ಉಪಾಯಗಾಣದೆ.

೫. ಇವುಗಳ ವಿರುದ್ಧ ಪದಗಳನ್ನು ತಿಳಿಸಿ :—

ಕ್ರೂರಮೃಗ, ವೈರ, ನಾಡು, ಮಾಂಸಾಹಾರಿ, ದುರುದ್ದೇಶ, ಉಳಿಸು, ಭಯ, ಉಪಾಯ, ಅನುಗ್ರಹ, ಕೃತಘ್ನ, ಶತ್ರು.

೬. ಈ ಕೆಳಗಿನ ಸಂಸ್ಕೃತ ಶಬ್ದಗಳಿಗೆ ಕನ್ನಡ ಶಬ್ದಗಳನ್ನು ತಿಳಿಸಿ :—

ಮೃಗ, ತಪಸ್ವಿ, ಆಕಾಶ, ಸಂತೋಷ, ಪ್ರಾಣ, ಋಷಿ, ಸಿಂಹ.

---

೨೧. ನವಿಲು

ಪ್ರಪಂಚದ ಪ್ರತಿಯೊಂದು ದೇಶ ತನ್ನಲ್ಲಿಯ ವಿಶೇಷವಾದ ಪಕ್ಷಿಯೊಂದನ್ನು 'ರಾಷ್ಟ್ರಪಕ್ಷಿ'ಯೆಂದು ಘೋಷಿಸಿದೆ. ಹಾಗೆ ಘೋಷಿತವಾದ, ನಮ್ಮ ದೇಶದ ರಾಷ್ಟ್ರಪಕ್ಷಿ ನವಿಲು. ಕೋಗಿಲೆ ಕಂಠಕ್ಕೆ, ಹಂಸ ನಡಿಗೆಗೆ ಹೆಸರಾಗಿರುವಂತೆ, ನಮ್ಮ ನವಿಲು ತನ್ನ ಬಣ್ಣದ ಬೆಡಗು. ಠೌಲಿನ ನಡಿಗೆ ಹಾಗೂ ಚೆಲುವಾದ ಕುಣಿತಗಳಿಗೆ ಖ್ಯಾತವಾಗಿದೆ.

ಮಳೆಗಾಲದ ಮೋಡಗಳು ಮುಗಿಲಲ್ಲಿ ಕವಿಯುವಾಗ ನವಿಲಿಗೆ ಎಲ್ಲಿಲ್ಲದ ಸಂತೋಷ, ಸಂಭ್ರಮ. ಆ ಗಳಿಗೆಯಲ್ಲಿ ಗರಿಗೆದರಿ ಕುಣಿಯುವ ಅದರ ಚೆಲುವು ಎಂಥವರಿಗೂ ಮನಾಕರ್ಷಕ. ಕವಿಗಳ ವರ್ಣನೆಗೆ, ಚಿತ್ರಗಾರರ ಚಿತ್ರಣಕ್ಕೆ ಅದು ಸ್ಫೂರ್ತಿಯ ನೆಲೆ. ನರ್ತಕರಿಗೂ ಅದು 'ಮಯೂರನೃತ್ಯ'ದ ಸೃಷ್ಟಿಗೆ ಪ್ರೇರಕ. ಬಹುಶಃ ಇವೆಲ್ಲ ಕಾರಣಗಳಿಂದಾಗಿಯೇ ನವಿಲು ವಿದ್ಯಾದೇವತೆಯಾದ ಸರಸ್ವತಿಯ ವಾಹನವೆಂದು ಪುರಾಣಗಳಲ್ಲಿ ಪರಿಗಣಿತವಾದಂತಿದೆ.

ನವಿಲುಗಳಲ್ಲಿ ಗಂಡು ಹೆಚ್ಚು ಸುಂದರ. ಹಾಲು ಬಣ್ಣದ ಹೊಳಪಿನ ಮುಖ. ನೀಲಿ ಬಣ್ಣದ ತಲೆ. ಅದರ ಮೇಲೆ ರಾಜಠೀವಿ ಮೆರೆಸುವ ತುರಾಯಿ, ಕೆಂಪು ಮಿಶ್ರಿತ ನಸುಹಳದಿ ಬಣ್ಣದ ರೆಕ್ಕೆ. ಬೆನ್ನ ಮೇಲಿನ ಹಸಿರು ನೀಲಿ ಬಣ್ಣದ ಉದ್ದನ್ನ ಗರಿ, ಆ ಗರಿಗಳಲ್ಲಿಯ 'ಕಣ್ಣು'. ಆ ಕಣ್ಣುಗಳಲ್ಲಿಯ ವರ್ಣವೈವಿಧ್ಯ— ಈ ಬಣ್ಣದ ಬೆಡಗು ಬಿನ್ನಾಣಗಳು ಇದರವೇ. ಇವೇ ಇದರ ವಿಶೇಷ ಅಲಂಕಾರ, ಆಕರ್ಷಣೆ.

ಗಂಡು ನವಿಲು ತನ್ನ ಗಡಸು ಕಂಠದಿಂದ ಹೆಣ್ಣು ನವಿಲಿನ ಗಮನವನ್ನು ಸೆಳೆಯುತ್ತದೆ. ಹಿಗ್ಗೇರಿದ ಗಳಿಗೆಯಲ್ಲಿ ಅದು ಹೆಣ್ಣು ನವಿಲಿನ ಮುಂದೆ ಕುಣಿಯಲು

ಅನುವಾಗುತ್ತದೆ. ನೂರಾರು ಕಣ್ಣು ತೆರೆದಂತೆ ತೋರುವ ತನ್ನ ಗರಿಗಳನ್ನು ಬೀಸಣಿಗೆಯಾಕಾರದಲ್ಲಿ ಬೆನ್ನ ಹಿಂದೆ ಮೇಲೆತ್ತಿ ಹರಡುತ್ತದೆ. ಹೆಜ್ಜೆಯಿಂದ ತಾಳ



ಹಾಕುವಂತೆ ಸೊಗಸಾಗಿ, ಸಮ್ಮೋಹಕವಾಗಿ ಕುಣಿಯುತ್ತದೆ. ಹೀಗೆ ತನ್ನ ಬೆಡಗು–ಬಣ್ಣ–ಕುಣಿತಗಳನ್ನು ಪ್ರದರ್ಶಿಸಿ ಹೆಣ್ಣಿನ ಮನವನ್ನು ಒಲಿಸಿಕೊಳ್ಳುತ್ತದೆ.

ಗಂಡು ನವಿಲಿನ ದೇಹದ ಹಿಂಭಾಗದಲ್ಲಿಯ ಬೆಡಗಿನ ಬಾಲ ದೋಣಿಯ ಚುಕ್ಕಾಣಿಯಂತೆ ಶರೀರದ ಸಮತೋಲವನ್ನು ಕಾಯ್ದುಕೊಳ್ಳಲೂ ಅನುಕೂಲ ವಾಗಿದೆ.

ಆದರೆ ಹೆಣ್ಣು ನವಿಲಿಗೆ ಮಾತ್ರ ಇಂಥ ಯಾವ ಬೆಡಗು-ಬಿನ್ನಾಣವಿಲ್ಲ. ಅದರ ವರ್ಣವೂ ಮಸಕುಮಬ್ಬು. ಗಾತ್ರವೋ ಕಿರಿದು. ಅದು ವಸಂತಕಾಲದಲ್ಲಿ ನೆಲದಲ್ಲಿ ಗೂಡು ಕಟ್ಟಿ, ಸುಮಾರು ಹತ್ತು ಬಿಳಿಯ ಮೊಟ್ಟೆಗಳನ್ನಿಡುತ್ತದೆ. ತನ್ನ ಮರಿಗಳನ್ನು ಎಂಟು ತಿಂಗಳವರೆಗೆ ಜೋಪಾನ ಮಾಡುತ್ತದೆ. ನವಿಲ ಮರಿಗೆ ಗರಿ ಬೆಳೆಯಲಾರಂಭಿಸುವುದು ತನ್ನ ಮೂರನೆಯ ವರ್ಷದಲ್ಲಿ.

ಕಾಡುನವಿಲು ಗುಂಪಾಗಿ ವಾಸಿಸುತ್ತವೆ. ರಾತ್ರಿಗಳನ್ನು ಮರಗಳ ಮೇಲೆ ಕಳೆಯುತ್ತವೆ. ಕಾಳು, ಬೀಜ, ಉರಗಗಳು ಮತ್ತು ಕೀಟಗಳು ಅವುಗಳ ಆಹಾರ ವಾಗಿವೆ.

ಅಲಂಕಾರಪ್ರಾಯವಾದ ನವಿಲನ್ನು ಪಳಗಿಸುವುದು ಬಹು ಸುಲಭ. ಅಂತೆಯೇ ಹಿಂದೆ ರಾಜ–ಮಹಾರಾಜರು ತಮ್ಮ ಅರಮನೆಗಳಲ್ಲಿ ಅವನ್ನು ಪ್ರೀತಿಯಿಂದ ಸಾಕುತ್ತಿದ್ದರು. ಆದ್ದರಿಂದ ಅವನ್ನು ಸಾಮಾನ್ಯವಾಗಿ ಪ್ರಾಣಿ ಸಂಗ್ರಹಾಲಯಗಳಲ್ಲಿ ಸಾಕುವುದುಂಟು.

ನಮ್ಮ ದೇಶದಂಥ ನವಿಲು ಸಿಂಹಳ ದೇಶದಲ್ಲೂ ಇವೆ. ಆದರೆ ಜಾವಾ, ಬರ್ಮ, ಥೈಲೆಂಡ್ ಹಾಗೂ ಮಲಯ ದೇಶಗಳಲ್ಲಿರುವ ನವಿಲು ನಮ್ಮವುಗಳಿಂದ ಭಿನ್ನ. ಅವುಗಳ ಬಣ್ಣ ಹಸಿರು ; ಕಾಲು ನಮ್ಮ ದೇಶದವುಗಳಿಂತ ಉದ್ದ. ನವಿಲುಗಳಲ್ಲಿ ಬಿಳಿ ಮತ್ತು ಕಪ್ಪು ಗರಿಗಳುಳ್ಳ ನವಿಲುಗಳೂ ಇವೆ.

ನವಿಲು ಅನೇಕ ವಿಧವಾಗಿ ನಮಗೆ ಪ್ರಯೋಜಕವಾಗಿವೆ. ನವಿಲುಗರಿಗಳಿಂದ ನಿರ್ಮಿತವಾದ ಬೀಸಣಿಗೆಗಳು ಅತ್ಯಂತ ಆಕರ್ಷಕ. ನವಿಲಮಾಂಸವೂ ಕೆಲವರಿಗೆ ಮೆಚ್ಚು ; ಅದು ಮದ್ದಿಗೂ ಉಪಯುಕ್ತ. ಇದರಿಂದಾಗಿ ಕೆಲವರು ನವಿಲುಗಳ ಕಳ್ಳ ಬೇಟೆಯಲ್ಲಿ ತೊಡಗಿದ್ದಾರೆ. ಅದರಿಂದಾಗಿ ಅವುಗಳ ಸಂತಾನ ಕ್ರಮೇಣ ಕಡಮೆಗೊಳ್ಳುತ್ತಿದೆ. ಪರಿಣಾಮವಾಗಿ ನಮ್ಮ ನಿಸರ್ಗದ ಚೆಲುವಿಗೆ ಭಂಗ ಬರತೊಡಗಿದೆ. ಹುಳು–ಹುಪ್ಪಡಿಗಳ ನಿರ್ಮೂಲನದಲ್ಲಿ ನಮ್ಮ ರೈತರಿಗೆ ಆಗುತ್ತಿದ್ದ ನವಿಲುಗಳ ಸಹಾಯಕ್ಕೆ ಸಂಚಕಾರ ಒದಗುತ್ತಿದೆ. ಇದನ್ನೆಲ್ಲ ಗಮನಿಸಿಯೆ ನಮ್ಮ ಸರಕಾರ ಅವುಗಳ ಬೇಟೆಯನ್ನು ಅಪರಾಧವೆಂದು ಸಾರಿದೆ. ಅವುಗಳ ರಕ್ಷಣೆಗೆ ತಕ್ಕ ಕ್ರಮಗಳನ್ನೂ ಕೈಗೊಂಡಿದೆ. ಸರಕಾರದ ಈ ಸ್ತುತ್ಯ ಕಾರ್ಯದಲ್ಲಿ ಸಕ್ರಿಯ ಪಾಲುಗಾರರಾಗುವುದು ನಮ್ಮೆಲ್ಲರ ಕರ್ತವ್ಯವೇ ಆಗಿದೆ.

ಅಭ್ಯಾಸ

೧. (ಅ) ಕಠಿನ ಪದಗಳ ಅರ್ಥ :—

ಘೋಷಿಸು = ಸಾರಿಹೇಳು ; ಖ್ಯಾತ = ಪ್ರಸಿದ್ಧ : ಕವಿ = ಮುಸುಕು ಹಾಕು ; ಸ್ಫೂರ್ತಿ = ಉತ್ತೇಜನ, ಪ್ರೇರಣೆ ; ಸೆಲೆ = ನೀರಿನ ಚಿಲುಮೆ, ಝರಿ ; ಮಯೂರ = ಗಂಡು ನವಿಲು ; ಪರಿಗಣಿಸು = ತಿಳಿ ; ವರ್ಣವೈವಿಧ್ಯ = ತರತರದ ಬಣ್ಣಗಳು : ಬಿನ್ನಾಣ = ಬೆಡಗು. ವಿಲಾಸ ; ಅನುವಾಗು = ಸಿದ್ಧವಾಗು ; ಸಮತೋಲ = ಸಮತೂಕ : ನಿರ್ಮಿತ = ರಚಿಸಲ್ಪಟ್ಟ ; ಮದ್ದು = ಔಷಧ ; ಸ್ತುತ್ಯ = ಹೊಗಳಲು ಯೋಗ್ಯ : ಸಕ್ರಿಯ = ಕ್ರಿಯಾತ್ಮಕ. ಚಟುವಟಿಕೆಯಿಂದ ಕೂಡಿದ.

(ಆ) ನುಡಿಗಟ್ಟುಗಳ ಅರ್ಥ :—

ಸಂಚಕಾರ ಒದಗು = ಕೇಡುಂಟಾಗು, ಕೊರತೆಯುಂಟಾಗು.

೨. ವ್ಯಾಕರಣ ವಿಶೇಷ :—

(ಅ) ಈ ಪಾಠದ ಮೊದಲಿನೆರಡು ವಾಕ್ಯವೃಂದಗಳಲ್ಲಿ ಬರುವ ಕ್ರಿಯಾಪದಗಳನ್ನು ಗುರುತಿಸಿ.

(ಆ) ಕೆಳಗೆ ಕೊಟ್ಟ ಧಾತುಗಳನ್ನು ಕ್ರಿಯಾಪದಗಳನ್ನಾಗಿ ಮಾಡಿ ಅವನ್ನು ನಿಮ್ಮ ವಾಕ್ಯಗಳಲ್ಲಿ ಉಪಯೋಗಿಸಿ :—
ಸೆಳೆ, ಹರಡು, ಕುಣಿ, ಸಾಕು, ಸಾರು, ಕೈಗೊಳ್ಳು.

(ಇ) ಕೆಳಗಿನ ಸಂಧಿಗಳನ್ನು ಬಿಡಿಸಿ, ಹೆಸರು ಹೇಳಿ :—
ಹೆಸರಾಗು, ಗರಿಗೆದರು, ಮನಾಕರ್ಷಕ, ನೂರಾರು, ಆಹಾರವಾಗು.

೩. ಪ್ರಶ್ನೆಗಳು :—

(ಅ) ನಮ್ಮ "ರಾಷ್ಟ್ರಪಕ್ಷಿ" ಯಾವುದು ? ಅದು ಏತಕ್ಕೆ ಹೆಸರಾಗಿದೆ ?.
(ಆ) ನವಿಲಿನ ಕುಣಿತ ಯಾರ ಯಾರ ಮನವನ್ನು ಸೆಳೆದಿದೆ ? ಅದರ ಪರಿಣಾಮವೇನಾಗಿದೆ ?
(ಇ) ಗಂಡು ನವಿಲಿನ ಅಲಂಕಾರ-ಆಕರ್ಷಣೆ ಯಾವುದು ?
(ಈ) ನವಿಲ ಆಹಾರ ಯಾವುದು ?
(ಉ) ನಮ್ಮ ನವಿಲುಗಳಿಂದ ಭಿನ್ನವಾದ ನವಿಲು ಎಲ್ಲಿವೆ? ಅವುಗಳ ಸ್ವರೂಪವೆಂಥದು ?
(ಊ) ನವಿಲು ನಮಗೆ ಹೇಗೆ ಪ್ರಯೋಜಕವಾಗಿವೆ ?
(ಋ) ನವಿಲ ರಕ್ಷಣೆಯ ಅಗತ್ಯವೇನು?

೪. ವಿಶೇಷ ಓದು :—
ನಾವು ಸಾಕುವ ಇತರ ಪಕ್ಷಿಗಳ ಬಗೆಗೆ ವಿವರಗಳನ್ನು ಸಂಗ್ರಹಿಸಿ. (ಉದಾ. :— ಗಿಳಿ, ಪಾರಿವಾಳ, ಮೈನಾ, ಇತ್ಯಾದಿ.)

---

೨೨. ಒಂದು ಪತ್ರ—ಬೀದರಿನ ಸಂದರ್ಶನ

ಮಂಗಲಪೇಟೆ,
ಬೀದರ
ತಾ|| ೯-೧೦-೧೯೭೪

ಪ್ರಿಯ ಗೆಳತಿ ಪರಿಮಳಾ,

ನಿನಗೆ ಈ ಮೊದಲೊಂದು ಓಲೆ ಬರೆದಿದ್ದೆ. ಅದು ತಲುಪಿರಬಹುದು. ಈಸಲ ದಸರೆಯ ಬಿಡುವಿನಲ್ಲಿ ನಾವು ಬೀದರದ ಕೋಟೆ, ಮಹಮೂದ ಗವಾನನ

ಪಾಠಶಾಲೆ, ನಾನಕ ಝರಾ, ನರಸಿಂಹಝರಣಿ, ಪಾಪನಾಶಿನಿ ಮುಂತಾದ ಐತಿಹಾಸಿಕ ಹಾಗೂ ಧಾರ್ಮಿಕ ಸ್ಥಳಗಳನ್ನು ನೋಡಿಕೊಂಡು ಬರುವ ವಿಚಾರವನ್ನು ನಿನಗೀಗಾಗಲೇ ತಿಳಿಸಿದ್ದೇನೆ.

ನಾವು ಹಾಕಿಕೊಂಡ ಯೋಜನೆಯಂತೆ ಕಲಬುರುಗಿಯಿಂದ ಬೆಳಗ್ಗೆ ೮-೩೦ ಗಂಟೆಗೆ ಇಲ್ಲಿಗೆ ಬಂದೆವು. ಬೀದರಿನಲ್ಲಿ ಕಲಿಯುತ್ತಿದ್ದ ನನ್ನ ಅಣ್ಣ ವಸಂತನು ನಮ್ಮನ್ನು ಸ್ವಾಗತಿಸಲು ಬಸ್ ನಿಲ್ದಾಣಕ್ಕೆ ಬಂದಿದ್ದನು. 'ಪ್ರವಾಸವು ಕ್ಷೇಮಕರವಾಗಿತ್ತೆ' ಎಂದು ವಿಚಾರಿಸಿ ಮಾತಿಗೆ ಪ್ರಾರಂಭಿಸಿದನು. ಅವನೂ ಸಹ ನಿನ್ನನ್ನು ನೆನಸದೆ ಇರಲಿಲ್ಲ.

ನಾವು ತಿಂಡಿ-ತಿನಿಸುಗಳನ್ನು ತಿನ್ನುವುದರಲ್ಲಿ, ಚಹಾ-ಕಾಫಿ ಕುಡಿಯುವುದರಲ್ಲಿ ವಿಶೇಷ ವೇಳೆಯನ್ನು ಕಳೆಯದೆ ಬೀದರ ಕೋಟೆಯನ್ನು ನೋಡಲು ಹೋದೆವು. ದಾರಿಯಲ್ಲಿ ತಂದೆಯವರು ಬೀದರ ನಗರದ ಇತಿಹಾಸವನ್ನು ಸ್ವಲ್ಪದರಲ್ಲಿ ವಿವರಿಸಿದರು. ನಿಜವಾಗಿಯೂ ಬೀದರ ನಗರ ಬಹಳ ಪ್ರಾಚೀನವಾದುದು. ಪುರಾಣಗಳಲ್ಲಿ ಇದು ವಿದುರನಗರವೆಂದು ಪ್ರಸಿದ್ಧವಾಗಿತ್ತು. ನಳ-ದಮಯಂತಿಯರ ಕಾಲದಲ್ಲಿಯ ವಿದರ್ಭನಗರವೇ ಈಗಿನ ' ಬೀದರ ' ಆಗಿದೆಯೆಂದು ನಂಬಿಕೆ. ಇಲ್ಲಿ ಶಾತವಾಹನ, ರಾಷ್ಟ್ರಕೂಟ, ಚಾಲುಕ್ಯ ಮುಂತಾದ ಕನ್ನಡ ರಾಜಮನೆತನದವರು ರಾಜ್ಯವಾಳಿದ್ದಾರೆ. ಹದಿನಾಲ್ಕನೆಯ ಶತಮಾನದಲ್ಲಿ ಬೀದರು ಮುಸ್ಲಿಮರ ಆಳ್ವಿಕೆಗೆ ಒಳಪಟ್ಟಿತು. ಹೀಗೆ ಬೀದರಿನ ಇತಿಹಾಸ ಬೆಳೆದಿದೆ.

ಬೀದರ ಕೋಟೆಯನ್ನು ಬಹಮನಿ ರಾಜ್ಯದ ಸುಲ್ತಾನ ಅಹಮ್ಮದ ಶಹ ಅಲ್ವಲಿ ಕಟ್ಟಿಸಿದನಂತೆ. ಅದಕ್ಕೂ ಪೂರ್ವದಲ್ಲಿ ಬೀದರಿನಲ್ಲಿ ಆಳಿದ ಕಾಕತೀಯ ರಾಜರು ಈ ಕೋಟೆಯ ಬುನಾದಿ ಹಾಕಿದ್ದರಂತೆ. ಇಷ್ಟು ವರುಷಗಳು ಗತಿಸಿದರೂ ಬೀದರ ಕೋಟೆಯ ಬಹುಭಾಗವು ಇನ್ನೂ ಸುಸ್ಥಿತಿಯಲ್ಲಿದೆ, ಕೋಟೆಯ ಹೊರಗಡೆ ಸುಮಾರು ಮೂವತ್ತು ಅಡಿಯ ಕಂದಕವಿದೆ. ತೋಪುಗಳನ್ನು ನಿಲ್ಲಿಸಲು ಎತ್ತರವಾದ ಹಾಗೂ ಗಟ್ಟಿಮುಟ್ಟಾದ ಬುರುಜುಗಳಿವೆ. ಇಲ್ಲಿಯ ಕೋಟೆಯ ಒಳಗಡೆ ನಾವು ಟಂಕಸಾಲೆ, ಆಯುಧಶಾಲೆ, ಸ್ನಾನಗೃಹ ಮತ್ತು ಕಾರಂಜಿಗಳನ್ನು ನೋಡಿದೆವು. ಹಿಂದಿನ ಕಾಲದಲ್ಲಿ ಇಲ್ಲಿ ಮಾಡಿದ ನೀರಿನ ವ್ಯವಸ್ಥೆಯನ್ನು ನೋಡಿ ಆಶ್ಚರಿಪಟ್ಟೆವು. ೧೫೦ ಅಡಿ ಎತ್ತರದ ಬಾವಿಯಿಂದ (ಸೈಫನ ತಂತ್ರದ ಆಧಾರದ ಮೇಲೆ) ಇಡೀ ಕೋಟೆಯ ಜನಕ್ಕೆಲ್ಲ ನೀರನ್ನು ಒದಗಿಸುತ್ತಿದ್ದರು. ಇಲ್ಲಿ ' ಸೋಲಾಬಂಬ ' ಎಂಬ ದೊಡ್ಡ ಮಸೀದಿ

ಯಿದೆ. ಸಭಾಗೃಹವು ಅತ್ಯಂತ ಸುಂದರವಾಗಿದೆ. ರಂಗಿನಮಹಲು ಕಲ್ಪನೆಗೆ ಸೊಗಸು. ಕೋಟೆಯ ಒಳಗಡೆ ಅನೇಕ ಗುಪ್ತಮಾರ್ಗಗಳಿವೆ.

ನಾವು ಕೋಟೆಯನ್ನು ನೋಡಿಕೊಂಡು ಮಹಮೂದ ಗವಾನನ ಪಾಠಶಾಲೆಯನ್ನು ನೋಡಲು ಹೋದೆವು. ಮಹಮೂದ ಗವಾನನ ಬಹಮನಿರಾಜ್ಯದ

ಮಹಮೂದ ಗವಾನ್ ವಿದ್ಯಾಲಯ, ಬೀದರ

ಬೀದರಿನ ಕೋಟೆ

ಪ್ರಸಿದ್ಧ ಪ್ರಧಾನ ಮಂತ್ರಿಯಾಗಿದ್ದನು. ಅವನು ಮುತ್ಸದ್ದಿಯೂ. ರಾಜಕಾರಣಿಯೂ ಆಗಿದ್ದಂತೆ ಶಿಕ್ಷಣಪ್ರೇಮಿಯೂ ಆಗಿದ್ದನು. ಈ ಪಾಠಶಾಲೆಯನ್ನು ಅವನು ಕ್ರಿ.ಶ. ೧೪೭೨ರಲ್ಲಿ ಕಟ್ಟಿಸಿದನು. ಮಹಮೂದ ಗವಾನನ ಈ ಪಾಠಶಾಲೆಯು ಅವನ ಬದುಕಿನ ಹೆಮ್ಮೆಯ ಸಾಧನೆಯೆಂದೇ ಹೇಳಬಹುದು. ಈ ವಿದ್ಯಾಲಯದ ಕಟ್ಟಡವು ಬಹಮನೀ ರಾಜ್ಯಗಳ ಕಟ್ಟಡಗಳಲ್ಲಿಯೇ ಅನುಪಮವಾಗಿದೆಯೆಂದು ಹೇಳುತ್ತಾರೆ. ಈ ಕಟ್ಟಡವನ್ನು ಕಟ್ಟಿಸಲು ಪರ್ಶಿಯಾ, ಇರಾಣ ಹಾಗೂ ಇನ್ನಿತರ ದೇಶಗಳಿಂದ ಅವನು ಕಲಾಕಾರರನ್ನು ಕರೆಸಿದ್ದನಂತೆ.

ಈ ಕಟ್ಟಡಕ್ಕೆ ಮೊದಲು ಎರಡು ಮಿನಾರಗಳಿದ್ದುವಂತೆ. ಈಗ ಒಂದು ಮಾತ್ರ ಉಳಿದಿದೆ. ಇನ್ನೊಂದು ಮಿನಾರವು ಸಿಡಿಲಿನ ಆಘಾತಕ್ಕೆ ಸಿಕ್ಕು ನೆಲಸಮವಾಯಿತಂತೆ. ಈಗಿರುವ ಸ್ತಂಭವು ೧೩೦ ಅಡಿ ಎತ್ತರವಾಗಿದೆ. ಸ್ತಂಭದ ತುದಿಯವರೆಗೆ ಏರಿ ಹೋಗಲು ಪಾವಟಿಗೆಗಳಿವೆ. ಈ ಪಾವಟಿಗೆಗಳನ್ನು ಏರಿ ಮೇಲೆ ಹೋಗಬೇಕಾದರೆ ನನಗೆ ಸಾಕುಸಾಕಾಯಿತು. ಈ ಕಟ್ಟಡದ ಮುಂಭಾಗದ ಗೋಡೆಯ ಮೇಲೆಲ್ಲ ಚೀನಿ ಮಣ್ಣಿನಲ್ಲಿ ಕಲಾಕುಸುರಿಯ ಸುಂದರ ಆಕೃತಿಗಳು ಕೆತ್ತಲ್ಪಟ್ಟಿವೆ. ಇಷ್ಟು ಕಾಲವಾದರೂ, ಗಾಳಿ, ಮಳೆ, ಬಿಸಿಲಿನ ಆಘಾತವನ್ನು ಸಹಿಸಿಯೂ ಸುಂದರವಾದ ಕುಸುರಿಯ ಕಲೆ ಮತ್ತು ಬಣ್ಣ ಹಾಗೆಯೇ ಉಳಿದುಕೊಂಡಿವೆ.

ಮಹಮೂದ ಗವಾನನ ಪಾಠಶಾಲೆಯನ್ನು ನೋಡಿಕೊಂಡು ನಾವು ಪ್ರಸಿದ್ಧ ಗುಹಾಂತರ ದೇವಾಲಯ 'ನರಸಿಂಹ ಝುರಣಿ'ಯನ್ನು ನೋಡಲು ಹೋದೆವು. ಇದು ಬೀದರದಿಂದ ಪೂರ್ವಕ್ಕೆ ಒಂದು ಮೈಲಿನ ಮೇಲೆ ಇದೆ. ಇಲ್ಲಿ ಶ್ರೀ ನರಸಿಂಹ ದೇವರ ದರ್ಶನ ಪಡೆಯಲು ಒಂದುವರೆ ಫರ್ಲಾಂಗಿನಷ್ಟು ದೂರ ಎದೆ ಎತ್ತರದವರೆಗಿನ ನೀರಿನಲ್ಲಿ ನಡೆದುಕೊಂಡು ಹೋಗಬೇಕು. ತಂದೆಯವರ ಕೈಯನ್ನು ಗಟ್ಟಿಯಾಗಿ ಹಿಡಿದುಕೊಂಡು ಒಳಗೆ ಹೋದೆ. ಇಲ್ಲಿ ಒಂದು ಆಶ್ಚರ್ಯಕರ ಸಂಗತಿ ಎಂದರೆ ಇಲ್ಲಿಯ ನೀರು ಸದಾಕಾಲ ಸಮಪಾತಳಿಯಲ್ಲಿಯೆ ಇರುತ್ತದಂತೆ. ಅಲ್ಲಿ ನಾವು ದೇವರಿಗೆ ಕಾಯಿ ಒಡೆಯಿಸಿ ಮಂಗಳಾರತಿ ಮಾಡಿಸಿ ಹೊರಬಂದೆವು.

ನರಸಿಂಹ ಝುರಣಿಯಿಂದ ನಾವು 'ನಾನಕ ಝುರಾ'ವನ್ನು ನೋಡಲು ತೆರಳಿದೆವು. ಇದು ಬೀದರದಿಂದ ದಕ್ಷಿಣಕ್ಕೆ ಒಂದು ಮೈಲು ದೂರದಲ್ಲಿದೆ. ಇದು ಸಿಕ್ಕರ ಪವಿತ್ರಸ್ಥಳ. ಹಿಂದಕ್ಕೆ ಇಲ್ಲಿ ಸಿಕ್ಕರ ಧರ್ಮದ ಸಂಸ್ಥಾಪಕರಾದ ಗುರು ನಾನಕರು ದಕ್ಷಿಣ ಭಾರತದ ತೀರ್ಥಯಾತ್ರೆ ಕೈಕೊಂಡಾಗ ಇಲ್ಲಿಗೆ ಬಂದಿದ್ದರಂತೆ. ಆಗ ಬೀದರಿನ ಜನ ನೀರಿನ ಅಭಾವದಿಂದ ಬಹಳ ಕಷ್ಟಕ್ಕೀಡಾಗಿದ್ದರಂತೆ. ಜನರ ಕಷ್ಟವನ್ನು ನೋಡಿ ಗುರು ನಾನಕರ ಮನಸ್ಸು ಕರಗಿತು. ಅವರು ದೇವರನ್ನು ಸ್ಮರಿಸಿ ಕಾಲಿನಿಂದ ಗುಡ್ಡದ ಬುಡದಲ್ಲಿರುವ ಕಲ್ಲೊಂದನ್ನು ಸರಿಸಿದರಂತೆ. ತತ್‌ಕ್ಷಣವೆ ಸಿಹಿನೀರಿನ ಝುರಿ ಚಿಮ್ಮತೊಡಗಿತು. ಅಂದಿನಿಂದ ಈ ಸ್ಥಳವು 'ನಾನಕ ಝುರಾ' ಎಂದು ಪ್ರಸಿದ್ಧವಾಗಿದೆ. ಇತ್ತೀಚೆಗೆ ಇಲ್ಲಿನ ಸಿಕ್ಕರು ದೊಡ್ಡದೊಂದು ಗುರುದ್ವಾರವನ್ನು ಕಟ್ಟಿದ್ದಾರೆ. ನಾನಕ ಝುರಾ ಒಳ್ಳೇ ಪ್ರಶಾಂತ ಸ್ಥಳವಾಗಿದೆ. ದಣಿದು ಬಂದವರಿಗೆ ತಣಿವನ್ನು ನೀಡುತ್ತದೆ. ನಾನಕ ಝುರಾವನ್ನು ಪೂರ್ಣ ಸುತ್ತಾಡಿ ನೋಡಿದೆವು. ಬಳಿಕ ಇಲ್ಲಿಂದ ಸಮೀಪದಲ್ಲಿಯೆ ಇರುವ 'ಪಾಪನಾಶಿನಿ' ಎಂಬ ಕ್ಷೇತ್ರವನ್ನು ನೋಡಲು ಹೋದೆವು.

ಪಾಪನಾಶಿನಿಯು ಪುರಾಣ ಪ್ರಸಿದ್ಧವಾದ ಕ್ಷೇತ್ರ. ಇಲ್ಲಿ ಬೃಹದಾಕಾರವಾದ ಶಿವಲಿಂಗವಿದೆ. ಪ್ರಸಿದ್ಧ ಸಂತರಾದ ಗಾಣಗಾಪುರದ ಶ್ರೀ ನರಸಿಂಹ ಸರಸ್ವತಿಯವರು ಬೀದರಕ್ಕೆ ಬಂದಾಗ ಇಲ್ಲಿ ಕುಳಿತು ತಪಸ್ಸು ಮಾಡಿದರಂತೆ. ಇಲ್ಲಿ ಅನೇಕ ಕಡೆಗಳಲ್ಲಿ ನೀರಿನ ಝುರಿಗಳಿವೆ. ಪಾಪನಾಶಿನಿ ಎಂಬ ಒಂದು ಕುಂಡವಿದೆ. ಭಕ್ತರು ಇಲ್ಲಿಯೆ ಸ್ನಾನಮಾಡಿ ಶಿವಲಿಂಗದ ದರ್ಶನ ಪಡೆಯುತ್ತಾರೆ.

ಇಷ್ಟು ಹೊತ್ತಿಗೆ ಬಿಸಿಲು ಬಹಳ ಬಲಿದಿತ್ತು. ಇನ್ನೂ ಅನೇಕ ನೋಡುವ ಸ್ಥಳಗಳಿದ್ದವು. ಆದರೆ ಊರಲ್ಲಿ ಅಣ್ಣ ವಸಂತನು ನಮಗಾಗಿ ಕಾಯುತ್ತಿದ್ದನು. ನಾವು ಪಾಪನಾಶಿನಿಯಿಂದ ನೇರವಾಗಿ ಊರ ಕಡೆಗೆ ಹೋದೆವು.

ಪರಿಮಳಾ. ಇಂದಿನ ಈ ಸುತ್ತಾಟದಲ್ಲಿ ನಿನ್ನ ನೆನಪು ಹೆಜ್ಜೆಹೆಜ್ಜೆಗೂ ಆಯಿತು. ಬೀದರಿನ ಭವ್ಯವಾದ ಕೋಟೆ. ನರಸಿಂಹ ಝರಣೆಯ ನಿಸರ್ಗ ಸೌಂದರ್ಯ. ನಾನಕ ಝರಾದ ಭವ್ಯ ಗುರುದ್ವಾರ. ಪಾಪನಾಶಿನಿಯ ಸುಂದರ ಪರಿಸರಗಳನ್ನು ನೀನು ಒಮ್ಮೆಯಾದರೂ ಅವಶ್ಯವಾಗಿ ನೋಡಲೇ ಬೇಕು.

ಇತಿ ನಿನ್ನ ಒಲುಮೆಯ ಗೆಳತಿ,
ಮಂಗಳಾ.

ಅಭ್ಯಾಸ

೧. ಕಠಿನ ಪದಗಳ ಅರ್ಥ :—

ಆಸಕ್ತಿ=ಒಲವು, ಅಭಿರುಚಿ : ಸ್ವಾಗತಿಸು=ಬರಮಾಡಿಕೊಳ್ಳು : ದಿವ್ಯ=ಶ್ರೇಷ್ಠ : ಭವ್ಯ=ಅದ್ಭುತ, ಸುಂದರ : ಗತಿಸು=ಕಳೆ. ಆಗಿಹೋಗು : ಟಂಕಸಾಲೆ=ನಾಣ್ಯಗಳನ್ನು ತಯಾರಿಸುವ ಸ್ಥಳ ; ಮುತ್ಸದ್ದಿ=ಚತುರ. ಚಾಣಾಕ್ಷ ; ಹೆಮ್ಮೆ=ಅಭಿಮಾನ : ಸಾಧನೆ=ಮಾಡಿದ ಕೆಲಸ : ಅನುಪಮ=ಶ್ರೇಷ್ಠ, ಹೋಲಿಕೆ ಇಲ್ಲದ್ದು ; ಆಘಾತ=ಹೊಡೆತ, ಪೆಟ್ಟು : ರಮ್ಯ=ಸುಂದರ ; ತತ್‌ಕ್ಷಣ=ಕೂಡಲೆ ; ಬಲಿ=ಹೆಚ್ಚಾಗು. ಬಲವಾಗು : ಪರಿಸರ=ವಾತಾವರಣ.

೨. (i) ಮಂಗಳೆಯು ಬೀದರಿನಲ್ಲಿ ಯಾವ ಯಾವ ಸ್ಥಾನಗಳನ್ನು ನೋಡಲು ಯೋಚಿಸಿದ್ದಳು ?

(ii) ಬೀದರಿನಲ್ಲಿ ಮಂಗಳಾ ಮತ್ತು ಅವಳ ತಂದೆಯನ್ನು ಸ್ವಾಗತಿಸಲು ಯಾರು ಬಂದಿದ್ದರು ?

(iii) ಮಹಮೂದ ಗವಾನನು ಯಾರು ?

(iv) ಮಹಮೂದ ಗವಾನನು ಪಾಠಶಾಲೆಯನ್ನು ಎಂದು ಕಟ್ಟಿಸಿದನು ?

(v) ಪಾಠಶಾಲೆಯ ಕಟ್ಟಡಕ್ಕಾಗಿ ಕಲಾಕಾರರನ್ನು ಯಾವ ದೇಶದಿಂದ ಕರೆಸಿದ್ದರು ?

(vi) ನರಸಿಂಹ ದೇವರ ದರ್ಶನಕ್ಕೆ ಹೋಗುವ ಮಾರ್ಗ ಹೇಗಿದೆ ?

(vii) ನೀರನ್ನು ತರಿಸಲು ಗುರು ನಾನಕರು ಏನು ಮಾಡಿದರು ?

(viii) ಪಾಪನಾಶಿನಿಯಲ್ಲಿ ಯಾರು ತಪಸ್ಸು ಮಾಡಿದರು ?

೩. ಕೆಳಗಿನ ವಾಕ್ಯಗಳಲ್ಲಿ ಕರ್ತೃ, ಕರ್ಮ, ಕ್ರಿಯಾಪದಗಳನ್ನು ತೋರಿಸಿರಿ. ಕೆಲವು ವಾಕ್ಯಗಳಲ್ಲಿ ಕರ್ಮಪದವು ಸ್ಪಷ್ಟವಾಗಿ ಇಲ್ಲ. ಅವಾವುವು ? ಗುರುತಿಸಿ :—

(i) ನಾನು ನಿನಗೆ ಈ ಮೊದಲೊಂದು ಓಲೆ ಬರೆದಿದ್ದೆ.

(ii) ನಿನ್ನ ನೆನಪು ಹೆಚ್ಚೆಹೆಚ್ಚೆಗೂ ಆಯಿತು.

(iii) ಪಾಪನಾಶಿನಿ ಕುಂಡದಲ್ಲಿ ಸ್ನಾನ ಮಾಡಿ ಭಕ್ತರು ದೇವರ ದರ್ಶನಕ್ಕೆ ಹೋಗುತ್ತಾರೆ.

(iv) ನಾನಕ ಝುರಾದಲ್ಲಿ ಸಿಕ್ಕರು ಗುರುದ್ವಾರವನ್ನು ಕಟ್ಟಿದ್ದಾರೆ.

(v) ಮಹಮೂದ ಗವಾನನು ಬೀದರ ಕೋಟೆಯನ್ನು ಕಟ್ಟಿಸಿದನು.

(vi) ಜನರ ಕಷ್ಟವನ್ನು ನೋಡಿ ಗುರು ನಾನಕರ ಮನ ಕರಗಿತು.

೪. ನೀವು ಸಂದರ್ಶಿಸಿದ ಐತಿಹಾಸಿಕ ಸ್ಥಳದ ಬಗ್ಗೆ ನಿಮ್ಮ ತಂದೆಯವರಿಗೆ ಓಲೆ ಬರೆಯಿರಿ.

---

೨೩. ಭಾರತರತ್ನ ಸಿ. ವಿ. ರಾಮನ್

ಸಾಹಿತ್ಯ ಪ್ರಪಂಚದಲ್ಲಿ ರವೀಂದ್ರನಾಥ ಠಾಕೂರರವರು ಭಾರತದ ಕೀರ್ತಿ ಪತಾಕೆಯನ್ನು ಬಾನೆತ್ತರಕ್ಕೆ ಹಾರಿಸಿದರು. ಅದರಂತೆ ವಿಜ್ಞಾನಕ್ಷೇತ್ರದಲ್ಲಿ ಭಾರತದ ಕೀರ್ತಿಯನ್ನು ವಿಶ್ವದಾದ್ಯಂತ ಬೆಳಗಿಸಿದವರು ಸರ್ ಸಿ. ವಿ. ರಾಮನ್ನರು. ೧೯೩೦ ರಲ್ಲಿ ರಾಮನ್ನರಿಗೆ ಅವರ ವಿಜ್ಞಾನ ಸಂಶೋಧನಕ್ಕಾಗಿ ನೊಬೆಲ್ ಬಹುಮಾನ ದೊರಕಿತು. ಅಲ್ಲಿಯವರೆಗೆ ಭಾರತದಲ್ಲಿ ಮಾತ್ರವಲ್ಲ, ಇಡಿ ಏಸಿಯಾ ಖಂಡದಲ್ಲಿಯೆ ಯಾವ ವಿಜ್ಞಾನಿಗೂ ನೊಬೆಲ್ ಬಹುಮಾನ ದೊರೆತಿರಲಿಲ್ಲ. ಭಾರತೀಯ ವಿಜ್ಞಾನಪಿತಾಮಹರೆಂದು ಹೆಸರಾದ ಸಿ. ವಿ. ರಾಮನ್ನರಿಗೆ ದೇಶಕ್ಕೆ ಅವರು ಸಲ್ಲಿಸಿದ ಅಪಾರ ಸೇವೆಗಾಗಿ ಕೇಂದ್ರ ಸರಕಾರವು ೧೯೫೪ ರಲ್ಲಿ ' ಭಾರತರತ್ನ ' ಎಂಬ ಪ್ರಶಸ್ತಿಯನ್ನಿತ್ತು ಗೌರವಿಸಿತು.

ಕಾವೇರಿ ನದಿಯ ತೀರದಲ್ಲಿ ತಿರುಚನಾಪಳ್ಳಿ ಎಂಬ ಊರು. ಅಲ್ಲಿಯ ಶಾಲೆಯೊಂದರಲ್ಲಿ ಚಂದ್ರಶೇಖರ ಅಯ್ಯರ್ ಎಂಬುವರು ಉಪಾಧ್ಯಾಯರಾಗಿದ್ದರು. ಅವರ ಪತ್ನಿ ಪಾರ್ವತಿ ಅಮ್ಮಾಳ್. ಈ ದಂಪತಿಗಳಿಗೆ ಕ್ರಿ.ಶ. ೧೮೮೮ ರಲ್ಲಿ ನವಂಬರ ದಿನಾಂಕ ಏಳರಂದು ಗಂಡು ಮಗುವಾಯಿತು. ಮಗುವಿಗೆ ವೆಂಕಟರಾಮನ್ ಎಂದು ಹೆಸರಿಟ್ಟರು. ತಂದೆಯ ಹೆಸರನ್ನೂ ಸೇರಿಸಿದರೆ

ಮಗುವಿನ ಪೂರ್ಣ ಹೆಸರು ಚಂದ್ರಶೇಖರ ವೆಂಕಟರಾಮನ್ ಅಥವಾ ಸಿ. ವಿ. ರಾಮನ್ ಎಂದಾಗುತ್ತದೆ.

ತಂದೆ ಚಂದ್ರಶೇಖರ ಅಯ್ಯರವರು ಭೌತವಿಜ್ಞಾನ ಮತ್ತು ಗಣಿತದಲ್ಲಿ ದೊಡ್ಡ ಪಂಡಿತರಾಗಿದ್ದರು. ಆದ್ದರಿಂದ ಬಾಲಕ ವೆಂಕಟರಾಮನ್ನನಿಗೆ ವಿಜ್ಞಾನ ವಿಷಯದಲ್ಲಿ ಆಸಕ್ತಿ ಬಳುವಳಿಯಾಗಿಯೆ ಬಂದಿತು. ಬಾಲಕ ವೆಂಕಟರಾಮನ್ನನು ಶಾಲೆಯಲ್ಲಿ ಒಳ್ಳೇ ಮೇಧಾವಿ ವಿದ್ಯಾರ್ಥಿಯೆನಿಸಿಕೊಂಡನು. ಪ್ರತಿಯೊಂದು ತರಗತಿಯಲ್ಲಿ ಮೊದಲಿಗನಾಗಿ ಉತ್ತೀರ್ಣನಾದನು. ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನಿಂದ ಬಿ. ಎ. ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣನಾದನು. ಆ ವರುಷ ಬಿ. ಎ. ಪರೀಕ್ಷೆಯಲ್ಲಿ ಪ್ರಥಮ ವರ್ಗದಲ್ಲಿ ಪಾಸಾದ ಏಕೈಕ ವಿದ್ಯಾರ್ಥಿ ವೆಂಕಟರಾಮನ್. ಮುಂದೆ ಭೌತವಿಜ್ಞಾನವನ್ನು ತೆಗೆದುಕೊಂಡು ಎಂ. ಎ. ಪಾಸಾದನು. ವೆಂಕಟರಾಮನ್ನನು ವಿದ್ಯಾರ್ಥಿಯಾಗಿದ್ದಾಗಲೆ ಸಂಶೋಧನಾತ್ಮಕವಾದ ವೈಜ್ಞಾನಿಕ ಲೇಖನವೊಂದನ್ನು ಬರೆದು ಎಲ್ಲರನ್ನೂ ಅಚ್ಚರಿಗೊಳಿಸಿದನು. ವಿದ್ಯಾರ್ಥಿ ರಾಮನ್ನನ ಆ ವೈಜ್ಞಾನಿಕ ಲೇಖನವನ್ನು ಇಂಗ್ಲೆಂಡಿನ ಪ್ರಖ್ಯಾತ ವಿಜ್ಞಾನ ಪತ್ರಿಕೆಯು ಪ್ರಕಟಿಸಿತು.

ಹತ್ತೊಂಬತ್ತನೆಯ ವಯಸ್ಸಿಗೆ ರಾಮನ್ನರಿಗೆ ದೊಡ್ಡ ಸರಕಾರಿ ಹುದ್ದೆ ಸಿಕ್ಕಿತು. ಕಲಕತ್ತೆಯಲ್ಲಿ ಹಣಕಾಸಿನ ವಿಭಾಗದಲ್ಲಿ ಅಸಿಸ್ಟಂಟ್ ಅಕೌಂಟೆಂಟ್ ಜನರಲ್ ಆಗಿ ನೇಮಕಗೊಂಡರು. ಮೊದಲಿನಿಂದಲೂ ವಿಜ್ಞಾನ ವಿಷಯದಲ್ಲಿ ಆಸಕ್ತಿ ತಳೆದಿದ್ದ ರಾಮನ್ನರು ಆ ನೌಕರಿಯಲ್ಲಿ ಬಹಳ ದಿನ ಉಳಿಯಲಿಲ್ಲ. ಅದೇ ಕಾಲಕ್ಕೆ ಕಲಕತ್ತೆಯಲ್ಲಿ ವಿಜ್ಞಾನದ ಕಾಲೇಜು ಪ್ರಾರಂಭವಾಯಿತು. ಅಲ್ಲಿ ರಾಮನ್ನರು ಭೌತವಿಜ್ಞಾನ ಪ್ರಾಧ್ಯಾಪಕರಾಗಿ ಸೇರಿಕೊಂಡರು. ವಿದ್ಯಾರ್ಥಿಗಳಿಗೆ ಪಾಠ ಹೇಳುವುದರಲ್ಲಿ ಮತ್ತು ವೈಜ್ಞಾನಿಕ ಪ್ರಯೋಗ ಹಾಗೂ ಸಂಶೋಧನೆಗಳಲ್ಲಿ ಸದಾ ನಿರತರಾಗಿರುತ್ತಿದ್ದರು. ಪ್ರಯೋಗಶಾಲೆಯಲ್ಲಿ ಸಂಶೋಧನೆ ಮಾಡುತ್ತ ಕುಳಿತರೆಂದರೆ ಊಟ, ನಿದ್ದೆ, ನೀರಡಿಕೆಗಳನ್ನೂ ಸಹ ಮರೆಯುತ್ತಿದ್ದರು. ಒಂದೊಂದು ಸಲ ಬೆಳಗಿನ ಜಾವದವರೆಗೂ ಸಂಶೋಧನೆ ನಡೆಯುತ್ತಿತ್ತು. ಸಮಯವನ್ನು ಅವರು ಎಂದೂ ವ್ಯರ್ಥವಾಗಿ ಕಳೆಯುತ್ತಿದ್ದಿಲ್ಲ.

ಒಂದು ಸಲ ಲಂಡನ್ ನಗರದಲ್ಲಿ ಬ್ರಿಟಿಶ್ ಸಾಮ್ರಾಜ್ಯದ ವಿಶ್ವವಿದ್ಯಾನಿಲಯಗಳ ಸಭೆ ಜರುಗಿತು. ಆ ಸಭೆಗೆ ರಾಮನ್ನರು ಕಲಕತ್ತೆಯ ವಿಶ್ವವಿದ್ಯಾನಿಲಯದ ಪ್ರತಿನಿಧಿಯಾಗಿ ಹೋಗಿದ್ದರು. ಅಲ್ಲಿಯ ಜನರು ರಾಮನ್ನರ

ವಿಜ್ಞಾನಪ್ರತಿಭೆಯಿಂದ ಅತ್ಯಂತ ಪ್ರಭಾವಿತರಾದರು. ಇಂಗ್ಲೆಂಡಿನ ಬೇರೆ ಬೇರೆ ವಿಶ್ವವಿದ್ಯಾನಿಲಯಗಳಲ್ಲಿ ರಾಮನ್ನರು ಭಾಷಣಗಳನ್ನು ಮಾಡಬೇಕಾಯಿತ್ತು.

ಲಂಡನ್ನಿನಿಂದ ಸಮುದ್ರ ಮಾರ್ಗವಾಗಿ ಭಾರತಕ್ಕೆ ಹೊರಟಾಗ, ಒಂದು ದಿನ ರಾಮನ್ನರು ಹಡಗಿನ ಮೇಲಟ್ಟದಲ್ಲಿ ಕುಳಿತು ವಿಶಾಲ ಸಮುದ್ರದ ಸೌಂದರ್ಯವನ್ನು ನೋಡುವುದರಲ್ಲಿ ಮಗ್ನರಾಗಿದ್ದರು. ಸಮುದ್ರದ ಕಡುನೀಲಿ ಬಣ್ಣವು ಅವರ ತಲೆಯಲ್ಲಿ ಹೊಸ ವಿಚಾರತರಂಗಗಳನ್ನು ಎಬ್ಬಿಸಿತು. " ಆಕಾಶದ ನೀಲಿ ಬಣ್ಣವೆ ಪ್ರತಿಫಲನಗೊಂಡು ಈ ಬಣ್ಣ ಬಂದಿತೆ ? ಪ್ರತಿಫಲಿಸಿದ ಬೆಳಕಿಲ್ಲದಿದ್ದರೂ ನೀಲಿ ಬಣ್ಣ ಉಳಿಯುವುದೇಕೆ ? ಸಮುದ್ರದಲ್ಲಿ ದೊಡ್ಡ ತೆರೆಗಳು ಎದ್ದಾಗಲೂ ನೀಲಿ ಬಣ್ಣವೇ ಕಾಣುವುದಲ್ಲ ? ಏಕೆ ? ಎಂದು ಯೋಚಿಸಹತ್ತಿದರು. ಹೀಗೆ ಯೋಚಿಸುತ್ತಿದ್ದಂತೆಯೇ ನೀರಿನ ಅಣುಗಳು ಸೂರ್ಯನ ಬೆಳಕನ್ನು ಚದುರಿಸಿ ನೀಲಿ ಬಣ್ಣವನ್ನು ಹೊರಗೆಡವಿರಬಹುದೆಂಬ ವಿಚಾರ ರಾಮನ್ನರಿಗೆ ಹೊಳೆಯಿತು. ಕಲಕತ್ತೆಗೆ ಬಂದವರೇ ಇದರ ಬಗ್ಗೆ ಪ್ರಯೋಗ ನಡೆಸಿದರು. ತಮ್ಮ ಪ್ರಯೋಗದಿಂದ ಕಂಡು ಬಂದ ಸಂಗತಿಗಳನ್ನೆಲ್ಲ ಬರೆದು ಲಂಡನ್ನಿನ ವೈಜ್ಞಾನಿಕ ಸಂಸ್ಥೆಗೆ ಕಳಿಸಿದರು. ಈ ವಿಜ್ಞಾನ ಸಂಸ್ಥೆಯವರು ರಾಮನ್ನರ ವೈಜ್ಞಾನಿಕ ಪಾಂಡಿತ್ಯವನ್ನು ಮೆಚ್ಚಿ ತಮ್ಮ ಸಂಸ್ಥೆಯ ಸದಸ್ಯ(ಫೆಲೊ) ನನ್ನಾಗಿ ಮಾಡಿಕೊಂಡರು. ಅದು ನಿಜವಾಗಿಯೂ ಬಹು ದೊಡ್ಡಗೌರವವಾಗಿತ್ತು.

ಇದಾದ ನಂತರ ರಾಮನ್ನರು ಬೆಳಕಿನ ಬಗ್ಗೆ ದೀರ್ಘಕಾಲ ಪ್ರಯೋಗ ನಡೆಸಿದರು. ಬೆಳಕಿನ ಬಗ್ಗೆ ಹೊಸ ತತ್ತ್ವವೊಂದನ್ನು ಕಂಡುಹಿಡಿದರು. ಮುಂದೆ ಅದೇ 'ರಾಮನ್‌ಪರಿಣಾಮ'ವೆಂದು ವಿಶ್ವವಿಖ್ಯಾತವಾಯಿತು. ಅವರು ಈ ಬೆಳಕಿನ ಬಗ್ಗೆ ಮಾಡಿದ ಹೊಸ ಸಂಶೋಧನೆಯು ಜಗತ್ತಿನ ವಿಜ್ಞಾನಿಗಳ ಗಮನವನ್ನು ಸೆಳೆಯಿತು. ಇದರಿಂದ ರಾಮನ್ನರಿಗೆ ಜಗತ್ತಿನಲ್ಲಿ ವಿಜ್ಞಾನಿಯೊಬ್ಬನಿಗೆ ಸಿಗಬಹುದಾದ ಅತಿ ದೊಡ್ಡದಾದ ನೊಬೆಲ್ ಬಹುಮಾನ ದೊರೆಯಿತು.

೧೯೩೩ರಲ್ಲಿ ರಾಮನ್ನರು ಬೆಂಗಳೂರಿಗೆ ತಾತಾ ವಿಜ್ಞಾನಮಂದಿರದ ನಿರ್ದೇಶಕರಾಗಿ ಬಂದರು. ಧ್ವನಿಯ ಬಗ್ಗೆ ಸುದೀರ್ಘ ಪ್ರಯೋಗ ನಡೆಸಿ ಹೊಸ ಸಿದ್ಧಾಂತವನ್ನು ಕಂಡು ಹಿಡಿದರು. ನಾಗೇಂದ್ರನಾಥ ಎಂಬ ವಿಜ್ಞಾನಿಯು ರಾಮನ್ನರ ಈ ಧ್ವನಿಯ ಸಿದ್ಧಾಂತದ ಸಂಶೋಧನೆಯ ಕಾರ್ಯದಲ್ಲಿ ನೆರವಾಗಿದ್ದನು. ಆದ್ದರಿಂದ ಧ್ವನಿಯ ಈ ಸಿದ್ಧಾಂತವನ್ನು ' ರಾಮನ್–ನಾಥ ಸಿದ್ಧಾಂತ ' ಎಂದು ಕರೆಯಲಾಯಿತು.

ರಾಮನ್ನರಿಗೆ ಪ್ರಾಚೀನವಾದ, ಹಿರಿದಾದ, ನಮ್ಮ ದೇಶಕ್ಕೆ ತಕ್ಕುದಾದ ಸಂಶೋಧನ ಕೇಂದ್ರವೊಂದನ್ನು ಸ್ಥಾಪಿಸಬೇಕೆಂಬ ಬಹಳ ದಿನಗಳ ಆಸೆಯಿತ್ತು. ರಾಮನ್ನರ ಈ ಯೋಜನೆಗೆ ನಮ್ಮ ರಾಜ್ಯ ಸರಕಾರವು ಬೆಂಗಳೂರಿನಲ್ಲಿ ಇಪ್ಪತ್ತು ನಾಲ್ಕು ಎಕರೆ ಭೂಮಿಯನ್ನು ಕೊಟ್ಟಿತು. ರಾಮನ್ನರು ತಮ್ಮ ಸ್ವಂತದ ಆಸ್ತಿಯೆಲ್ಲವನ್ನೂ ಈ ಸಂಶೋಧನ ಮಂದಿರಕ್ಕಾಗಿ ಕೊಟ್ಟರು. ಇದು 'ರಾಮನ್ ಸಂಶೋಧನಮಂದಿರ'ವೆಂದು ಹೆಸರಾಗಿದೆ. ಇದು ಬೆಂಗಳೂರಿನ ತಾತಾ ಇನ್ಸ್ಟಿಟ್ಯೂಟಿನ ಬಳಿ ಇದೆ.

ವಿಜ್ಞಾನಸಂಸ್ಥೆಗಳನ್ನು ಕಟ್ಟಿ, ವಿಜ್ಞಾನಪತ್ರಿಕೆಗಳನ್ನು ಪ್ರಕಟಿಸಿ, ತರುಣ ವಿಜ್ಞಾನಿಗಳಿಗೆ ಮಾರ್ಗದರ್ಶನ ಮಾಡಿ, ಭಾರತದಲ್ಲಿ ವಿಜ್ಞಾನಪರಂಪರೆಗೆ ತಳಹದಿ ಹಾಕಿದ ಈ ವಿಜ್ಞಾನಪಿತಾಮಹನನ್ನು, ವಿಜ್ಞಾನಋಷಿಯನ್ನು ಪಡೆದ ಭಾರತ ಧನ್ಯ.

ಅಭ್ಯಾಸ

೧. ಕಠಿನ ಪದಗಳ ಅರ್ಥ :—

ಬಾನು = ಆಕಾಶ ; ವಿಶ್ವ = ಜಗತ್ತು ; ಪಿತಾಮಹ = ಮೂಲಪುರುಷ (ತಾತ) ; ಅಚ್ಚರಿ = ಆಶ್ಚರ್ಯ ; ಆಕಾಂಕ್ಷೆ = ಇಚ್ಛೆ ; ಆದ್ಯಂತ = ಎಲ್ಲೆಡೆ (ಮೊದಲಿನಿಂದ ಕೊನೆಯವರೆಗೆ); ಅಪಾರ = ಬಹಳ (ಕೊನೆಯಿಲ್ಲದ) ; ಮಗ್ನ = ತನ್ಮಯ, ನಿರತ ; ತರಂಗ = ಅಲೆ ; ಅನ್ವೇಷಕ = ಹುಡುಕುವವ ; ನಿರ್ದೇಶಕ = ಮೇಲ್ವಿಚಾರಕ ; ತೀರ = ದಂಡೆ ; ಆಸಕ್ತಿ = ಒಲವು ; ಪುರಸ್ಕಾರ = ಬಹುಮಾನ.

೨. ಈ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :—

(೧) ರಾಮನ್ನರಿಗೆ ನೊಬೆಲ್ ಬಹುಮಾನ ಯಾವ ಕಾರಣಕ್ಕಾಗಿ ಸಿಕ್ಕಿತು ?

(೨) ನಮ್ಮ ಸರಕಾರವು ಅವರಿಗೆ ಕೊಟ್ಟ ಪ್ರಶಸ್ತಿ ಯಾವುದು ?

(೩) ಸಮುದ್ರದ ನೀಲಿ ಬಣ್ಣವನ್ನು ಕಂಡು ರಾಮನ್ನರಿಗೆ ಹೊಳೆದ ವಿಚಾರಗಳಾವುವು ?

(೪) ಧ್ವನಿಯ ಸಿದ್ಧಾಂತದ ಸಂಶೋಧನೆಯಲ್ಲಿ ರಾಮನ್ನರಿಗೆ ಯಾರು ನೆರವಾದರು?

(೫) ರಾಮನ್ನರನ್ನು ನಾವು ವಿಜ್ಞಾನಪಿತಾಮಹರೆಂದು ಕರೆಯಲು ಕಾರಣವೇನು?

೩. ಕೆಳಗಿನ ಶಬ್ದಗಳನ್ನು ನಿಮ್ಮ ವಾಕ್ಯಗಳಲ್ಲಿ ಉಪಯೋಗಿಸಿರಿ :—

ಆಸಕ್ತಿ, ಪುರಸ್ಕಾರ, ಅಪಾರ, ತೀರ.

---

೨೪. ಒಗಟುಗಳು

ಹಿಂದಿನ ಕಾಲದಲ್ಲಿ ಮನೆಯಲ್ಲಿ ದೊಡ್ಡವರು ಮಕ್ಕಳ ಜಾಣತನವನ್ನು ಹೆಚ್ಚಿಸುವುದಕ್ಕಾಗಿ ಅನೇಕ ಉಪಾಯಗಳನ್ನು ಕಂಡು ಹಿಡಿದು ಅವುಗಳನ್ನು ಉಪಯೋಗಿಸುತ್ತಿದ್ದರು. ಈ ಉಪಾಯಗಳು ಆಟದ ರೀತಿಯಲ್ಲಿದ್ದು ಕಾಲ ವಿನಿಯೋಗವೂ, ವಿದ್ಯಾಭ್ಯಾಸವೂ ಜೊತೆಜೊತೆಯಾಗಿಯೇ ನಡೆಯುತ್ತಿದ್ದವು. ಬಾಯಿಪಾಠ, ಶ್ಲೋಕ ಪೂರ್ತಿಮಾಡುವುದು, ಒಂದು ಪದವನ್ನು ಹೇಳಿದರೆ ಆ ಪದವು ಬರುವ ಪದ್ಯವನ್ನು ಪೂರ್ತಿ ಹೇಳುವುದು, ಕತೆ ಹೇಳುವುದು, ಪುರಾಣ ಕಥೆಗಳಲ್ಲಿ ಬರುವ ವ್ಯಕ್ತಿಗಳ ಸಂಬಂಧವನ್ನು ಹೇಳುವುದು—ಇವೆಲ್ಲ ಆ ಉಪಾಯಗಳಲ್ಲಿ ಕೆಲವು. ಒಗಟು ಬಿಡಿಸುವುದು ಅವುಗಳಲ್ಲಿ ಮುಖ್ಯವಾದುದು.

ಒಗಟು ಎಂದರೆ ಕೇಳಿದೊಡನೆ ಸುಲಭವಾಗಿ ಅರ್ಥವಾಗದ ರೀತಿಯಲ್ಲಿರುವ ಜಾಣ್ಮೆಯ ನುಡಿಗಳು. ಚೆನ್ನಾಗಿ ಪರಿಶೀಲಿಸಿದರೆ ಸುಂದರವಾದ ಅರ್ಥ ಆದರಿಂದ ಹೊರ ಹೊಮ್ಮುತ್ತದೆ. ಇದನ್ನು ಸಮಸ್ಯೆ ಎಂದು ಬೇಕಾದರೂ ಕರೆಯಬಹುದು.

ಈಗಲೂ ಕೆಲವು ಮನೆಗಳಲ್ಲಿ ಒಗಟುಗಳನ್ನು ಹೇಳುವುದು, ಬಿಡಿಸುವುದು—ಈ ಆಟ ನಡೆಯುತ್ತದೆ. ಹೆಣ್ಣುಮಕ್ಕಳು ಒಟ್ಟು ಸೇರಿದಾಗ ಇಂಥ ಒಗಟು ಬಿಡಿಸುವ ಆಟ ಹೆಚ್ಚು. ಒಬ್ಬ ಬಾಲಕಿ 'ಮರದೊಳಗೆ ಮರ ಹುಟ್ಟಿ ಮರ ಚಿತ್ರ ಕಾಯಾಗಿ ತಿನ್ನಬಾರದ ಹಣ್ಣು ಬಹು ರುಚಿ' ಎಂದರೆ ಮತ್ತೊಬ್ಬ ಹೆಣ್ಣು ಮಗಳು 'ಅದು ಮಗು' ಎಂದು ಉತ್ತರ ಹೇಳಿಬಿಡುತ್ತಾಳೆ. 'ಅಡವಿಯಲ್ಲಿ ಹುಟ್ಟಿದ ಗಿಡ ಗೋಪಾಲ, ನಿನಗೆ ಯಾರಿಟ್ಟರು ಸಾದಿನ ಚುಕ್ಕೆ' ಎಂದು ಒಬ್ಬಳು ಹೇಳಿದರೆ ಮತ್ತೊಬ್ಬಳು 'ಗುಲಗಂಜಿ' ಎಂದು ತಟಕ್ಕನೆ ಉತ್ತರವೀಯುತ್ತಾಳೆ. ಹೀಗೆ ಉತ್ತರ ಹೇಳುವಾಗ ಆ ಮಕ್ಕಳಿಗೆ ಒಗಟಿನ ಸೌಂದರ್ಯ ತಿಳಿದಿರುವುದಿಲ್ಲ. ಹಿರಿಯರು ಈ ಒಗಟಿಗೆ ಈ ಉತ್ತರ ಎಂದು ಹೇಳಿರುತ್ತಾರೆ. ಕುರುಡು ಪಾಠದಿಂದ ಈ ಮಕ್ಕಳು ಉತ್ತರ ಹೇಳಿಬಿಡುತ್ತಾರೆ. ಆದರೆ ಚೆನ್ನಾಗಿ ಪರಿಶೀಲನೆ ಮಾಡಿದರೆ ಒಗಟಿನ ಭಾಷೆಯ ಅಂದ ತಿಳಿದುಬರುತ್ತದೆ. ಮರ ಅಂದರೆ ಒಬ್ಬ ಹೆಣ್ಣು; ಮರದಲ್ಲಿ ಮರ ಹುಟ್ಟುವುದು ಎಂದರೆ ಆ ಹೆಣ್ಣು ಮಗುವನ್ನು ಹೆರುವುದು ಎಂದು ಅರ್ಥ. ಮರ ಚಿತ್ರಕಾಯಿ ಅಂದರೆ ಸಾಮಾನ್ಯವಾಗಿ ಕಾಯಿ ಹಾಗಿರುವುದಿಲ್ಲ. ಅಂಥ ಕಾಯಿ ಅದು. ಅದು ಹಣ್ಣು, ಆದರೂ ಅದನ್ನು

ತಿನ್ನುವುದಕ್ಕಾಗುವುದಿಲ್ಲ. ಎಷ್ಟೋ ವೇಳೆ ಮಕ್ಕಳನ್ನು 'ನಿನ್ನನ್ನು ತಿಂದು ಬಿಡುತ್ತೇನೆ' ಎಂದು ದೊಡ್ಡದಾಗಿ ಬಾಯಿ ಬಿಟ್ಟುಕೊಂಡು ಆಟವಾಡಿಸುವುದನ್ನು ನಾವು ನೋಡಬಹುದು. ಹೀಗೆ ಈ ಒಗಟುಗಳನ್ನು ಚೆನ್ನಾಗಿ ಪರಿಶೀಲನೆ ಮಾಡುವುದನ್ನು ನಾವು ಕಲಿಯಬೇಕು.

ಈ ಕೆಳಗೆ ಅಂಥ ಕೆಲವು ಒಗಟುಗಳಿವೆ. ಅವುಗಳನ್ನು ಪರಿಶೀಲಿಸಿ ಒಗಟುಗಳನ್ನು ಬಿಡಿಸಿ.

1. ಹತ್ತು ಸಾವಿರ ಕಣ್ಣು ನೆತ್ತಿಲಾದರು ಬಾಲ
ಹುತ್ತಿನ ಹುಳವ ಹಿಡಿಯುವುದು ಕವಿಜನರ
ವೊತ್ತವಿದ ಹೇಳಿ ಸರ್ವಜ್ಞ

2. ನೆತ್ತಿಯಲಿ ಉಂಬುವುದು ಸುತ್ತಲೂ ಸುರಿಸುವುದು
ಎತ್ತಿದರೆ ಎರಡು ಹೋಳಹುದು ಕವಿಗಳಿದ
ಕುತ್ತರವ ಹೇಳಿ ಸರ್ವಜ್ಞ

3. ಕಡೆ ಕಪ್ಪು ನಡು ಬಿಳಿದು ಉಡುವ ವಸ್ತ್ರವದಲ್ಲ
ಬಿಡದೆ ನೀರುಂಟು ಮಡುವಲ್ಲ ಕವಿಗಳೇ
ಬೆಡಗ ಪೇಳುವುದು ಸರ್ವಜ್ಞ

4. ಕಾಲಿಲ್ಲ ಕೊಂಬುಂಟು ಬಾಲದ ಪಕ್ಷಿಯದು
ಮೇಲೆ ಹಾರುವುದು ಹದ್ದಲ್ಲ ಕವಿಗಳಲಿ
ಬಾಲರಿದ ಹೇಳಿ ಸರ್ವಜ್ಞ

5. ಅರೆವ ಕಲ್ಲಿನ ಮೇಲೆ ಮರವು ಹುಟ್ಟುದ ಕಂಡೆ
ಮರದ ಮೇಲೆರಡು ಕರ ಕಂಡೆ ವಾಸನೆಯು
ಬರುತಿಹುದ ಕಂಡೆ ಸರ್ವಜ್ಞ

ಅಭ್ಯಾಸ

ಕಠಿನ ಪದಗಳ ಅರ್ಥ :—

ಕಾಲಹರಣ = ಹೊತ್ತು ಕಳೆಯುವುದು ; ಶ್ಲೋಕ = ಪದ್ಯ ; ಅರ್ಥರಹಿತ = ಅರ್ಥವಿಲ್ಲದಿರುವುದು ; ಹೊರಹೊಮ್ಮು = ಹೊರಬರು ; ಪರಿಶೀಲನೆ = ಚೆನ್ನಾಗಿ ಪರೀಕ್ಷಿಸುವುದು.

೨. 'ಕುರುಡುಪಾಠ' ಈ ನುಡಿಗಟ್ಟನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಉಪಯೋಗಿಸಿ ಮೂರು ವಾಕ್ಯಗಳನ್ನು ಬರೆಯಿರಿ.

೩. ಒಗಟಿಗೆ ಅರ್ಥ:—(1) ನವಿಲು (2) ಬೀಸುವ ಕಲ್ಲು (3) ಕಣ್ಣು (4) ಗಾಳಿಪಟ (5) ಸಾಣೆಕಲ್ಲು, ಗಂಧದ ಕೊರಡು.

---

೨೫. ವೀರಮಹಿಳೆ ಚಾಂದ್‌ಬೀಬಿ

ಚಾಂದ್‌ಬೀಬಿ ಒಬ್ಬ ಭಾರತೀಯ ವೀರಮಹಿಳೆ; ತನ್ನ ಉದಾತ್ತ ಚೇತನ ಹಾಗೂ ಉಜ್ಜ್ವಲ ಕಲಿತನಗಳಿಂದ ಭಾರತದ ಇತಿಹಾಸದಲ್ಲಿ ಮಿಂಚಿ ಮಾಯವಾದ ಸ್ತ್ರೀರತ್ನ. ಈಕೆಯ ಜೀವನ ಇಂದಿಗೂ ಅನುಕರಣೀಯ.

ನಾನೂರು ವರ್ಷಗಳ ಮುಂಚೆ ಅಂದರೆ ಕ್ರಿ.ಶ. ೧೫೪೭ ರಲ್ಲಿ ಅಹಮದ್‌ನಗರದ ಅರಸ ಹುಸೇನ್ ನಿಜಾಮ್ ಖಾನ ಪುತ್ರಿಯಾಗಿ ಚಾಂದ್‌ಬೀಬಿ ಜನ್ಮ ತಾಳಿದಳು. ಮುಸಲ್ಮಾನ ರಾಜಕುಮಾರಿಯಾದ ಈಕೆ 'ಪಂಜರದ ಗಿಳಿ'ಯಾಗಿ ಉಳಿಯದೆ ವೀರರಮಣಿಯಾಗಿ ಬೆಳೆದಳು. ಕುದುರೆಸವಾರಿ. ಕತ್ತಿಯ ವರಸೆ ಮೊದಲಾದ ವೀರೋಚಿತ ತರಬೇತಿಯನ್ನೂ ಪಡೆದಳು. . ಜನ್ಮತಃ ಚತುರಳೂ, ಚಾಣಾಕ್ಷಳೂ ಆಗಿದ್ದಳು. ತಂದೆಯ ಗರಡಿಯಲ್ಲಿ ಪಳಗಿ ರಾಜಕೀಯ ಮುತ್ಸದ್ದಿತನವನ್ನೂ ಮೈಗೂಡಿಸಿಕೊಂಡಳು. ಮುಂದೆ ಹದಿನೇಳರ ಹರಯದಲ್ಲಿ ಅಲಿ ಆದಿಲ್ ಖಾನನ್ನು ಮದುವೆಯಾದಳು; ತನ್ಮೂಲಕ ಅಂದು ದಕ್ಷಿಣ ಭಾರತದಲ್ಲೇ ದೊಡ್ಡ ರಾಜ್ಯವಾಗಿದ್ದ ಬಿಜಾಪುರದ ರಾಣಿಯಾದಳು. ಆದರೆ ಈಕೆ ಸರ್ವಸಾಮಾನ್ಯ ರಾಣಿಯರಂತೆ ಸುಖದ ಸುಪ್ಪತ್ತಿಗೆಯಲ್ಲೊರಗಿ ಐಷಾರಾಮದಲ್ಲಿ ಕಾಲ ಕಳೆಯಲಿಲ್ಲ. ಪತಿಯ ಮನಸ್ಸನ್ನು ಗೆದ್ದು ತನ್ನ ರಾಜಕೀಯ ಕೌಶಲ ಮೆರೆಸಲು ಅವಕಾಶ ಕಲ್ಪಿಸಿಕೊಂಡಳು. ರಾಜ್ಯದ ಆಡಳಿತ ಸಮಸ್ಯೆಗಳನ್ನು ಬಗೆಹರಿಸಲು ಸೂಕ್ತ ಸಲಹೆ–ಸೂಚನೆಗಳನ್ನಿತ್ತು ಪತಿಗೆ ನೆರವಾದಳು. ಕ್ರಮೇಣ ತನ್ನ ವ್ಯಕ್ತಿತ್ವದ ಪ್ರಭಾವ ಪತಿಯ ಮೇಲಷ್ಟೇ ಅಲ್ಲ, ಮಂತ್ರಿಮಂಡಲದ ಮೇಲೆಯೂ ಬೀಳುವಂತೆ ಮಾಡಿದಳು.

ಕ್ರಿ.ಶ. ೧೫೮೦ ರಲ್ಲಾದ ಪತಿಯ ಮರಣದೊಡನೆ ಚಾಂದ್‌ಬೀಬಿಯ ಮೇಲೆ ಇನ್ನೂ ಹೆಚ್ಚಿನ ಹೊಣೆ ಬಿದ್ದಿತು. ಪಟ್ಟವೇರಿದ ಸೋದರ ಸಂಬಂಧಿ ಎರಡನೆಯ ಇಬ್ರಾಹಿಂ ಆದಿಲ್ ಖಾನ ಪರವಾಗಿ ರಾಜ್ಯ ಕಾರಭಾರ ನಿರ್ವಹಿಸಲನುವಾದಳು. ತನ್ನ ನ್ಯಾಯನಿಷ್ಠುರತೆ ಹಾಗೂ ದಕ್ಷತೆಗಳಿಂದ ಪ್ರಜೆಗಳ ಪ್ರೀತಿ ಗಳಿಸಿದಳು.

ಇದನ್ನು ಸಹಿಸದ ಕೆಲ ಕಾರಸ್ಥಾನಿಗಳು ಈಕೆಯನ್ನು ಕ್ರಿ.ಶ. ೧೫೮೨ ರಲ್ಲಿ ಕೈದು ಮಾಡಿದರು. ಆದರೆ ಇವಳ ನೆರವಿಲ್ಲದೆ ರಾಜ್ಯದ ಕಾರಭಾರವನ್ನು ಸರಿದೂಗಿಸಿ ಕೊಂಡು ಹೋಗುವುದು ಅವರಿಗೆ ಸಾಧ್ಯವಾಗಲಿಲ್ಲ. ಅನಿವಾರ್ಯವಾಗಿ ಅವರು ಇವಳನ್ನು ಬಂಧಮುಕ್ತಗೊಳಿಸಿದರು.

ಸುಮಾರು ಇದೇ ಹೊತ್ತಿಗೆ ತವರು ಮನೆಯಾದ ಅಹಮದ್ ನಗರದಿಂದ ಈಕೆಗೆ ಕರೆ ಬಂದಿತು. ಆಗ ಆ ರಾಜ್ಯದಲ್ಲಿ ದ್ವೇಷ–ಅಸೂಯೆಗಳ ಕಿಡಿ ಹೊತ್ತಿದ್ದಿತು. ಅಧಿಕಾರಕ್ಕಾಗಿ ಕಚ್ಚಾಟ ನಡೆದಿದ್ದಿತು. ಅಣ್ಣ ಬರ್ಹಾನ್–ಉಲ್–ಮುಲ್ಕ್‌ನ ಮರಣಾನಂತರ ಗದ್ದುಗೆಯೇರಿದ್ದ ಯುವರಾಜ ಇಬ್ರಾಹಿಂ ಯುದ್ಧದಲ್ಲಿ ಮಡಿದಿದ್ದ : ರಾಜ್ಯದ ಪರಿಸ್ಥಿತಿ ತೀರಾ ಹದಗೆಟ್ಟಿದ್ದಿತು.

ಇಂಥ ಪರೀಕ್ಷಾ ಪ್ರಸಂಗದಲ್ಲಿ ಚಾಂದ್‌ಬೀಬಿ ರಾಜ್ಯರಕ್ಷಣೆಗೆ ಮುಂದಾದಳು. ಪ್ರಸಂಗಾವಧಾನದಿಂದ ಕಾರ್ಯ ಕೈಗೊಂಡಳು. ಇನ್ನೂ ಶಿಶುವಾಗಿದ್ದ ರಾಜ ಕುಮಾರನೇ ರಾಜನೆಂದೂ ಆತನ ಪರವಾಗಿಯೇ ತಾನು ಆಡಳಿತ ನಡೆಸುವು ದಾಗಿಯೂ ಸಾರಿದಳು.

'ಯಾರಾದರೇನು ? ಒಳ್ಳೆಯ ಆಡಳಿತವಾದರೆ ಸಾಕು' ಎಂದು ಕೆಲವು ಸರದಾರರು ಚಾಂದ್‌ಬೀಬಿಗೆ ಬೆಂಬಲ ನೀಡಲು ಮುಂಬಂದರು. ಆದರೆ ಇನ್ನು ಕೆಲವು ಮಹತ್ವಾಕಾಂಕ್ಷಿಗಳಾದ ಸರದಾರರು ಇದನ್ನು ಪ್ರತಿಭಟಿಸಿದರು.

'ಒಬ್ಬ ಸ್ತ್ರೀ ನಮ್ಮನ್ನು ಆಳುವುದೆಂದರೆ, ನಗೆಪಾಟಲು' ಎಂದು ಆಕೆಯ ಆಡಳಿತವನ್ನು ವಿರೋಧಿಸಿದರು.

ಹೀಗೆ ಸರದಾರರಲ್ಲಿಯೇ ಎರಡು ಗುಂಪುಗಳಾಗಿ ಘರ್ಷಣೆಗೆ ಎಡೆಯಾಯಿತು. ಶಾಂತಿಪ್ರಿಯ ಜನತೆಗೆ ಈ ಘರ್ಷಣೆ ಬೇಕಿರಲಿಲ್ಲ. ಆದರಿಂದ ಅವರು ಚಾಂದ್‌ಬೀಬಿಯನ್ನು ಬೆಂಬಲಿಸಿ. ವಿರೋಧಿಗಳ ಮೇಲೆ ಕೆಂಡಕಾರಿದರು. ಪರಿಣಾಮವಾಗಿ ವಿರೋಧಿಗಳು ಬಗ್ಗಲೇ ಬೇಕಾಯಿತು.

ಆದರೂ ವಿರೋಧಿಗಳ ಮುಖಂಡ ಸರದಾರ್ ಮಿಯಾ ಮಂಝು ಸುಮ್ಮ ನಾಗಲಿಲ್ಲ. ಹೆಡೆಮೆಟ್ಟಿದ ಹಾವಾಗಿ ಒಳಗೊಳಗೇ ಕುದಿದ ; ಸೇಡಿನ ಬುದ್ಧಿಯಿಂದ ಹಲ್ಲು ಮಸೆದ. ತಮ್ಮ ರಾಜ್ಯದ ಮೇಲೆ ದಂಡೆತ್ತಿ ಬರಲು ಮೊಗಲ್ ಚಕ್ರವರ್ತಿ ಅಕ್ಬರನನ್ನು ಗುಟ್ಟಾಗಿ ಆಮಂತ್ರಿಸಿದ. ಅಕ್ಬರನಿಗೋ ಅದೇ ಬೇಕಿತ್ತು. ತಕ್ಷಣವೆ ಆತ ತನ್ನ ಮಗ ಮುರಾದ್‌ನ ಮುಂದಾಳುತನದಲ್ಲಿ ದೊಡ್ಡ ಸೈನ್ಯವನ್ನೇ ರವಾನಿಸಿದ.

ಈ ಸಮಾಚಾರದ ಸುಳಿವು ಚಾಂದ್‌ಬೀಬಿಗೂ ಹತ್ತಿತು. ಅನಿವಾರ್ಯವಾಗಿ ಆಕೆಯೂ ಯುದ್ಧದ ಸಿದ್ಧತೆಗೆ ತೊಡಗಬೇಕಾಯಿತು. ತಮ್ಮ ಮಿತ್ರರಾಜ್ಯಗಳಾದ ಬಿಜಾಪುರ. ಗೋಲ್‌ಕೊಂಡಗಳಿಗೆ ಸಹಾಯ ಕೋರಿ ದೂತರನ್ನಟ್ಟಿದಳು. ಆದರೆ ಬೇಕಿದ್ದ ನೆರವು ಸಮಯಕ್ಕೆ ಸರಿಯಾಗಿ ಒದಗುವ ಲಕ್ಷಣ ತೋರಲಿಲ್ಲ. ಇದರಿಂದಾಗಿ ಆಕೆಗೆ ನಿಜವಾಗಿಯೂ ಭಯವಾಯಿತು. ರಾಜ್ಯದ. ಜನತೆಯ ಯೋಗಕ್ಷೇಮವೇ ಅದಕ್ಕೆ ಕಾರಣವಾಗಿದ್ದಿತು.

ಇಂಥ ಸಮಯದಲ್ಲಿ ಸರದಾರ್ ಮಿಯಾ ಮಂಝುವಿನ ದೇಶದ್ರೋಹದ ಗುಟ್ಟು ರಟ್ಟಾಯಿತು. ಇದನ್ನರಿತು ರಾಜ್ಯದ ಜನತೆ ಆತನ ಮೇಲೆ ಹಲ್ಲುಕಡಿಯ ಹತ್ತಿತ್ತು. ಆಗ ಮಿಯಾ ಮಂಝು ಗಾಬರಿಯಾದ. ಬರಬೇಕಿದ್ದ ಮೊಗಲ್ ಸೈನ್ಯವೂ ಸಮಯಕ್ಕೆ ಸರಿಯಾಗಿ ಬರಲಿಲ್ಲ. ಆತನಿಗೆ ದೊಡ್ಡ ಆಘಾತವೇ ಆಯಿತು.

ಇದೇ ಸಂಧಿ ಸಾಧಿಸಿ ಚಾಂದ್‌ಬೀಬಿ ಸರದಾರ್ ಮಿಯಾ ಮಂಝುವನ್ನು ತನ್ನಲ್ಲಿ ಬರಮಾಡಿಕೊಂಡಳು, ತುಂಬಾ ಮುತ್ಸದ್ದಿತನದಿಂದ ಆತನ ವಿಶ್ವಾಸ ಗಳಿಸಿದಳು. ಆದರೂ ಅತ್ಯಂತ ಜಾಗರೂಕತೆಯಿಂದ ಆಕೆ ಮುಂದಿನ ಹೆಜ್ಜೆಯಿಡ ಬೇಕಾಗಿದ್ದಿತು. ಹಾಗೆಯೇ ಮಾಡಿದಳು. ಶತ್ರುವಿನ ದಾಳಿಯ ಭಯ ; ಜನ ರೊಚ್ಚಿಗೆದ್ದಿರುವ ಸಮಯ. ಇಂಥ ಸಂದರ್ಭದಲ್ಲಿ ಮಿಯಾ ಮಂಝುವನ್ನು ರಾಜ್ಯದಲ್ಲಿ ಇರಿಸಿಕೊಳ್ಳುವುದು ಕ್ಷೇಮಕರವಲ್ಲವೆಂದು ಸರಿಯಾಗಿಯೇ ತೀರ್ಮಾನಿಸಿದಳು. ಸಾಕಷ್ಟು ಸುದೀರ್ಘವಾಗಿ ಯೋಚಿಸಿ, ಆತನನ್ನು ತನ್ನ ರಾಯಭಾರಿಯಾಗಿ ನೇಮಿಸಿ, ಮಿತ್ರರಾಜರಲ್ಲಿ ಅಟ್ಟಿದಳು ; ಸೈನಿಕ ಸಹಾಯ ಪಡೆದುಕೊಂಡು ಬರುವ ಹೊಣೆಯನ್ನು ಆತನ ಮೇಲೆ ಹೊರಿಸಿದಳು. ಮಿಯಾ ಮಂಝುವಿಗೂ ಇದರಿಂದ ಸಂತೃಪ್ತಿಯಾಯಿತು. ತನ್ನ 'ದೇಶದ್ರೋಹ' ವನ್ನು ಕ್ಷಮಿಸಿದ ರಾಣಿಯ ಬಗೆಗೆ ಅಪಾರವಾದ ಗೌರವ ಅವನ ಮನಸ್ಸಿನಲ್ಲಿ ಮೂಡಿತು. ಜನತೆಗೂ ಸಮಾಧಾನವಾಯಿತು. ದೇಶದ್ರೋಹಿಯನ್ನು ರಾಜ್ಯದಿಂದ ಹೊರಗೆ ಹಾಕಲಾಯಿತಲ್ಲಾ ಎಂದು ಸಂತೋಷವೆನಿಸಿತು. ಹೀಗೆ ಚಾಣಾಕ್ಷಳಾದ ಚಾಂದ್‌ಬೀಬಿ ರಾಜ್ಯದೊಳಗೆ ಹೊತ್ತಿದ್ದ ಬೆಂಕಿಯನ್ನು ಆರಿಸಿ, ಸಮರದ ಸಿದ್ಧತೆಗೆ ತೊಡಗಿದಳು.

ಯುವರಾಜ ಮುರಾದ್‌ನಿಗೂ ಆತನ ಸೇನಾಧಿಪತಿಗೂ ಉಂಟಾದ ಮತಭೇದದಿಂದಾಗಿ ಮೊಗಲ್‌ಸೈನ್ಯ ತಡವಾಗಿಯೇ ಬಂದು. ಅಹಮದ್ ನಗರದ ಕೋಟೆಗೆ ಮುತ್ತಿಗೆ ಹಾಕಿತು. ವೀರರಾಣಿ ಚಾಂದ್‌ಬೀಬಿ ತನ್ನ ಯುಕ್ತಿ-ಶಕ್ತಿಗಳಿಂದ ಶತ್ರುಗಳ ಆಟ ನಡೆಯದಂತೆ ನೋಡಿಕೊಳ್ಳಹತ್ತಿದಳು.

ಕೊನೆಗೊಮ್ಮೆ ಆಗಬಾರದ ಅನಾಹುತ ಆಗಿಹೋಯಿತು. ಮೊಗಲರು ಕೋಟೆ ಗೋಡೆಯ ಕೆಳಗೆ ಸುರಂಗ ತೋಡಿ. ಸಿಡಿಮದ್ದು ತುಂಬಿ ಹಾರಿಸಿದರು. ಕೋಟೆ ಗೋಡೆ ಒಂದೆಡೆಗೆ ಕುಸಿದು ಬಿದ್ದಿತು. ಆಗ ಸ್ವತಃ ಚಾಂದ್‌ಬೀಬಿ, ಕೈಲಿ ಹಿರಿವ ಖಡ್ಗ ಹಿಡಿದುಕೊಂಡು ನಂಬಿಗಸ್ತ ಸಿಪಾಯಿಗಳೊಂದಿಗೆ ಅಲ್ಲಿಗೆ ಧಾವಿಸಿ ಬಂದಳು : ರಾತ್ರಿಯಿಡೀ ಅಲ್ಲಿಯೇ ನಿಂತು, ಸಿಪಾಯಿಗಳಿಗೆ ಉತ್ತೇಜನವಿತ್ತು, ಕೋಟೆ ಗೋಡೆಯ ದುರಸ್ತಿ ಮಾಡಿಸಿದಳು.

ಬೆಳಗಾಗುವಷ್ಟರಲ್ಲಿ ಕೋಟೆ ಭದ್ರವಾದುದರ ಸುದ್ದಿ ತಿಳಿದುಬಂದು, ಜನತೆಗೆ ಹೋದ ಜೀವ ಬಂದಂತಾಯಿತು. ಅವರು ತಮ್ಮ ತಮ್ಮ ಮನಸ್ಸಿನಲ್ಲಿಯೇ ಅನಂತವಾದ ಧನ್ಯವಾದಗಳನ್ನು ಚಾಂದಬೀಬಿಗೆ ಅರ್ಪಿಸಿದರು. ಆದರೂ ಚಾಂದ್‌ಬೀಬಿ ಮೈಮರೆತು ಕೂಡಲಿಲ್ಲ. ಏಕೆಂದರೆ ಅವಳಿಗೆ ಗೊತ್ತಿದ್ದಿತು— ತಮಗೆ ಸಾಕಷ್ಟು ಸೈನ್ಯ. ಸಾಮಗ್ರಿ. ಆಹಾರ ಇಲ್ಲವೆಂಬುದು. ಅವುಗಳಿಲ್ಲದೆ ಮೊಗಲರಂಥ ಮಹಾಶತ್ರುವನ್ನು ಬಹುದಿನಗಳವರೆಗೆ ಎದುರಿಸುವುದು ಶಕ್ಯವಿಲ್ಲ ವೆಂಬುದು. ಮೇಲಾಗಿ ಬರಬೇಕಿದ್ದ ಮಿತ್ರರಾಜ್ಯಗಳ ಸಹಾಯ ಇನ್ನೂ ಬಂದಿರಲೇ ಇಲ್ಲ.

ಇಂಥ ಗಂಡಾಂತರದ ಗಳಿಗೆಯಲ್ಲಿಯೇ ಆಗಬಹುದಾಗಿದ್ದ ಒಂದು ಭಾರೀ ಅನಾಹುತ ತಪ್ಪಿಹೋಯಿತು. ಚಾಂದ್‌ಬೀಬಿಯನ್ನು ಕೊಲ್ಲುವ ಕಲ ಕುಹಕಿಗಳ

ಒಳಸಂಚು ಹೊರಬಿದ್ದಿತು ! ಚಾಂದ್‌ಬೀಬಿಯ ಕೂದಲು ಕೊಂಕದೆ, ಅಹಮದ್‌ನಗರದ ಮಾನರಕ್ಷಣೆಗಾಗಿ, ಶಾಂತಿ ಸುರಕ್ಷತೆಗಾಗಿ ಆಕೆ ಬದುಕಿ ಉಳಿಯುವಂತಾಯಿತು.

ಚಾಂದ್‌ಬೀಬಿಗೆ ಮಾತ್ರ ತನ್ನ ಜೀವದ ಭಯ ಇದ್ದಿರಲೇ ಇಲ್ಲ ; ಆಕೆಗೆ ಇದ್ದ ಭಯವೆಲ್ಲ ತನ್ನ ರಾಜ್ಯದ ಪ್ರಜೆಗಳಿಗಾಗಿಯೇ ! ಈ ಕಾರಣದಿಂದಲೇ ಆಕೆ ಮುಂದೆ ಒಪ್ಪಂದಕ್ಕೆ ಮುಂದಾದುದು.

ಅತ್ತ ಮೊಗಲರ ಆಹಾರ ಸಾಮಗ್ರಿಯೂ ತೀರುತ್ತ ಬಂದಿದ್ದಿತು. ಮುತ್ತಿಗೆ ಯಶಸ್ವಿಯಾಗದ ಲಕ್ಷಣಗಳೂ ಕಂಡುಬಂದು, ಮಾನ ಉಳಿಯುವಂತಾದರೆ ಸಾಕು ಎನಿಸಿತ್ತು. ಹೀಗಾಗಿ ಒಪ್ಪಂದದ ಪ್ರಸ್ತಾಪ ಬಂದಾಗ ಅವರೂ ಸಂತೋಷವಾಗಿಯೇ ಒಪ್ಪಿಕೊಂಡರು.

ಹೀಗೆ ಅಹಮದ್‌ನಗರಕ್ಕೆ ಒದಗಿ ಬಂದಿದ್ದ ಒಂದು ಭಾರೀ ಕುತ್ತು ಚಾಂದ್‌ಬೀಬಿಯ ಶಕ್ತಿ–ಯುಕ್ತಿ, ಚಾಲೂಕ್ಯ–ಚಾಣಾಕ್ಷತನಗಳಿಂದ ಕಳೆದು ಹೋಯಿತು.

ಮೊಗಲ್ ಸೈನ್ಯ ಮರಳಿತು.

ಐಕ್ಯ–ಸ್ವಾತಂತ್ರ್ಯಗಳ ಗುರಿಸಾಧನೆಯ ನಂತರ ತನ್ನದೇನು ಕೆಲಸ '—ಎಂದು ಬಗೆದು, ತನ್ನ ಕೈಯೊಳಗಿನ ಅಧಿಕಾರ ಸೂತ್ರಗಳನ್ನೆಲ್ಲ ತಾನಾಗಿಯೆ ಬಿಟ್ಟು ಕೊಟ್ಟಳು ಚಾಂದ್‌ಬೀಬಿ.

ಆದರೆ ಅದರ ಪರಿಣಾಮ ಮಾತ್ರ ಒಳ್ಳೆಯದಾಗಲಿಲ್ಲ. ಅವಳು ಬಯಸಿದುದೇ ಒಂದು. ಆದುದೇ ಇನ್ನೊಂದು. ದೂರದೃಷ್ಟಿಯಿಲ್ಲದ ಕೆಲ ಸರದಾರರು ಚಾಂದ್‌ಬೀಬಿ ಮಾಡಿಕೊಂಡ ಒಪ್ಪಂದವನ್ನು ಮುರಿದುಹಾಕಿದರು. ಮೊಗಲ ಸಾಮ್ರಾಟನನ್ನು ಮತ್ತೆ ಕೆಣಕಿದರು. ಚಾಂದ್‌ಬೀಬಿಯ ವಿವೇಕದ ಮಾತು ವ್ಯರ್ಥವಾಯಿತು.

ಇಂಥ ವಿಷಗಳಿಗೆಯಲ್ಲಿಯೇ ಅಸೂಯಾಪರರು ಚಾಂದ್‌ಬೀಬಿಯನ್ನು ಹಿಡಿಸಿ. ಬಂಧನದಲ್ಲಿರಿಸಿದರು : ಸಾಲದ್ದಕ್ಕೆ ಕ್ರಿ. ಶ. ೧೬೦೦ರಲ್ಲಿ ಆಕೆಗೆ ಮರಣದಂಡನೆಯನ್ನೂ ವಿಧಿಸಿದರು ! ಹೀಗೆ ಚಾಂದ್‌ಬೀಬಿಗೆ ತನ್ನವರ ಕೃತಘ್ನತೆಗೆ ಬಲಿಯಾಗುವ ಪ್ರಸಂಗ ಬಂದಿತು !

ಆದರೆ ಈಕೆ ಇದ್ದಷ್ಟು ಕಾಲ ಸಾರ್ಥಕವಾಗಿ ಬದುಕಿ ಬಾಳಿದಳು. ಅಧಿಕಾರದ ಮದವನ್ನು ತಲೆಗೇರಿಸಿಕೊಳ್ಳದೆ ಜನಹಿತಕ್ಕಾಗಿ ಜೀವನದುದ್ದಕ್ಕೂ ಶ್ರಮಿಸಿದಳು. ಸತ್ವಪರೀಕ್ಷೆಯ ಸಮಯದಲ್ಲಿ ರಾಜ್ಯದೊಳಗಿನ ಅಂತಃಕಲಹವನ್ನು ಅಡಗಿಸಿ,

ಹಾರಿಸಿದಳು. ಬಲಶಾಲಿಯಾದ ಮೊಗಲ್ ಚಕ್ರವರ್ತಿ
ಪಕ್ಕದ ಬಾವುಟವನ್ನು ಯಶಸ್ವಿಯಾಗಿ ಎದುರಿಸಿದಳು ; ಮಾತ್ರವಲ್ಲ. ಮೊಗಲ್
ಅಕ್ಬರನ ಸೈನ್ಯವನ್ನು 'ಚಾಂದ್‌ಸುಲ್ತಾನಾ' ಎಂದು ಗೌರವಿತಳಾದಳು. ಈ ಕಾರಣ
ಸಮ್ರಾಟನಿಂದಲೇ ಚಾಂದ್‌ಬೀಬಿ ಇಂದಿಗೂ ಸಂಸ್ಮರಣೀಯಳಾಗಿದ್ದಾಳೆ.
ಕ್ಕಾಗಿಯೇ ಈ ವೀರಮಹಿಳೆ

ಅಭ್ಯಾಸ

೧. (ಅ) ಕಠಿನ ಪದಗಳ ಅರ್ಥ :—

ಉದಾತ್ತ = ಶ್ರೇಷ್ಠ ; ಚೇತನ = ಚೈತನ್ಯ, ಬಲ, ಶಕ್ತಿ ; ಉಜ್ವಲ = ಬೆಳಗುವ, ಶೋಭಿಸುವ ; ಕಲಿತನ = ಶೂರತನ ; ಅನುಕರಣೀಯ = ಅನುಕರಣ ಮಾಡಲು ಯೋಗ್ಯವಾದ ; ಚಾಣಾಕ್ಷ = ದೂರದೃಷ್ಟಿಯುಳ್ಳ, ಮುಂದಾಲೋಚನೆ ಮಾಡುವ ಶಕ್ತಿಯುಳ್ಳ ; ಪಳಗು = ನುರಿ ; ಮುತ್ಸದ್ದಿತನ = ಚಾಣಾಕ್ಷತನ, ರಾಜಕಾರಣಪಟುತ್ವ ; ತನ್ಮೂಲಕ = ಅದರ ಮುಖಾಂತರ, ಆದರಿಂದ ; ಸುಪ್ಪತ್ತಿಗೆ = ಮೃದುವಾದ ಹಾಸಿಗೆ ; ಐಷಾರಾಮ = ಸುಖದ ಜೀವನ, ಸುಖಾನುಭವ ; ನ್ಯಾಯನಿಷ್ಠುರತೆ = ಯೋಗ್ಯವಾದುದನ್ನು ಎತ್ತಿಹಿಡಿಯುವಲ್ಲಿಯ ಬಿರುಸುತನ ; ದಕ್ಷತೆ = ಸಾಮರ್ಥ್ಯ, ಕುಶಲತೆ ; ಕಾರಸ್ಥಾನಿ = ಒಳಸಂಚುಗಾರ, ಕಪಟಿ ; ಕೈದು ಮಾಡು = ಸೆರೆಹಿಡಿ ; ಬಂಧಮುಕ್ತಗೊಳಿಸು = ಬಂಧನದಿಂದ ಬಿಡುಗಡೆಮಾಡು ; ಪ್ರಸಂಗಾವಧಾನ = ಯೋಗ್ಯ ವೇಳೆಯಲ್ಲಿ ಯುಕ್ತಿ ಹೊಳೆಯುವುದು ; ಮುಂಬರು = ಮುಂದಕ್ಕೆ ಬರು ; ಮಹತ್ವಾಕಾಂಕ್ಷಿ = ಹಿರಿಯ ಆಸೆಯುಳ್ಳವನು, ಅತಿ ಆಸೆಯುಳ್ಳವನು ; ರವಾನಿಸು = ಕಳುಹಿಸು ; ಸುಳಿವು = ಸೂಚನೆ ; ಯೋಗಕ್ಷೇಮ = ಗಳಿಕೆ ಮತ್ತು ಅದರ ಸಂರಕ್ಷಣೆ ; ಸಂತೃಪ್ತಿ = ಸಮಾಧಾನ ; ಅನಾಹುತ = ಆಪತ್ತು, ಕೇಡು ; ಸುರಂಗ = ನೆಲಮಾರ್ಗ ; ನಂಬಿಗಸ್ತ = ನಂಬಿಗೆಗೆ ಪಾತ್ರನಾದವ ; ಉತ್ತೇಜನ = ಪ್ರೋತ್ಸಾಹ, ಹುರುಪು ; ದುರಸ್ತಿ = ರಿಪೇರಿ, ಸರಿ ಪಡಿಸುವಿಕೆ ; ಧನ್ಯವಾದ = ಕೃತಜ್ಞತೆ ; ಕುಹಕಿ = ಕಪಟಿ, ವಂಚಕ ; ಒಳಸಂಚು = ಒಳಗಿಂದೊಳಗೇ ಮಾಡುವ ಹಂಚಿಕೆ, ವಂಚನೆ ; ಪ್ರಸ್ತಾಪ (ಪ್ರಸ್ತಾವ) = ವಿಚಾರ, ಚರ್ಚೆ ; ಕುತ್ತು = ಗಂಡಾಂತರ ; ದೂರದೃಷ್ಟಿ = ಮುಂದಾಲೋಚನೆ ; ಸಮ್ರಾಟ = ಸಾರ್ವಭೌಮ, ಚಕ್ರವರ್ತಿ ; ಕೃತಘ್ನತೆ = ಉಪಕಾರಕ್ಕೆ ಪ್ರತಿಯಾಗಿ ಅಪಕಾರ ಮಾಡುವಿಕೆ, ದ್ರೋಹ ; ಸಾರ್ಥಕ = ಸಫಲ, ಫಲಕಾರಿಯಾದ ; ಮದ = ಸೊಕ್ಕು ; ಸುಲ್ತಾನಾ = ರಾಣಿ ; ಸಂಸ್ಮರಣೀಯ = ನೆನೆಸಲು ಯೋಗ್ಯ.

(ಆ) ನುಡಿಗಟ್ಟುಗಳ ಅರ್ಥ :—

ಕೆಂಡಕಾರು = ಸಿಟ್ಟಿಗೇಳು, ಕೆರಳು ;

ಹಲ್ಲುಮಸೆ = ಹಲ್ಲುಕಡಿ, ಕೆರಳು ;

ಗುಟ್ಟುರಟ್ಟಾಗು = ರಹಸ್ಯ ಬಯಲಿಗೆ ಬೀಳು.

೨. ವ್ಯಾಕರಣ ವಿಶೇಷ :—

(ಅ) ಕೆಳಗಿನ ವಾಕ್ಯಗಳಲ್ಲಿಯ ಕರ್ತೃ, ಕರ್ಮ, ಕ್ರಿಯಾಪದಗಳನ್ನು ಗುರುತಿಸಿರಿ :—

(i) ಕೆಲ ಕಾರಸ್ಥಾನಿಗಳು ಈಕೆಯನ್ನು ಕ್ರಿ.ಶ. ೧೫೮೨ ರಲ್ಲಿ ಕೈದು ಮಾಡಿದರು.

(ii) ದೂರದೃಷ್ಟಿಯಿಲ್ಲದ ಕೆಲ ಸರದಾರರು ಚಾಂದ್‌ಬೀಬಿ ಮಾಡಿಕೊಂಡ ಒಪ್ಪಂದವನ್ನು ಮುರಿದು ಹಾಕಿದರು.

(ಆ) ಕೆಳಗಿನ ಸಂಧಿಗಳನ್ನು ಬಿಡಿಸಿ, ಹೆಸರು ಹೇಳಿರಿ :—

ವೀರೋಚಿತ, ಮರಣಾನಂತರ, ಸರಿದೂಗಿಸು, ಹದಗೆಡು, ಪ್ರಸಂಗಾವಧಾನ.

೩. ಪ್ರಶ್ನೆಗಳು :—

(ಅ) ಚಾಂದ್‌ಬೀಬಿ ಯಾರು?

(ಆ) ಆಕೆ ರಾಜಕುಮಾರಿಯಾಗಿ ಬೆಳೆದ ಬಗೆ ಯಾವುದು?

(ಇ) ಬಿಜಾಪುರದ ರಾಣಿಯಾದ ಚಾಂದ್‌ಬೀಬಿಯ ಜೀವನದ ವಿಶೇಷವೇನು ?

(ಈ) ಚಾಂದ್‌ಬೀಬಿಗೆ ತವರು ಮನೆಯಿಂದ ಕರೆಬಂದುದೇಕೆ ?

(ಉ) ಅಹಮದ್‌ನಗರದ ಅಂತಃಕಲಹವನ್ನು ಚಾಂದ್‌ಬೀಬಿ ಹೇಗೆ ತೊಡೆದು ಹಾಕಿದಳು ?

(ಊ) ಮೊಗಲ್ ಸೈನ್ಯವನ್ನು ಆಕೆ ಹೇಗೆ ಎದುರಿಸಿದಳು ?

(ಎ) ಚಾಂದ್‌ಬೀಬಿ ಒಪ್ಪಂದಕ್ಕೆ ಮುಂದಾದುದು ಏಕೆ ?

(ಏ) ಚಾಂದ್‌ಬೀಬಿ ರಾಜ್ಯದ ಅಧಿಕಾರ ಸೂತ್ರಗಳನ್ನು ತಾನಾಗಿಯೇ ಬಿಟ್ಟುಕೊಟ್ಟುದೇಕೆ? ಅದರ ಪರಿಣಾಮವೇನಾಯಿತು ?

೪. ವಿಶೇಷ ಓದು :—

ಕನ್ನಡನಾಡಿನಲ್ಲಿ ಬಾಳಿ ಬೆಳಗಿದ ವೀರಮಹಿಳೆಯರ ಜೀವನ ಚರಿತ್ರೆಗಳನ್ನು ಸಂಗ್ರಹಿಸಿರಿ. (ಉದಾ :—ಕಿತ್ತೂರ ಚೆನ್ನಮ್ಮ, ಬೆಳವಡಿ ಮಲ್ಲಮ್ಮ, ಒನಕೆಯ ಓಬವ್ವ, ಮಂಗಳೂರಿನ ಅಬ್ಬಕ್ಕಾದೇವಿ, ಇತ್ಯಾದಿ).

ಪದ್ಯಭಾಗ

೧. ಪ್ರಾರ್ಥನೆ

ಗಿಳಿಯ ಮರಿಯನು ತಂದು ಪಂಜರ
ದೊಳಗೆ ಪೋಷಿಸಿ ಕಲಿಸಿ ಮೃದುನುಡಿ
ಗಳನು ಲಾಲಿಸಿ ಕೇಳ್ವ ಪರಿಣತರಂತೆ ನೀನೆನಗೆ
ತ್ರಿಳುಹಿ ಮತಿಯನು ಎನ್ನ ಜಿಹ್ವೆಗೆ
ಮೊಳಗುವಂದದಿ ನಿನ್ನ ನಾಮಾ
ವಳಿಯ ಪೊಗಳಿಕೆಯಿತ್ತು ರಕ್ಷಿಸು ನಮ್ಮನನವರತ ॥ ೧ ॥

ದೀನ ನಾನು ಸಮಸ್ತಲೋಕಕೆ
ದಾನಿ ನೀನು ವಿಚಾರಿಸಲು ಮತಿ
ಹೀನ ನಾನು ಮಹಾಮಹಿಮ ಕೈವಲ್ಯಪತಿ ನೀನು
ಏನ ಬಲ್ಲೆನು ನಾನು ನೆರೆ ಸು
ಜ್ಞಾನ ಮೂರುತಿ ನೀನು ನಿನ್ನ ಸ
ಮಾನರುಂಟೇ ದೇವ ರಕ್ಷಿಸು ನಮ್ಮನನವರತ ॥ ೨ ॥

—ಕನಕದಾಸ

ಅಭ್ಯಾಸ

೧. ಕಠಿನ ಪದಗಳ ಅರ್ಥ :—

ಲಾಲಿಸು = ಮುದ್ದಿಸು; ಪರಿಣತ = ವಿದ್ವಾಂಸ ; ಜಿಹ್ವೆ = ನಾಲಗೆ; ಮೊಳಗು = ಗಟ್ಟಿಯಾಗಿ ಶಬ್ದ ಮಾಡು; ಕೈವಲ್ಯ = ಮೋಕ್ಷ; ಅನವರತ = ಸದಾ.

೨. ಈ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :—

(೧) ಗಿಳಿಯ ಮರಿಯ ಹೋಲಿಕೆ ಯಾರಿಗೆ ಕೊಟ್ಟಿದೆ ?

(೨) ಪರಮಾತ್ಮನಿಗೂ ನಮಗೂ ಇರುವ ಅಂತರವೇನು?

೩. ಈ ಪದ್ಯಗಳನ್ನು ಬಾಯಿಪಾಠ ಮಾಡಿ.

೨. ಸೋಮೇಶ್ವರ ಶತಕದಿಂದ

ಪ್ರಜೆಯುಂ ಪಾಲಿಸಬಲ್ಲೊಡಾತನರಸಂ, ಕೈಯಾಶೆಯುಂ ಮಾಡದಂ
ನಿಜಮಂತ್ರೀಶ್ವರ, ತಂದೆ-ತಾಯ ಸಲಹಲ್ ಬಲ್ಲಾತನೇ ಧಾರ್ಮಿಕಂ,
ಭಜಕಂ ದೈವದೆ ಭಕ್ತಿಯುಳ್ಳೊಡೆ, ಭಟಂ ನಿರ್ಭೀತ ತಾನಾದವಂ,
ದ್ವಿಜನಾಚಾರತೆಯುಳ್ಳವಂ. ಹರಹರಾ ಶ್ರೀ ಚನ್ನಸೋಮೇಶ್ವರಾ ॥ ೧ ॥

ಇರಿಯಲ್ ಬಲ್ಲೊಡೆ ವೀರನಾಗು, ಧರೆಯೊಳ್ ನಾನಾ ಚಮತ್ಕಾರಮಂ
ಅರಿಯಲ್ ಬಲ್ಲೊಡೆ ಮಂತ್ರಿಯಾಗು, ಪ್ರಭುವಾಗಾರೆಂದೊಡಂ ಕೋಪಮಂ
ತೊರೆಯಲ್ ಬಲ್ಲೊಡೆ ಯೋಗಿಯಪ್ಪುದರಿಷಡ್ವರ್ಗಂಗಳಂ ಗೆಲ್ವೊಡೇ
ತೆರಬಲ್ಲರ್ ಪೊಣೆಯಪ್ಪುದೈ ಹರಹರಾ ಶ್ರೀ ಚನ್ನಸೋಮೇಶ್ವರಾ ॥ ೨ ॥

ಪೊಡೆಯೊಳ್ ತುಂಬಿರೆ ಪಂಕ ಮೇಲೆ ತೊಳೆಯಲ್ ತಾಂ ಶುದ್ಧನೇನಪ್ಪನೇ ?
ಕಡುಪಾಪಂ ಬಲು ಮೀಯಲಾತ ಶುಚಿಯೇ, ಕಾಕಾಳಿಯೇಂ ಮೀಯದೆ ?
ಗುಡಪಾನಂಗಳೊಳದ್ದೆ ಬೇವಿನಫಲಂ ಸ್ವಾದಪ್ಪುದೇ ಲೋಕದೊಳ್ ?
ಮಡಿಯೇ ನಿರ್ಮಲಚಿತ್ತವೈ ಹರಹರಾ ಶ್ರೀ ಚನ್ನಸೋಮೇಶ್ವರಾ ॥ ೩ ॥

—**ಸೋಮನಾಥ**

ಅಭ್ಯಾಸ

೧. (ಸೋಮೇಶ್ವರನೆಂಬ ಕವಿಯು ಬರೆದ ನೂರು ಬಿಡಿಪದ್ಯಗಳ ಸಂಕಲನವೇ ಸೋಮೇಶ್ವರ ಶತಕ. ಅದರೊಳಗಿಂದ ಆಯ್ಕೆ ಮಾಡಿದ ಮೂರು ಪದ್ಯಗಳಿವು.)

೨. (ಅ) ಕಠಿನ ಶಬ್ದಗಳ ಅರ್ಥ :—

ಕೈಯಾಶೆ = ಲಂಚ ; ಭಟ = ಶೂರ ; ಭಜಕ = ಭಜಿಸುವವ ; ದ್ವಿಜ = ಬ್ರಾಹ್ಮಣ ; ಪ್ರಭು = ಅರಸು ; ತೊರೆ = ಬಿಡು ; ಅರಿಷಡ್ವರ್ಗ = ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ ಎಂಬ ಆರು ವೈರಿಗಳು ; ತೆರಬಲ್ಲರ್ = ಕೊಡಬಲ್ಲವರು (ಕೊಟ್ಟು, ತೀರಿಸುವವರು) ; ಪೊಣೆ = ಹೊಣೆ ; ಪೊಡೆ = ಹೊಟ್ಟೆ ; ಪಂಕ = ಕೆಸರು ; ಮೀ = ಜಳಕ (ಸ್ನಾನ) ಮಾಡು ; ಶುಚಿ = ಸ್ವಚ್ಛವಾದವನು ; ಕಾಕಾಳಿ = ಕಾಗೆ ಬಳಗ ; ಗುಡಪಾನ = ಬೆಲ್ಲದ ನೀರು ; ಸ್ವಾದ = ರುಚಿ.

(ಆ) ನುಡಿಗಟ್ಟು:—

೧. ಏನಾದರೂ ಕೊಡುವರೋ ಎಂದು ಹೆರವರ ಕೈಯತ್ತ ನೋಡುವುದೇ ಕೈಯಾಶೆ.

೨. ದ್ವಿಜ=ಬ್ರಾಹ್ಮಣ; ದ್ವಿ ಎಂದರೆ ಎರಡು ಸಲ ಜ ಎಂದರೆ ಹುಟ್ಟುವವ ತಾಯಿಯ ಗರ್ಭದಿಂದ ಹುಟ್ಟುವುದು ಮೊದಲ ಜನನವಾದರೆ ಗುರುವಿನ ಉಪದೇಶದಿಂದ ಎರಡನೆಯ ಜನ್ಮವನ್ನು ಪಡೆದಂತೆ ಭಾವಿಸುವುದರಿಂದ ಅವರಿಗೆ 'ದ್ವಿಜ' ಎಂದು ಹೆಸರು.

೩. ವಿಶೇಷ ಓದು :—

ಸರ್ವಜ್ಞನ ವಚನಗಳಲ್ಲಿ ಈ ಮಾದರಿಯ ನೀತಿ ಪದ್ಯಗಳಿವೆ. ಅವುಗಳನ್ನು ಸಂಗ್ರಹಿಸಿ ಓದಿ.

೩. ಲೋಹಿತಾಶ್ವನ ಸಾವು

ತನಯನೆಂದುಂ ಬಪ್ಪ ಹೊತ್ತಿಂಗೆ ಬಾರದಿರೆ
ಮನನೊಂದಿದೇಕೆ ತಳುವಿದನೆನ್ನ ಕಂದನೆಂ [ಮುರಿದುಕೊಳುತ
ದೆನುತ ಸುಯ್ಯುತ್ತ ಮರುಗುತ್ತ ಬಸುರಂ ಹೊಸೆದು ಕೊನೆವೆರಳ
ತನುವ ಮರೆದಡಿಗಡಿಗೆ ಹೊರಗನಾಲಿಸಿ ಮತ್ತೆ
ಮನೆಯೊಡತಿಗಂಜಿ ಕೆಲಸವನು ಮಾಡುತ್ತಿಪ್ಪ
ವನಿತೆಗಾದಾಪತ್ತನಾಲಿಸದೆ ಕೆಟ್ಟು ದಟ್ಟಿಸುವರದನೇನೆಂಬೆನು ॥

ಅಡವಿಯೊಳು ಹೊಲಬುಗೆಟ್ಟನೊ ಗಿಡುವಿನೊಳಗೆ ಹುಲಿ
ಹಿಡಿದುದೋ ಕಳ್ಳರೊಯ್ದರೊ ಭೂತಸಂಕುಲಂ [ಘಣಿ ತಿಂದುದೊ
ಹೊಡೆದುವೋ ನೀರೊಳದ್ದನೊ ಮರದ ಕೊಂಬೇರಿ ಬಿದ್ದನೋ
ಕಡುಹಸಿದು ನಡೆಗೆಟ್ಟು ನಿಂದನೋ ಎಂದಿಂತು
ಮಡದಿ ಹಲವಂ ಹಲುಬುತಂಗಣದೊಳಿರೆ ಹೊತ್ತು
ಹೊಡಕರಿಸಿದಳಲ ಕರ್ಬೊಗೆಯಂತೆ ಕವಿವ ಕತ್ತಲೆಯೊಳಗೆ
ನಿಂದಿರ್ದಳು ॥

ಬಂದರಂ ಲೋಹಿತಾಶ್ವಾ ಎಂದು ಬಟ್ಟೆಯೊಳು
ನಿಂದರಂ ಲೋಹಿತಾಶ್ವಾ ಎಂದು ಗಾಳಿ ಗಿರು
ಕೆಂದಡಂ ಲೋಹಿತಾಶ್ವಾ ಎಂದು ಕರೆಕರೆದು ಬಿಡೆ ಬೀದಿಗರುವಿನಂತೆ
ಮಂದಮತಿಯಾಗಿರ್ದ ಚಂದ್ರಮತಿಗೊಬ್ಬನೈ
ತಂದಿಂದು ಕೊಡೆ ಹೋಗಿರ್ದು ಕಂಡಂ ನಿನ್ನ
ಕಂದನೊಂದುಗ್ರಫಣಿ ತಿಂದು ಜೀವಂಗಳೆದನೆಂದು ಹೇಳಿದನಾಗಳು ॥

ಏಕೆ ಕಚ್ಚಿತ್ತಾವ ಕಡೆ ಯಾವ ಹೊಲನಕ್ಕ
ಟಾ ಕುಮಾರಂ ಮಡಿದ ತಾವೆನಿತು ದೂರವೆನ [ಕೊಯ್ಕೆ ಕೈಯ
ಲೀ ಕಡೆಯೊಳೀ ಹೊಲದೊಳೀ ಮರದ ಕೆಲದ ಹುತ್ತಿನ ಹುಲ್ಲ
ನೂಕಿ ಫಣಿಯುಗಿಯೆ ಕೆಡೆದಂ ದೂರವಲ್ಲಲ್ಲ
ಬೇಕಾದಡೀಗ ಹೋಗಲ್ಲದಿರ್ದಡೆ ಬಳಿಕ
ನೇಕ ಭಲ್ಲೂಕ ಜಂಬುಕಂ ಘೂಕವೃಕಗಳೆಳೆಯದೆ ಬಿಡವು ಕೇಳೆಂದನು ॥

—ರಾಘವಾಂಕ

ಅಭ್ಯಾಸ

೧. ಇಲ್ಲಿ ಲೋಹಿತಾಶ್ವನು ಹುಲ್ಲುಹುಳ್ಳಿಗಳನ್ನು ತರಲು ಕಾಡಿಗೆ ಹೋಗಿದ್ದು ಬರುವುದಂ ತಡವಾದಾಗ ಅವನ ತಾಯಿ. ಚಂದ್ರಮತಿ ಚಿಂತಾಕ್ರಾಂತಳಾಗಿರುವುದೂ, ಬಾಲಕರು ಬಂದು ಅವನು ಹಾವು ಕಡಿದು ಸತ್ತನೆಂದು ಹೇಳಿದುದೂ ಚಿತ್ರಿತವಾಗಿದೆ.

೨. ಕಠಿನ ಪದಗಳ ಅರ್ಥ :—

ತಳುವು = ತಡ ಮಾಡು : ಕೊನೆವೆರಳು = ತುದಿಬೆರಳು : ಹೊರಗು = ಹೊರಗಡೆ ; ಆಪತ್ತು = ಅಪಾಯ : ದಟ್ಟಿಸು = ಶಿಕ್ಷಿಸು, ದಂಡಿಸು ; ಹೊಲಬು = ದಾರಿ ; ಗಿಡು = ಕಾಡು, ಮರ ಬೆಳೆದಿರುವ ಸ್ಥಳ ; ಭೂತ = ಪಿಶಾಚಿ ; ಅದ್ದು = ಮುಳುಗು ; ಹಲುಬು = ಪ್ರಲಾಪಿಸು ; ಹೊಡಕರಿಸು = ಉರಿಹೊತ್ತಿಕೊಂಡು ಸೀಯು ; ಮಂದಮತಿ = ಯೋಚನೆ ಹೊಳೆಯದವ : ಉಗ್ರಫಣಿ = ದೊಡ್ಡ (ಭಯಂಕರವಾದ) ಹಾವು : ಠಾವು = ಸ್ಥಳ : ಅಗಿ = ಕಚ್ಚು ; ಭಲ್ಲುಕ = ಕರಡಿ : ಜಂಬುಕ = ನರಿ : ಘೂಕ = ಗೂಬೆ ; ವೃಕ = ತೋಳ ; ಸುಯ್ಯು = ನಿಟ್ಟುಸಿರಿಡು ; ಬಸುರು = ಹೊಟ್ಟೆ ; ಹೊಸೆ = ಕಿವುಚು ; ಸಂಕುಲ = ಗುಂಪು ; ಕರ್ಬೊಗೆ = ಕರಿಯ ಹೊಗೆ ; ಜೀವಂಗಳೆ = ಸಾಯಿಸು ; ಕೆಡೆ = ಬೀಳು.

೩. ನುಡಿಗಟ್ಟುಗಳು :—

ಕೊನೆವೆರಳ ಮುರಿ = ಬೆರಳ ತುದಿಯನ್ನು ಮುರಿಯುವುದು ಚಿಂತೆಯ ಸೂಚನೆ ; ತನುವ ಮರೆ = ಮೈಮರೆಯುವುದು, ಮೂರ್ಛೆ ಹೋಗುವುದು : ಹಲವಂ ಹಲುಬು = ನಾನಾ ರೀತಿಯ ಚಿಂತೆಯಿಂದ ಅಳು : ಬೀದಿಗರು = ದಿಕ್ಕಿಲ್ಲದೆ ಅಲೆಯುವ ಪ್ರಾಣಿ.

೪. ಈ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :—

(೧) ಚಂದ್ರಮತಿಯ ದುಃಖ ಅವಳಲ್ಲಿ ಹೇಗೆ ವ್ಯಕ್ತವಾಗಿತ್ತು ?
(೨) ಅವಳು ಏನೇನೆಂದು ಚಿಂತಿಸಿ ಹಲುಬುತ್ತಿದ್ದಳು ?
(೩) ಆ ಸಮಯದಲ್ಲಿ ಬಂದವರು ಯಾರು ?
(೪) ಅವರೇನು ಹೇಳಿದರು ?

೫. ಈ ಪದ್ಯಗಳನ್ನು ಬಾಯಿಪಾಠ ಮಾಡಿ.

೪. ಕರ್ಣನ ನಿರ್ಧಾರ

ಏನು ಹೇಳೈ ಕರ್ಣ ಚಿತ್ತ
ಗ್ಲಾನಿಯಾವುದು ಮನಕೆ ಕುಂತೀ
ಸೂನುಗಳ ಬೆಸಗೈಸಿಕೊಂಬುದು ಸೇರದೇ ನಿನಗೆ
ಹಾನಿಯಿಲ್ಲೆನ್ನಾಣೆ ನುಡಿ ದು
ಮ್ಮಾನವೇತಕೆ ಮರುಳುತನ ಬೇ
ಡಾನು ನಿನ್ನಪದೆಸೆಯು ಬಯಸುವನಲ್ಲ ಕೇಳೆಂದ ॥

ಮರುಳು ಮಾಧವ ಮಹಿಯು ರಾಜ್ಯದ
ಸಿರಿಗೆ ಸೋಲುವನಲ್ಲ ಕೌಂತೇ
ಯರು ಸುಯೋಧನರೆನಗೆ ಬೆಸಗೈವಲ್ಲಿ ಮನವಿಲ್ಲ
ಹೊರೆದ ದಾತಾರಂಗೆ ಹಗೆವರ
ಶಿರವನರಿದೊಪ್ಪಿಸುವೆನೆಂಬೀ
ಭರದಲಿರ್ದೆನು ಕೌರವೇಂದ್ರನ ಕೊಂದೆ ನೀನೆಂದ ॥

ಒಡನೆ ಹುಟ್ಟಿದರೆಂಬ ಕಥನವ
ನೆಡೆಗೊಡದೆ ಬಣ್ಣಿಸಿದೆ ಪಾಂಡವ
ರಡಗು ಬಾಣಕೆ ಬಲಿಯೆನಿಪ್ಪೀ ಫಲವ ಮಾಣಿಸಿದೆ
ನುಡಿದು ಫಲವೇನಿನ್ನು ಕೌರವ
ರೊಡೆಯನಾದಂತಹೆನು ಬಾರೆನು
ಪೊಡವಿಯಲಿ ನೀ ಹರಹಿಕೊಳು ನಿನ್ನವರ ನಿಲಿಸೆಂದ ॥

ಹಲವು ಮಾತೇನಖಿಳಜನವೆ
ನ್ನುಳಿವ ಸೊಗಸದು ಕೌರವೇಶ್ವರ
ನೊಲವು ತಪ್ಪಿಸೆ ಭುವನದೊಳಗೆನಗಾಪ್ತಜನವಿಲ್ಲ
ಸಲಹಿದನು ಮನ್ನಣೆಯಲೆನಗ
ಗ್ಗಳಿಕೆಯಲ್ಲದೆ ಹೀನವೃತ್ತಿಯ
ಬಳಸಿ ನಡೆಸನು ಕೌರವೇಂದ್ರನನೆಂತು ಮರೆದಪೆನು ॥

—**ಕುಮಾರವ್ಯಾಸ**

ಅಭ್ಯಾಸ

೧. ಪರಿಚಯ :—

ಇದು ಕುಮಾರವ್ಯಾಸ ಭಾರತದಿಂದ ಆರಿಸಿರುವ ಭಾಗ. ಈ ಕಥೆ ತುಂಬ ಪ್ರಸಿದ್ಧವಾದುದು.

ಕೃಷ್ಣನು ಕರ್ಣನನ್ನು ಸಂಧಿಸುತ್ತಾನೆ. ಅವನಿಗೆ " ಪಾಂಡವರು ನಿನ್ನ ತಮ್ಮಂದಿರೆಂದು ತಿಳಿಸುತ್ತಾನೆ. ಅವರ ಕಡೆಗೆ ನೀನು ಬಂದರೆ ಯುದ್ಧವೇ ಆಗುವುದಿಲ್ಲ. ಎರಡು ಪಕ್ಷಗಳಿಗೂ ನೀನೇ ಹಿರಿಯನಾಗಿದ್ದೀಯೆ. ಆದ್ದರಿಂದ ನೀನೇ ರಾಜನಾಗುವೆ " ಎಂದು ತಿಳಿಸಿ, ಕೌರವರ ಪಕ್ಷವನ್ನು ಬಿಟ್ಟು ಬರುವಂತೆ ಕೇಳುತ್ತಾನೆ. ಆಗ ಕರ್ಣ ತನ್ನ ಮನಸ್ಸಿನ ನಿರ್ಧಾರ ತಿಳಿಸುತ್ತಾನೆ.

೨. ಕಠಿನ ಪದಗಳ ಅರ್ಥ :—

ಚಿತ್ತಗ್ಲಾನಿ = ಮನಸ್ಸಿನ ನೋವು, ಚಿಂತೆ : ಸೂನು = ಮಗ ; ಬೆಸಗೈಸು = ಸೇವೆಮಾಡಿಸು : ಸೇರು = ಒಡಿಸು, ಮೆಚ್ಚು ; ದುಮ್ಮಾನ = ಚಿಂತೆ, ದುಃಖ : ಅಪದೆಸೆ = ಕೀಳ್ದೆಸೆ (ಕೇಡು) : ಮರುಳು = ಪೆಚ್ಚು (ಹುಚ್ಚು) : ಮಹಿ = ಭೂಮಿ ; ಕೌಂತೇಯ = ಕುಂತಿಯ ಮಗ : ಹೊರೆ = ಕಾಪಾಡು ; ದಾತಾರ = ದಾನಿ, ಒಡೆಯ ; ಅರಿ = ಶತ್ರು : ಅಡಗು = ಮಾಂಸ : ಪೊಡವಿ = ಭೂಮಿ, ರಾಜ್ಯ ; ಹರಹು = ಹರಡು, ಅಧಿಕಾರ ಹೂಡು ; ಸೊಗಸು = ಮೆಚ್ಚು, ಅಪೇಕ್ಷಿಸು : ಅಗ್ಗಳಿಕೆ = ಹೆಚ್ಚಿಗೆ, ದೊಡ್ಡತನ ; ಹೀನವೃತ್ತಿ = ನೀಚ ನಡವಳಿಕೆ.

೩. ಈ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :—

(೧) ಕೃಷ್ಣನು ಹೇಳಿದ ಮಾತು ಏನು ?
(೨) ಕರ್ಣನು ಕೃಷ್ಣನ ಮಾತಿಗೆ ಏಕೆ ಒಪ್ಪಲಿಲ್ಲ ?
(೩) ಕರ್ಣನ ನಿರ್ಧಾರವೇನು ?
(೪) ' ಕೌರವರೊಡೆಯನಾದಂತಹೆನು ' ಎಂಬ ಮಾತಿನ ಅರ್ಥವೇನು ?
(೫) ಕೌರವನನ್ನು ಬಿಟ್ಟರೆ ತನಗೆ ಬೇರೆ ಆಪ್ತರಿಲ್ಲ ಎಂದು ಕರ್ಣನು ಹೇಳಲು ಕಾರಣವೇನು ?

೪. ಈ ಪದ್ಯಗಳನ್ನು ಬಾಯಿಪಾಠ ಮಾಡಿ.

೫. ಅತ್ತೆ-ಸೊಸೆಯರು

ಕಂಡಳು ದೂರದೊಳಗೆ ಬಹ ಸೊಸೆಯರ
ತಂಡವನಾ ಸಮಯದೊಳು
ಕಂಡರಾ ಸೊಸೆಯರತ್ತೆಯ ರೂಪ ಕಂಡಾಗ
ಳುಂಡಂತೆ ತಣಿದರೇನೆಂಬೆ ॥

ಅತ್ತೆಯ ಕಾಣುತ ನಗುತ ನಗುತ ನಲಿ
ದೊತ್ತಿಗೆ ಸೊಸೆಯರೈದಿದರು
ಒತ್ತಿಗೆ ಬಹ ಸೊಸೆಯರ ಕಂಡು ಮನಹಿಗ್ಗು
ತತ್ತೆಯಿರ್ದಳು ನಸುನಗುತ ॥

ಒಸೆದು ತಮ್ಮತ್ತೆಯ ಪಜ್ಜೆಗಳೊಳು ಪೆರೆ
ನೊಸಲನಿಟ್ಟೆರಗಿದರೆಲ್ಲ
ಸುಸುಖ ಸುಶೀಲ ತಪ್ಪದೆ ಬಾಳಿರೆಂದಾಗ
ಸೊಸೆಯರ ಹರಿಸಿದಳೊಲಿದು ॥

ಕುಳಿತರೆಲ್ಲರು ಸುತ್ತಿಮುತ್ತಿಕೊಂಡತ್ತೆಯ
ಬಳಸಿನೊಳಾ ಮನೆತುಂಬಿ
ಹಳಹಳಚನೆ ನುಡಿದಾಡಿದರೊಪ್ಪಚ್ಚಿ
ವಿಳಸಿತ ಧರ್ಮಚಿಂತನೆಯಾ ॥

ಸೊಸೆಯರೊಳಗ ನೋಳ್ಪನೆಂದು ಯಶಸ್ವತಿ
ನಸುನಗೆಯಿಂದ ಬಾಯ್ದೆರೆದು
ಹೊಸ ಹರೆಯದೊಳೇಕೆ ನೀವಿಂತು ತನುವ ದಂ
ಡಿಸುವಿರೌ ಹಾಯೆಂದಳೊಡನೆ ॥

ನಿವಗೆ ಕೆಲಸವಿಲ್ಲ ನಿಮ್ಮಾಣ್ಮಗಾದರೆ
ಸುವಿವೇಕಯೆಳ್ಳನಿತಿಲ್ಲ
ಅವನಿಯನಾಳುತ ಮುನಿಯಂತೆ ನಡೆವುದಿ
ದವಿವೇಕಿಗಳ ನಡೆಯಲ್ತೆ ॥

ತನಗೆ ಭೋಗದೊಳಿಚ್ಛೆಯಿಲ್ಲದಿರಲಿ ಮಾ
ನಿನಿಯರ ಹಸಿಯಿಸಿ ತಾನು
ಇನಿತು ಪ್ರಯಾಸವ ಮಾಡುವುದುಚಿತವೆ
ಜಿನಜಿನಯೆಂದಳಾ ದೇವಿ ॥

ನಮಗೇನು ಪ್ರಯಾಸ ಅತ್ತ್ಯಮ್ಮವೊಂದೊಂದು
ದಿವಸ ನಿರ್ಭುಕ್ತಿ ತಿಂಗಳಿಗೆ
ನವಪ್ರಾಯ ಶಕ್ತಿಯೊಳಾತ್ಮಾರ್ಥವಾಗಿ ಮಾ
ಡುವುದೊಳ್ಳಿತಲ್ತೆ ಸುವ್ರತವ ॥

ಅದರಿಂದ ನಮಗೆ ಪ್ರಯಾಸವಿಲ್ಲತ್ತ್ಯಮ್ಮ
ಮದಮುಖನಲ್ಲ ನಿಮ್ಮಣುಗ
ಇದು ಮಹಾಸುಖ ನವಗೆಂದರಂತದ ಕೇಳ್ದು
ಮುದವೆತ್ತಳಾ ಪುಣ್ಯಜನನಿ ॥

ಒಳ್ಳಿತಾದುದು ಹಣ್ಣುಗಳಿರ ನಿಮ್ಮರಸನ
ಗೆಲ್ಲಕೆ ನೀವು ಬೀಗುವಿರಿ
ಸಲ್ಲೀಲೆಯೊಳು ವ್ರತದೊಳು ಸುಖವಿರಿಯೆಂದ
ಳೆಲ್ಲರಿಗದು ತಾನು ಹರಕೆ ॥

—ರತ್ನಾಕರವರ್ಣಿ

ಅಭ್ಯಾಸ

೧. ಪರಿಚಯ :—

ಇದು ರತ್ನಾಕರವರ್ಣಿಯ ಭರತೇಶವೈಭವದ ಪಾರಣೆ ಸಂಧಿಯಿಂದ ಆರಿಸಿದ ಭಾಗ. ಈ ಕವಿಯ ಕಾಲ ೧೬ನೆಯ ಶತಮಾನ. ಈ ಪದ್ಯದಲ್ಲಿ ಅನೇಕ ಜನ ಸೊಸೆಯರು ಉಪವಾಸ ಮಾಡುತ್ತಿದ್ದಾರೆ. ಇವರ ಉಪವಾಸವ್ರತ ಅತ್ತೆಗೆ ಗೊತ್ತಾಗಿದೆ. ಅವಳು ಇವರ ಮನಸ್ಸನ್ನು ಪರೀಕ್ಷಿಸಲು ಏಕೆ ಉಪವಾಸ ಮಾಡುತ್ತೀರಿ ಎನ್ನುತ್ತಾಳೆ. ಅವರು ತಮ್ಮ ಪತಿಯ ವ್ರತದಲ್ಲಿ ಭಾಗಿಗಳಾಗಲು ಹೀಗೆ ಮಾಡುತ್ತೇವೆ, ಎನ್ನುತ್ತಾರೆ. ಅತ್ತೆಗೆ ಸಂತೋಷವಾಗುತ್ತದೆ. ಅವರೆಲ್ಲರನ್ನೂ ಆಶೀರ್ವದಿಸುತ್ತಾಳೆ--ಎಂಬ ಕಥಾ ಭಾಗವಿದೆ.

೨. ಕಠಿನ ಪದಗಳ ಅರ್ಥ :—

ತಂಡ = ಗುಂಪು ; ಒಸೆ = ಪ್ರೀತಿಸು ; ತಣಿ = ತೃಪ್ತಿಪಡು, ಸಂತೋಷಗೊಳ್ಳು ; ಒತ್ತು = ಹತ್ತಿರ, ಪಕ್ಕ ; ಪಜ್ಜೆ = ಪಾದ ; ನೊಸಲು = ಹಣೆ; ಪಳಪಳಚನೆ = ಒಟ್ಟಿಗೆ (ಅನುಕರಣಶಬ್ದ) ; ಒಪ್ಪಚ್ಚಿ = ಒಂದೇ ಭಾವನೆಯಿಂದ ; ಒಳಗು = ಮನಸ್ಸು ; ದಂಡಿಸು = ಶಿಕ್ಷಿಸು, ಆಯಾಸಪಡಿಸು ; ನಿರ್ಭುಕ್ತಿ = ಉಪವಾಸ ; ಆತ್ಮಾರ್ಥ = ಆತ್ಮವನ್ನು ತಿಳಿದುಕೊಳ್ಳುವ ಬಯಕೆ ; ಮದಮುಖಿ = ಅಹಂಕಾರದ ಕಡೆಗೆ ಗಮನ ವಿರುವವನು ; ಅಣುಗ = ಮಗ ; ಬೀಗು = ಸಂತೋಷಪಡು ; ಸಲ್ಲೀಲೆ = ಒಳ್ಳೆಯ ಆಟ; ಅಣ್ಮ = ಪತಿ, ಒಡೆಯ; ಸುವಿವೇಕ = ಒಳ್ಳೆಯ ತಿಳಿವಳಿಕೆ ; ಅವನಿ = ಭೂಮಿ; ಅವಿವೇಕಿ = ತಿಳಿಗೇಡಿ; ಭೋಗ = ಸುಖ ; ಮಾನಿನಿ = ಹೆಂಗಸು; ಹಸಿಯಿಸು = ಉಪವಾಸವಿಡು ; ಇನಿತು = ಇಷ್ಟು ; ಪ್ರಯಾಸ = ಆಯಾಸ ; ಸುವ್ರತ = ಒಳ್ಳೆಯ ವ್ರತ ; ಮುದವೆರು = ಸಂತೋಷ ಹೊಂದು.

೩. ನುಡಿಗಟ್ಟುಗಳು :—

ಹೊಸಪರೆಯ = ನವಪ್ರಾಯ, ಜಿನಜಿನ = ಶಿವಶಿವ, ಕೃಷ್ಣಕೃಷ್ಣ, ರಾಮರಾಮ ಎಂದಂತೆ ಜೈನರು ಹೇಳುವ ಮಾತು.

೪. ಈ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :—

(೧) ಅತ್ತೆಯನ್ನು ಸೊಸೆಯರು ಹೇಗೆ ಸ್ವಾಗತಿಸಿದರು ?

(೨) ಅತ್ತೆಯ ಮನಸ್ಸು ಏನನ್ನು ಆಲೋಚಿಸಿತು ?

(೩) ಸೊಸೆಯರ ಮೇಲೆ ಅತ್ತೆಯ ಆಕ್ಷೇಪಣೆ ಏನು ?

(೪) ಸೊಸೆಯರ ಉತ್ತರವಾವುದು ?

(೫) ಸೊಸೆಯರನ್ನು ಅತ್ತೆ ಏನೆಂದು ಹರಸಿದಳು ?

೬. ನೂಲೊಲ್ಲ್ಯಾಕಽ ಚೆನ್ನೀ

ಗಂಡ—ನೂಲೊಲ್ಲ್ಯಾಕಽ ಚೆನ್ನೀ । ನೂಲೊಲ್ಲ್ಯಾಕಽ ಚೆನ್ನೀ ॥
ಹೆಂಡತಿ—ರಾಟಲಿಲ್ಲೋ ಜಾಣಾ । ರಾಟಲಿಲ್ಲೋ ಜಾಣಾ ॥
ಕತೆಗಾರ—ಮನಿಯಾನ ಬಂಡೀ ಮುರಿಸಿ । ಮನಿಯಾನ ಬಂಡೀ ಮುರಿಸಿ ॥
ರಾಟೀ ಮಾಡಿಸಿ ಕೊಟ್ಟಾ । ರಾಟೀ ಮಾಡಿಸಿ ಕೊಟ್ಟಾ ॥

ಗಂಡ—ನೂಲೊಲ್ಲ್ಯಾಕಽ ಚೆನ್ನೀ । ನೂಲೊಲ್ಲ್ಯಾಕಽ ಚೆನ್ನೀ ॥
ಹೆಂಡತಿ—ಕದರಿಲ್ಲೊ ಜಾಣಾ । ಕದರಿಲ್ಲೊ ಜಾಣಾ ॥
ಕತೆಗಾರ—ಕೈಯಾನ ಗುದ್ದಲಿ ಮುರಿಸಿ । ಕೈಯಾನ ಗುದ್ದಲಿ ಮುರಿಸಿ ॥
ಕದರ ಮಾಡಿಸಿ ಕೊಟ್ಟಾ । ಕದರ ಮಾಡಿಸಿ ಕೊಟ್ಟಾ ॥

ಗಂಡ—ನೂಲೊಲ್ಲ್ಯಾಕಽ ಚೆನ್ನೀ । ನೂಲೊಲ್ಲ್ಯಾಕಽ ಚೆನ್ನೀ ॥
ಹೆಂಡತಿ—ಚಿಲ್ಲಿಲ್ಲೊ ಜಾಣಾ । ಚಿಲ್ಲಿಲ್ಲೊ ಜಾಣಾ ॥
ಕತೆಗಾರ—ಮನಿಯಾನ ಕೋಣಾವ ಕಡಿಸಿ। ಮನಿಯಾನ ಕೋಣಾವ ಕಡಿಸಿ ॥
ಚಿಲ್ಲು ಮಾಡಿಸಿ ಕೊಟ್ಟಾ । ಚಿಲ್ಲು ಮಾಡಿಸಿ ಕೊಟ್ಟಾ ॥

ಗಂಡ—ನೂಲೊಲ್ಲ್ಯಾಕಽ ಚೆನ್ನೀ । ನೂಲೊಲ್ಲ್ಯಾಕಽ ಚೆನ್ನೀ ॥
ಹೆಂಡತಿ— ಕಟ್ಟ ಇಲ್ಲಲೊ ಜಾಣಾ । ಕಟ್ಟ ಇಲ್ಲಲೊ ಜಾಣಾ ॥
ಕತೆಗಾರ—ಊರಾನ ಒಡ್ಡರ ಕರೆಸಿ । ಊರಾನ ಒಡ್ಡರ ಕರೆಸಿ ॥
ಕಟ್ಟೀ ಕಟ್ಟಿಸಿ ಕೊಟ್ಟಾ । ಕಟ್ಟೀ ಕಟ್ಟಿಸಿ ಕೊಟ್ಟಾ ॥

ಗಂಡ—ನೂಲೊಲ್ಯಾಕs ಚೆನ್ನೀ । ನೂಲೊಲ್ಯಾಕs ಚೆನ್ನೀ ॥
ಹೆಂಡತಿ—ಗುಗ್ಗರಿಲ್ಲೋ ಜಾಣಾ । ಗುಗ್ಗರಿಲ್ಲೋ ಜಾಣಾ ॥
ಕತೆಗಾರ—ಗೋದಿ ಕಡಲಿ ತರಿಸಿ । ಗೋದಿ ಕಡಲಿ ತರಿಸಿ ॥
ಗುಗ್ಗರಿ ಹಾಕಿಸಿ ಕೊಟ್ಟಾ । ಗುಗ್ಗರಿ ಹಾಕಿಸಿ ಕೊಟ್ಟಾ ॥
ಗಂಡ—ನೂಲೊಲ್ಯಾಕs ಚೆನ್ನೀ । ನೂಲೊಲ್ಯಾಕs ಚೆನ್ನೀ ॥
ಹೆಂಡತಿ—ನನಗೆ ಬರೋದಿಲ್ಲೊ ಜಾಣಾ । ನನಗೆ ಬರೋದಿಲ್ಲೊ ಜಾಣಾ ॥

—ಜಾನಪದಗೀತೆಗಳು

ಅಭ್ಯಾಸ

೧. ಪರಿಚಯ :—

ಇದೊಂದು ಜಾನಪದ ಗೀತೆ. ಮೂಲ ಗೀತೆಯೊಳಗಿಂದ ಎರಡು ಪದ್ಯಗಳನ್ನು ಬಿಟ್ಟು ಕೊಡಲಾಗಿದೆ. ಅದರಿಂದ ಹಾಡಿಗೆ ಯಾವ ಕೊರತೆಯೂ ಉಂಟಾಗಿಲ್ಲ. ಹೆಂಡತಿಯು ತಾನು ನೂಲದಿರುವದಕ್ಕೆ ಹೇಳುವ ಕುಂಟು ನೆಪಗಳನ್ನು ಗಂಡನು ಸತ್ಯವೆಂದೇ ಭಾವಿಸಿ ಅವುಗಳನ್ನು ಪೂರೈಸುತ್ತಾನೆ. ಕೊನೆಗೆ ಅವಳು ನೂಲಲು ಬರುವುದಿಲ್ಲವೆಂದೇ ಹೇಳುತ್ತಾಳೆ.

೨. (ಅ) ಕಠಿನ ಶಬ್ದಗಳ ಅರ್ಥ:—

ಬಂಡಿ = ಗಾಡಿ. ಚಿಲ್ಲು = ತೊಗಲಿನ ಬಿಲ್ಲೆ. ಗುಗ್ಗರಿ = ತಿನ್ನುವ ತಿಂಡಿ. ಕಾಳು. ನಡು = ಸೊಂಟ. ಟೊಂಕ.

(ಆ) (i) ಚೆನ್ನಿ ಅಂದರೆ ಚೆಲುವೆ. ಆದರೆ ಆ ಜಾಣನ ಹೆಂಡತಿಯ ಹೆಸರೇ ಚೆನ್ನಿ ಎಂದಿತ್ತು.

(ii) ಗಂಡನನ್ನು ಚೆನ್ನಿ ಜಾಣನೆಂದು ಸಂಬೋಧಿಸಿದ್ದು ಗೌರವಕ್ಕಾಗಿ. ಆದರೆ ಅವನು ಜಾಣನಾಗಿದ್ದನೇ—ಎಂಬ ಸಂಶಯವು ಈ ಹಾಡು ಕೇಳಿದವರಿಗೆ ಬಾರದಿರುವುದಿಲ್ಲ.

(iii) ರಾಟೆಯೊಡನೆ ಕದಿರು, ಚಿಲ್ಲು ಮೊದಲಾದುವುಗಳನ್ನು ತೋರಿಸಿದರೆ, ಅವುಗಳ ಅರ್ಥ ಸ್ಪಷ್ಟವಾಗುತ್ತದೆ.

೩. ವಿಶೇಷ ಓದು :—

(೧) "ಮಂಗ್ಯಾ ಬಂಗೇಡಿ ನನ್ನ ಸಂಪತ್ತೇರ ಕಂಡರೆ, ಮುಗ್ಗುಲುರಿಯುತ್ತೈತೇ" ಎನ್ನುವ ಹಾಡನ್ನು ಸಂಗ್ರಹಿಸಿ ಓದಿರಿ. ಅದು ಹಿಂದೆ "ಜಯಕರ್ನಾಟಕ"ದಲ್ಲಿ ಪ್ರಕಟವಾಗಿದ್ದಿತು.

೨) "ಬೇಸರಿಕೆಯ ಪತಿವ್ರತೆ" ಎಂಬ ಕಥೆಯನ್ನು ಈ ಸಂದರ್ಭದಲ್ಲಿ ಅವಶ್ಯವಾಗಿ ಓದಬಹುದಾಗಿದೆ. ಅದು ಧಾರವಾಡದ "ಬಾಲಮಿತ್ರ" ಎಂಬ ಮಾಸಪತ್ರಿಕೆಯಲ್ಲಿ ಅಚ್ಚಾಗಿದೆ.

೩) "ಜೀವನ ಸಂಗೀತ" ದಲ್ಲಿ ಬಂದ "ಬಸುರಿದ್ದೀನ್ಹೆಸರನೇನು ಇಡೋಣ" ಎಂಬ ಲಾವಣಿಯನ್ನು ಓದಿ ತಿಳಿಯಬಹುದಾಗಿದೆ.

೪) ಇದನ್ನು ಬಾಯಿಪಾಠ ಮಾಡಿ.

---

೭. ಪರೀಕ್ಷೆಯ ಸಮಯ

ಸತ್ವವನು ಪರಕಿಸುವ ಸಮಯ ಬಂದಿಹುದು
ಬಲ ಕುಶಲ ಸಾಹಸಗಳಿಹವೆ ನೋಡು
ಆರು ಯೋಜನ ನೀರನೀಜಿ ಬರಬಲ್ಯಾ
ನೂರು ಮೈಲಿಯ ಓಟ ಓಡಬಲ್ಯಾ
ಮೇರು ಹಿಮಗಿರಿ ಶಿಖರವೇರಬಲ್ಯಾ
ವೈರಿ ಶಿಬಿರದೊಳರಿಯ ಮುತ್ತಬಲ್ಯಾ
ಕಾಡುಕೋಣದ ಬೇಟೆಯಾಡಬಲ್ಯಾ
ಕೋಡು ಬಂಡೆಗಳೆತ್ತಿ ಬಿಸುಡಬಲ್ಯಾ
ಬೀಸು ಬಲೆಯಲಿ ಹುಲಿಯ ಹಿಡಿಯಬಲ್ಯಾ
ಕೇಸರಿಯ ಕೆಣಕಿ ನೀ ಸೆಣಸಬಲ್ಯಾ
ದಂತಿ ಸಲಗನ ಹಿಡಿದು ಕಟ್ಟಬಲ್ಯಾ
ಪಂಥದಲಿ ಮಲ್ಲರನು ಮುರಿಯಬಲ್ಯಾ
ಸಿಡಿಲ ಸಮ್ಮುಖದಿ ನೀ ನಡುಗದಿರಬಲ್ಯಾ
ಉರಿವ ಪಾಳೆಯ ಹೊಕ್ಕು ಉಳಿಸಬಲ್ಯಾ
ಉರಿವಗ್ನಿಮುಖಿಯಲ್ಲಿ ಧುಮುಕಬಲ್ಯಾ
ಮೂರು ಲೋಕವು ಮಲೆತು ಕ್ರೋಧ ಬೆಳಸಿದರೂ
ಸ್ಥೈರ್ಯದಿಂದೊರ್ವನೇ ನಿಲಲುಬಲ್ಯಾ
ಗುಡುಗು ಗರ್ಜನೆಯಣಗೆ ಅಬ್ಬರಿಸಬಲ್ಯಾ
ಬಿಡಗೊಂಡ ಸ್ವರ್ಗವನು ಇಳಿಸಬಲ್ಯಾ

—ವಿ. ಸೀತಾರಾಮಯ್ಯ

ಟಿಪ್ಪಣಿ

೧. ಕವಿಯ ವಿಚಾರ :—ಶ್ರೀ ವಿ. ಸೀತಾರಾಮಯ್ಯನವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡದ ಪ್ರಾಧ್ಯಾಪಕರಾಗಿದ್ದು ನಿವೃತ್ತಿ ಹೊಂದಿ ಪೊನ್ನಾವರದ ಕಾಲೇಜಿನಲ್ಲಿ ಪ್ರಿನ್ಸಿಪಾಲರಾಗಿದ್ದರು. ಕನ್ನಡದ ಹಿರಿಯ ಲೇಖಕರಲ್ಲಿ ಇವರು ಪ್ರಸಿದ್ಧರಾದವರು. "ಗೀತಗಳು", "ದ್ವೀಪಗಳು", "ದ್ರಾಕ್ಷಿ-ದಾಳಿಂಬೆ", "ನೆಳಲು ಬೆಳಕು", "ಹೆಜ್ಜೆಪಾಡು", ಎಂಬ ಕವನಸಂಕಲನಗಳನ್ನೂ "ಆಗ್ರಹ", "ಸೊಹ್ರಾಬ್-ರುಸ್ತುಂ" ಎಂಬ ನಾಟಕಗಳನ್ನೂ; ಕೆಲವು ವಿಮರ್ಶೆಯ ಗ್ರಂಥಗಳನ್ನೂ ಬರೆದಿದ್ದಾರೆ. ಶ್ರೀ ವಿ. ಸೀ. ಅವರ ಕವನಗಳಲ್ಲಿ ಬಹುಪಾಲು ಹಾಡಲು ತಕ್ಕವಾಗಿವೆ.

೨. ಕಠಿನ ಪದಗಳ ಅರ್ಥ :—

ಸತ್ವ=ಶಕ್ತಿ, ಸಾಹಸ; ವೈರಿ=ಶತ್ರು; ಬೀಸುಬಲೆ=ಬೇಟೆಯ ಒಂದು ಸಾಧನ; ಪಂಥ=ಪಟ; ಪರಿಕಿಸು=ಪರೀಕ್ಷಿಸು; ಶಿಬಿರ=ಪಾಳೆಯ; ದಂತಿ=ಆನೆ; ಅದಟು=ಪರಾಕ್ರಮ; ಕ್ರೋಧ=ಕೋಪ; ಅಣಗು=ಅಡಗು

ಅಭ್ಯಾಸ

(೧) ಇಲ್ಲಿ ಹೆಸರಿಸಿರುವ ಸಾಹಸಗಳಾವುವು ? ಹೇಳಿ.

(೨) ಒಂದೊಂದು ಸಾಹಸದಲ್ಲಿಯೂ ಇರುವ ಕಷ್ಟವೇನು ?

(೩) ಇಂಥ ಸಾಹಸ ಮಾಡಿದವರ ಹೆಸರು ನಿಮಗೆ ಗೊತ್ತೆ ?

(೪) ಇದನ್ನು ಬಾಲಕರು ಕೂಡಿ ಹಾಡಬಹುದು. ಕೇಳಲು ಚೆನ್ನಾಗಿರುತ್ತದೆ. ಅಥವಾ ಇಬ್ಬರು ಹುಡುಗರು ಒಬ್ಬರನ್ನೊಬ್ಬರು ಎದುರಿಸಿ ಒಬ್ಬೊಬ್ಬರು ಒಂದೊಂದು ಸಾಹಸವನ್ನು ಮಾಡಬಲ್ಲವರಂತೆ, ಎದುರಾಳಿಯನ್ನು ಮೂದಲಿಸುವರಂತೆ, ನಟನೆ ಮಾಡಿದರೆ ಬಹು ಸ್ವಾರಸ್ಯವಾಗಿರುತ್ತದೆ.

೮. ಕನಸಿನೊಳಗೊಂದು ಕನಸು

(ತಾಯಿ ಮಕ್ಕಳ ಸಂವಾದ)

೧

“ಯಾರು ನಿಂದವರಲ್ಲಿ ತಾಯೆ” ಎಂದೆ!
“ಯಾರು ಕೇಳುವರೆನಗೆ, ಯಾಕೆ ತಂದೆ?”

೨

“ಬೇಸರದ ದನಿಯೇಕೆ ಹೆಸರ ಹೇಳಲ್ಲ”
“ಹೆಸರಾಗಿಯೂ ಕೂಡ ಹೇಳ ಹೆಸರಿಲ್ಲ.”

೩

“ನೀನಾರ ಮನೆಯವಳು ಮುತ್ತೈದೆ ಹೇಳು.”
“ನಾನಾರ ಮನೆಯವಳೊ ಬಯಲನ್ನೆ ಕೇಳು.”

೪

“ಆಪ್ತರಿಲ್ಲವೆ ನಿನಗೆ ಇಷ್ಟರಿಲ್ಲೇ?”
“ಗುಪ್ತರಾದರೊ ಏನೊ ಇಷ್ಟರಲ್ಲೇ!”

೫

“ಇರುವರೇ ಇದ್ದರೇ ಮಕ್ಕಳೆಂಬವರು?”
“ಇರುವರೆಂದರು ಕೂಡ ಯಾರು ನಂಬುವರು?”

೬

“ಮನೆಯಿಲ್ಲವೇ ಇರಲು ಪರದೇಶಿಯೇನು?”
“ಮನೆಯೆ ಮುನಿದದ್ದಿರಲು ಯಾ ದೇಶವೇನು?”

೭

“ನಿನ್ನ ಮಾತಿನಲಿಹುದು ಒಡಪಿನಿಂದ!”
“ನನ್ನ ಹತ್ತಿರದೊಂದೆ ಉಳಿದಿಹುದು ಕಂದ.”

೮

“ರಾಜಮುಖಿ ನಿನ್ನಲ್ಲಿ ರಾಜಕಳೆಯಿಹುದು!”
“ಸಾಜವಾದರು ಪಕ್ಷವಿದು ವದ್ಯವಹುದು!”

೯

“ಯಾವುದಾದರು ನಾಡದೇವಿಯೋ ನೀನು?”
“ಭಾವುಕರ ಕಂಗಳಿಗೆ ದೇವಿಯೇ ನಾನು!”

೧೦

"ಈಗ ಬಂದಿಹುದೇಕೆ ಏನು ಬೆಸನ ?"
"ಯೋಗವಿಲ್ಲದೆ ತಿಳಿಯದೆನ್ನ ವೆಸನ !"

೧೧

"ಹಾದಿ ಯಾವುದು ಹೇಳು, ಯಾವ ಯೋಗ ?"
"ಆದಿ ಅಂತವು ಇಲ್ಲದಂಥ ತ್ಯಾಗ"

೧೨

"ಬೇಡಬಂದಿಹೆ ಏನು ಏನಾದರೊಂದು ?"
"ಬೇಡಿದರೆ ಬೇಡಿದುದ ಕೊಡುವೆಯಾ ಇಂದು ?"

೧೩

"ಅಹುದು ಕೊಡುವೆನು ಎಂದು ನಾನೆನ್ನಬಹುದೇ ?"
"ಬಹುದು-ಗಿಹುದಿನ ಶಂಕೆ ವೀರನಹುದೇ ?"

೧೪

"ಹಿಂಜರಿವ ಅಂಜಿಕೆಯು ಹಿಡಿದಿಹುದು ಕೈಯ,"
"ಮುಂಜರಿವ ಹುರುಪಿನೊಡ ಮುಂದೆ ಬಾರಯ್ಯ."

೧೫

"ಇಲ್ಲೆನ್ನಲಾರೆನಹುದೆನ್ನಲಮ್ಮೆ"
"ಬಲ್ಲವರು ದೈವವನು ಪರಕಿಸುವರೊಮ್ಮೆ !"

೧೬

"ಚಂಡಿ ಚಾಮುಂಡಿ ಪೇಳ್ ಬೇಕಾದುದೇನು ?"
"ಗಂಡುಸಾದರೆ ನಿನ್ನ ಬಲಿ ಕೊಡುವೆಯೇನು ?"

* * *

೧೭

"ಮನವು ನಡುಗಿತು ತನುವು ನವಿರಿಗೊಳಗಾಯ್ತು :
ನೆನವು ನುಗ್ಗಿತು—ಹೊರಗೆ ಕಂಡೆ—ಬೆಳಗಾಯ್ತು.

—ಅಂಬಿಕಾತನಯದತ್ತ

ಅಭ್ಯಾಸ

೧. ಪರಿಚಯ :—

"ಅಂಬಿಕಾತನಯದತ್ತ" ಎಂಬ ಕಾವ್ಯನಾಮದಿಂದ ಹೆಸರಾಗಿರುವ ಶ್ರೀ ದ. ರಾ. ಬೇಂದ್ರೆ ಯವರ 'ಗರಿ' ಕವನ ಸಂಗ್ರಹದಿಂದ ಈ ಕವಿತೆಯನ್ನು ಆಯ್ದುಕೊಳ್ಳಲಾಗಿದೆ.

ನಮ್ಮ ಭಾರತ ದೇಶವು ಸ್ವತಂತ್ರವಾಗುವುದಕ್ಕೂ ಮೊದಲು ಕನ್ನಡನಾಡು ಹಲವು ರಾಜ್ಯಗಳಲ್ಲಿ ಹಂಚಿಹೋಗಿತ್ತು. ಆದ್ದರಿಂದ ಬಹಳ ಹಿಂದುಳಿದಿತ್ತು. ಅಂತಹ ಕನ್ನಡನಾಡಿನ ಸ್ಥಿತಿಯು ಕವಿಗೆ ಸಂಕಟವುಂಟುಮಾಡಿತು. ಆಗ ಈ ಕವನ ಕವಿಯಿಂದ ಪದ್ಯವಾಗಿ ಹೊರಬಂದಿದೆ. ಕನ್ನಡ ನಾಡಿನ ಮಗನ ಕನಸಿನಲ್ಲಿ ಕನ್ನಡ ನಾಡೆಂಬ ತಾಯಿ ಕಾಣಿಸಿಕೊಂಡಂತೆ. ಅವಳು ಮಗನ ಪ್ರಶ್ನೆಗಳಿಗೆ ಉತ್ತರ ಕೊಡುವಂತೆ ಈ ಕವನದಲ್ಲಿ ಇದೆ.

೨. (ಅ) ಕಠಿನ ಪದಗಳ ಅರ್ಥ :—

ಕನಸು = ಕನಸಿನೊಳಗಿನ ನೋಟ. ಕಾಣ್ಕೆ; ಮುತ್ತೈದೆ = ಸುಮಂಗಲೆ; ಆಪ್ತ = ಹತ್ತಿರದವ, ಬಂಧು; ಇಷ್ಟ = ಬೇಕಾದವ, ಗೆಳೆಯ : ರಾಜಮುಖಿ = ಚಂದ್ರನಂತೆ ಚೆಲುವಾದ ಮುಖವುಳ್ಳಾಕೆ, ಚಲುವೆ; ರಾಜಕಳೆ = ರಾಜಲಕ್ಷಣ ; ಸಾಜ = ಸಹಜ (ತ್ಭ): ಪಕ್ಷ = ಒಂದು ಗುಂಪು. ತಿಂಗಳ ಅರ್ಧಭಾಗ; ಭಾವುಕ = ಭಾವನಾ ಪ್ರಧಾನನಾದವ; ಬೆಸನ = ಕೆಲಸ; ಯೋಗ = ತದೇಕ ಧ್ಯಾನ; ವೆಸನ = ವ್ಯಸನ (ತ್ಭ) ಚಿಂತೆ : ಶಂಕಿ = ಸಂದೇಹವುಳ್ಳವ ; ಮುಂಜರಿ = ಮುಂದೆ ಸರಿ, ಮುಂದುವರಿ ; ಪರಕಿಸು = ಪರೀಕ್ಷಿಸು ; ಚಂಡಿ = ಹಟಗಾರ್ತಿ; ಚಾಮುಂಡಿ = ದುರ್ಗಿ, ಭೈರವಿ ; ನವಿರು = ರೋಮಾಂಚ, ಮೈಕೂದಲು ನಿಗುರಿ ನಿಲ್ಲುವಿಕೆ.

(ಆ) ನುಡಿಗಟ್ಟುಗಳ ಅರ್ಥ :—

ಹೆಸರಾಗು = ಪ್ರಸಿದ್ಧವಾಗು, ಕೀರ್ತಿಗಳಿಸು :
ಹೇಳ ಹೆಸರಿಲ್ಲದಂತಾಗು = ಹಾಳಾಗು.

೩. ಪ್ರಶ್ನೆಗಳು :—

(ಅ) ಕನ್ನಡ ತಾಯಿಗೆ ಏಕೆ ದುಃಖವಾಗಿದೆ ?
(ಆ) ಆಕೆ ಕನ್ನಡಿಗನ ಕನಸಿನಲ್ಲಿ ಕಾಣಿಸಿಕೊಂಡುದು ಏಕೆ ?

೪. ವಿಶೇಷ ಓದು :—

(ಅ) 'ಅಂಬಿಕಾತನಯದತ್ತ'ರು ಕನ್ನಡ ನಾಡಿನ ಬಗ್ಗೆ ಬೇರೆ ಕೆಲವು ಉತ್ತಮ ಕವನ ಬರೆದಿದ್ದಾರೆ. ಅವುಗಳನ್ನು ಸಂಗ್ರಹಿಸಿ.
(ಆ) ಶ್ರೀ ಬಿ. ಎಂ. ಶ್ರೀಕಂಠಯ್ಯನವರ 'ಕನ್ನಡಿಗನ ಕೊರಗು' ಹಾಗೂ ಶ್ರೀ ವಿ. ಕೃ. ಗೋಕಾಕ ('ವಿನಾಯಕ') 'ನಾಡಿನ ಹಾಡು' ಕವನಗಳನ್ನು ಸಂಗ್ರಹಿಸಿ.

೯. ನನ್ನ ಬಯಕೆ

ಸದ್ದಿರದ ಪಸುರುಡೆಯ ಮಲೆನಾಡ ಬನಗಳಲಿ
ಮೊರೆವ ತೊರೆಯೆಡೆಯಲ್ಲಿ ಗುಡಿಸಲೊಂದಿರಲಿ
ಅಲ್ಲಿ ಗಿಳಿ ಗೊರವಂಕ ಕೋಗಿಲೆಗಳಿಂಚರವು
ಕಲೆಯುತಲೆಯಲೆಯಾಗಿ ತೇಲಿ ಬರುತಿರಲಿ
ಅಲ್ಲಿ ಬಳಿ ಪಸಲೆಯಲಿ ದನಗಳಂಬಾ ಎಂಬ
ದನಿಯು-ದನ ಕಾಯುವನ ಕೊಳಲೊಡನೆ ಬರಲಿ
ಅಲ್ಲಿ ಸಿರಿಗನ್ನಡದ ಕಬ್ಬಗಳ ಹಬ್ಬಗಳು
ದಿನ ದಿನವು ಸವಿಯೂಟವಿಕ್ಕುತಿರಲೆನಗೆ
ಬಾಂದಳದಿ ಹಾರಿದರು ಬುವಿಯಲ್ಲಿ ಜಾರುತಿಹ
ರಸಿಕನಾಗಿಹನೊಬ್ಬ ಗೆಳೆಯನಿರಲೆನಗೆ
ಬೈಗಾಗೆ ನಮ್ಮೊಡನೆ ಗಳಪಿಯಲೆದಡ್ಡಾಡೆ
ಗೋಪಾಲನಾಗಿರುವ ತಿಮ್ಮನೆನಗಿರಲಿ

ಮೇಲೆ ಬಾಳನು ಬಿಟ್ಟು ನಾನಳಿದು ಮರೆಯಾಗೆ
ನನ್ನಾಸೆ ಏನೆಂದು ಎಲ್ಲರರಿತಿರಲಿ
ಸಗ್ಗವಿವನೊಳಗೊಂಡಿರಲು ಸಗ್ಗವೆನಗಿರಲಿ
ನರಕವಿವನೊಳಗೊಂಡಿರಲು ನರಕವಿರಲಿ

— ಕುವೆಂಪು

ಅಭ್ಯಾಸ

೧. ಈ ಕವನವನ್ನು ಬರೆದವರು ಕೆ. ವಿ. ಪುಟ್ಟಪ್ಪನವರು. ಇವರ ಕಾವ್ಯನಾಮ ಕುವೆಂಪು. ಇವರು ಕನ್ನಡದಲ್ಲಿ ಕವಿತೆ. ಕತೆ. ಕಾದಂಬರಿ. ನಾಟಕ. ಇತ್ಯಾದಿ ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ನಿವೃತ್ತಿ ಹೊಂದಿ ಈಗ ಮೈಸೂರಿನಲ್ಲಿ ವಾಸಿಸುತ್ತಿದ್ದಾರೆ. 'ಶ್ರೀರಾಮಾಯಣ ದರ್ಶನಂ' ಎಂಬ ಇವರ ಮಹಾಕಾವ್ಯಕ್ಕೆ ಜ್ಞಾನಪೀಠದ ಪ್ರಶಸ್ತಿ ದೊರಕಿದೆ. ಕೊಳಲು, ಪಾಂಚಜನ್ಯ, ನವಿಲು ಮುಂತಾದ ಕವನ ಸಂಕಲನಗಳನ್ನೂ, ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು ಎಂಬ ಕಾದಂಬರಿಗಳನ್ನೂ, ಬೆರಳ್ ಗೆ ಕೊರಳ್ ಎಂಬ ನಾಟಕವನ್ನೂ ಬರೆದಿದ್ದಾರೆ.

೨. ಕಠಿನ ಪದಗಳ ಅರ್ಥ :—

ಪಸಲೆ = ಹುಲ್ಲುಗಾವಲು ; ಕಬ್ಬ = ಕಾವ್ಯ ; ಬಾಂದಳ = ಆಕಾಶ ; ಬುವಿ = ಭೂಮಿ : ಬೈಗು = ಸಂಜೆ ; ಅಳಿ = ಸಾಯು ; ಸಗ್ಗ = ಸ್ವರ್ಗ ; ಪಸುರುಡೆ = ಹಸಿರುಡುಗೆ.

೩. ಈ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :—

(೧) ಕವಿಯ ಆಸೆಯೇನು ?
(೨) ಗೋಪಾಲನಾಗಿರುವ ತಿಮ್ಮನನ್ನು ಕವಿ ಏಕೆ ಅಪೇಕ್ಷಿಸುತ್ತಾರೆ ?
(೩) ಕವಿಯ ಭಾವನೆಯಂತೆ ಯಾವುದು ಸ್ವರ್ಗ, ಯಾವುದು ನರಕ ?
(೪) ಹೀಗೆಯೇ ನಿಮ್ಮ ಆಸೆಯೇನು ಎಂಬುದನ್ನು ಪಟ್ಟಿ ಮಾಡಿ.

೪. ಈ ಪದ್ಯವನ್ನು ಬಾಯಿಪಾಠ ಮಾಡಿ.

೧೦. ಗೆಳೆತನ

ಗೆಳೆತನದ ಸುವಿಶಾಲ ಆಲದಡಿ ಪಸರಿಸಿಹ
ತಣ್ಣೆಳಲು ತಂಪಿನಲಿ ತಂಗಿರುವೆನು :
ಜೀವನದನಂತ ದುರ್ಭರ ಬವಣೆ ನೋವುಗಳ
ಕಾವುಗಳ ಮೌನದಲಿ ನುಂಗಿರುವೆನು.
ಗೆಳೆತನವೆ ಇಹಲೋಕಕಿರುವ ಅಮೃತ
ಅದನುಳಿದರೇನಿಹುದು—ಜೀವನ್ಮೃತ ! ೧

ಇಲ್ಲಿ ವಂಚನೆಯಿಲ್ಲ ಚಂಚಲತೆಯಿನಿತಿಲ್ಲ
ಮೇಲುಕೀಳುಗಳೆಂಬ ಭೇದವಿಲ್ಲ
ಅಹಮಿಕೆಯ ನೆವವಿಲ್ಲ ದ್ವೇಷ ಗುಣಮಣವಿಲ್ಲ
ಸಣ್ಣತನ ಸಂಕೋಚ ಮೊದಲಿಗಿಲ್ಲ
ಮನವು ಬಾನಗಲ. ಎದೆ ತಿಳಿಗೊಳದೊಲು
ಭಾವ ಶುದ್ಧಸ್ಫಟಿಕ—ಬೆಳುದಿಂಗಳು ! ೨

ಉಪ್ಪಿಗಿಂತಲು ರುಚಿಯು ತಾಯಿಗಿಂತಲು ಬಂಧು
ಇಲ್ಲೆಂಬ ಗಾದೆ ನುಡಿ ಕೇಳಿರುವೆನು.
ಗೆಳೆತನದ ಶುಚಿ ರುಚಿಯು ಇವಕು ಮಿಗಿಲಾಗಿಹುದು
ಎಂಬ ಸಾಹಸ ಮಾಡೆ ದೋಷವೇನು ?
ಕಂಡಕಂಡವರೇನು ಬಲ್ಲರಿದನು
ಉಂಡವನು ಕಂಡಿಹನು ಇದರ ಹದನು— ೩

ಹೇಗೋ ಹೇಗೋ ಹೆಗಲುಗೊಟ್ಟು ಬಂದಿಹ ಕೂರ್ಪು
ಆಗು ಹೋಗುಗಳೆಂಗೆ ಬಾಗದಂತೆ.
ಸುಖಕೆ ಸಂತಸಬಟ್ಟು, ದುಃಖದಲಿ ಸಹಭಾಗಿ—
ಯಾಗೆ ಜೀವನ ರಸದ ಪಾಕದಂತೆ—
ಸರಸವಿರಸವನೆಲ್ಲ ಅಪ್ಪುತಯ್ದು
ಬಾಳುವರು ಗಂಧದೊಲು ಜೀವ ತೆಯ್ದು— ೪

ಇನಿವಿರಿದು ಗೆಳೆತನದ ಗುಟ್ಟಿಹುದು ನಲ್‌ಗೆಳೆಯ
ಬಿನ್ನಣದ ಸುಡಿಯಲ್ಲ, ಎದೆಯ ಮೀಟಿ
ಜೀವ ಜೀವಕೆ ಇಂಬುಕಯ್ವುವರು ನಾಲ್ವರಿರೆ
ಚತುರಂಗ ಬಲವಿದಕೆ ಯಾವ ಸಾಟಿ ?
ಗೆಳೆತನವೆ ಚಿರಬಾಳ ಸಂಜೀವಿನಿ
ವಿಶ್ವದಂತಃಕರಣ ಮಂದಾಕಿನಿ !

—ಚೆನ್ನವೀರ ಕಣವಿ

ಅಭ್ಯಾಸ

೧. ಪರಿಚಯ :—

ಕವಿ ಶ್ರೀ ಚೆನ್ನವೀರ ಕಣವಿ ಅವರ ' ಆಕಾಶಬುಟ್ಟಿ ' ಎಂಬ ಕವನಸಂಗ್ರಹದಿಂದ ಈ ಕವಿತೆಯನ್ನು ಆರಿಸಿಕೊಳ್ಳಲಾಗಿದೆ.

ನಮ್ಮ ಬದುಕಿನ ಸುಖದುಃಖಗಳಲ್ಲಿ ಪಾಲುಗಾರರಾಗುವಂಥ ನಮ್ಮ ಪ್ರೀತಿಯ ಬಂಧು ಬಾಂಧವರು, ಹಿತಚಿಂತಕರು ಅನೇಕ. ಅಂಥವರಲ್ಲೆಲ್ಲ ತಾಯಿಯೇ ಮಿಗಿಲಾದ ಬಂಧು ಎಂಬುದು ಸರ್ವಸಾಮಾನ್ಯವಾದ ನಂಬಿಕೆ. ಆದರೆ ಅದನ್ನು ಮಿಕ್ಕು ಮೀರಿಸುವಂಥ ಬಾಂಧವ್ಯ ' ಗೆಳೆತನ 'ದ್ದಾಗಿರಬಹುದು—ಎಂಬ ಭಾವ ಈ ಕವನದಲ್ಲಿ ಅತ್ಯಂತ ಸೊಗಸಾಗಿ ಒಡಮೂಡಿದೆ.

೨. (ಅ) ಕಠಿನ ಪದಗಳ ಅರ್ಥ :—

ಪಸರಿಸು = ಹರಡು, ಹಬ್ಬು ; ತಂಗು–ಬೀಡಾರ ಮಾಡು, ನಿಲ್ಲು ; ದುರ್ಭರ = ತಾಳಲಾಗದ ಸಹಿಸಲು ಅಸಾಧ್ಯವಾದ ; ಜೀವನ್ಮೃತ = ಬದುಕಿದ್ದರೂ ಸತ್ತಂತೆ ಇರುವವ ; ಅಹಮಿಕೆ = ' ನಾನು ' ಎಂಬುವ ಹೆಮ್ಮೆ, ಸೊಕ್ಕು ; ಅಣು = ಒಂದಿಷ್ಟು ; ಸ್ಫಟಿಕ = ಪಟಿಕ (ದ್ಭ.). ಒಂದು ಬಗೆಯ ಮಿಂಚುವ ಕಲ್ಲು ; ಶುಚಿ = ಪಾವಿತ್ರ್ಯ, ನಿರ್ಮಲತೆ, ಶುದ್ಧತೆ ; ಕಂಡ ಕಂಡವರು = ಬೇಕುಬೇಕಾದವರು ; ಹದನು = ರೀತಿ, ಸ್ಥಿತಿಗತಿ ; ಕೂರ್ಪು = ಪ್ರೀತಿ, ಸ್ನೇಹ ; ಪಾಕ = ಬೆಂದು ಪಕ್ವವಾದ ವಸ್ತು, ತಿಂಡಿತಿನಿಸು ; ಅಪ್ಪುಕಯ್ದು = ಅಂಗೀಕರಿಸಿ, ಸ್ವೀಕರಿಸಿ : ಇನಿವಿರಿದು = ಇನಿತು ಪಿರಿದು. ಇಷ್ಟು ದೊಡ್ಡದು ; ನಲ್ = ಪ್ರೀತಿಯ ಒಳ್ಳೆಯ ; ಬಿನ್ನಣ = ಬಿನ್ನಾಣ. ಬೆಡಗು ; ಇಂಬುಕಯ್ = ಹಿತವಾಗು, ಹೊಂದಿಸಿಕೊ ; ಚತುರಂಗಬಲ = ಆನೆ, ರಥ, ಕುದುರೆ. ಕಾಲಾಳು ಎಂಬ ನಾಲ್ಕು ಬಗೆಯ ಸೇನಾಬಲ ; ಸಾಟಿ = ಸರಿ ; ಸಂಜೀವಿನಿ = ಸತ್ತವರನ್ನು ಬದುಕಿಸುವ ವನಸ್ಪತಿ ; ಮಂದಾಕಿನಿ = ಮೆಲ್ಲನೆ ಹರಿಯುವ ನದಿ ; ಗಂಗಾನದಿ.

(ಆ) ನುಡಿಗಟ್ಟುಗಳ ಅರ್ಥ :—

ಹೆಗಲುಗೊಡು = ನೆರವು ನೀಡು, ಅನುಕೂಲವಾಗು : ಆಗುಹೋಗು = ಗೆಲ್ಲು ಸೋಲುಗಳು, ಲಾಭನಷ್ಟಗಳು; ಜೀವ ತೇಯು = ಬದುಕನ್ನು ಸಮರ್ಪಿಸು, ದೇಹವನ್ನು ದಣಿಸು.

೩. ಪ್ರಶ್ನೆಗಳು :—

(ಅ) 'ಗೆಳೆತನ'ದಿಂದ ತಮಗೆ ಯಾವ ಲಾಭವಾಗಿದೆಯೆಂದು ಕವಿ ಹೇಳಿದ್ದಾರೆ ?

(ಆ) 'ಗೆಳೆತನ'ದ ಹಿರಿಮೆ ಯಾವುದರಲ್ಲಿ ಹುದುಗಿದೆ ?

(ಇ) ನಿಜವಾದ ಗೆಳೆಯರು ಹೇಗೆ ಬದುಕುವರು ?

೪. (ಅ) 'ತಣ್ಣೆಳಲ ತಂಪಿನಲಿ ತಂಗಿರುವೆನು'
'ಉಂಡವನು ಕಂಡಿಹನು ಇದರ ಹದನು'
'ಇಲ್ಲಿ ವಂಚನೆಯಿಲ್ಲ ಚಂಚಲತೆಯಿನಿತಿಲ್ಲ'

—ಇಲ್ಲಿಯ ಶಬ್ದ ಸೌಂದರ್ಯವನ್ನು ಗಮನಿಸಿರಿ.

(ಆ) ಮೇಲೆ ಎತ್ತಿ ತೋರಿಸಿದಂಥ ಸಾಲುಗಳನ್ನು ಇತರ ಕವನಗಳಿಂದ ಸಂಗ್ರಹಿಸಿರಿ.

(ಇ) (i) 'ಮನವು ಬಾನಗಲ. ಎದೆ ತಿಳಿಗೊಳದೊಲು ಭಾವ ಶುದ್ಧಸ್ಫಟಿಕ- ಬೆಳುದಿಂಗಳು !'

(ii) 'ಬಾಳುವರು ಗಂಧದೊಲು ಜೀವ ತೆಯ್ದು !'

—ಇಲ್ಲಿಯ ಅರ್ಥಸೌಂದರ್ಯವನ್ನು ಗಮನಿಸಿರಿ.

(ಈ) 'ಗೆಳೆತನ'ದ ಬಗೆಗಿನ ನಾಣ್ಣುಡಿ ಹಾಗೂ ಜಾಣ್ಣುಡಿಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳಿರಿ.

ಮುದ್ರಣ : [illegible] ಪ್ರಿಂಟರ್ಸ್, ಬೆಂಗಳೂರು
ಪ್ರತಿಗಳು 1,00,000/1990

ಮೂಲಭೂತ ಕರ್ತವ್ಯಗಳು

ಮೂಲಭೂತ ಕರ್ತವ್ಯಗಳು :—ಪ್ರತಿಯೊಬ್ಬ ನಾಗರೀಕನಿಗೂ—

(ಕ) ಸಂವಿಧಾನವನ್ನು ಅನುವರ್ತಿಸುವುದು ಹಾಗೂ ಅದರ ಆದರ್ಶಗಳನ್ನು ಮತ್ತು ಸಂಸ್ಥೆಗಳನ್ನು, ರಾಷ್ಟ್ರಧ್ವಜ ಹಾಗೂ ರಾಷ್ಟ್ರಗೀತೆಯನ್ನೂ ಗೌರವಿಸುವುದು ;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಪೋಷಿಸುವುದು ಮತ್ತು ಅನುಸರಿಸುವುದು :

(ಗ) ಭಾರತದ ಸಾರ್ವಭೌಮತ್ವವನ್ನು, ಐಕ್ಯತೆಯನ್ನು ಮತ್ತು ಅಖಂಡತೆಯನ್ನು ಎತ್ತಿ ಹಿಡಿಯುವುದು ಹಾಗೂ ಸಂರಕ್ಷಿಸುವುದು ;

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ, ಹಾಗೆ ಮಾಡುವುದು ;

(ಙ) ಧಾರ್ಮಿಕ, ಭಾಷಾ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ, ಭಾರತದ ಎಲ್ಲಾ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಸಮಾನ ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟು ಮಾಡುವ ಆಚರಣೆಗಳನ್ನು ಬಿಟ್ಟು ಬಿಡುವುದು :

(ಚ) ನಮ್ಮ ಸಂಮಿಶ್ರ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು ;

(ಛ) ಅರಣ್ಯಗಳು, ಸರೋವರಗಳು ನದಿಗಳು ಮತ್ತು ವನ್ಯಜೀವಿಗಳೂ ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಮೇಲ್ಪಾಟು ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು ;

(ಜ) ವೈಜ್ಞಾನಿಕ ಮನೋಭಾವನೆ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣಾ ಪ್ರವೃತ್ತಿಯನ್ನು ಅಭಿವೃದ್ಧಿಗೊಳಿಸುವುದು :

(ಝ) ಸಾರ್ವಜನಿಕ ಸ್ವತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು :

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಉನ್ನತ ಮಟ್ಟಗಳಿಗೆ ಏರುವುದಕ್ಕಾಗಿ ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಶ್ರೇಷ್ಠತೆಗಾಗಿ ಶ್ರಮಿಸುವುದು :—

—(ಕರ್ತವ್ಯವಾಗಿರತಕ್ಕದ್ದು).

ಬೆಲೆ : ರೂ. 4-00